ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಕೊಲೆಯಾದ ನಿರ್ಭೀತ ಕಾಶ್ಮೀರಿ ಪತ್ರಕರ್ತ

ಶುಜಾತ್ ಬುಖಾರಿ



ಸಂಪುಟ 12 | ಸಂಚಿಕೆ 25 | ಜೂನ್ 18–24, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com






‘ಸಬ್ ಕಾ ಸಾಥ್’ ಎಂಬ ಮಹಾ ಬೊಗಳೆ



ನವ ಉದಾರೀಕರಣದ ದಾಳಿ ಹಿಮ್ಮೆಟ್ಟಿಸುವತ್ತ...





ಮೈತ್ರಿ ಸರ್ಕಾರ ಎತ್ತ ಸಾಗಿದೆ?

ದಲಿತರ ಮೇಲೆ ಬಿಜೆಪಿ ದಮನ



ಎಲ್ಲರಿಗೂ ಬಸ್‌ಪಾಸ್‌ಗಾಗಿ ರಾಜ್ಯಾದ್ಯಂತ ಹೋರಾಟ





ತ್ರಿಪುರಾ:

ಮೂರು ತಿಂಗಳಲ್ಲೇ

ಹತಾಶ ಸ್ಥಿತಿ


ಝಾರ್ಖಂಡ್‌ನಲ್ಲಿ ಮತ್ತೆ ಇಬ್ಬರನ್ನು ಬಡಿದು ಸಾಯಿಸಿದ ಪ್ರಕರಣ–ಎಐಕೆಎಸ್ ಖಂಡನೆ
"ಸುಪ್ರಿಂ ಕೋರ್ಟ್ ಕಾವಲುಕೋರರಿಂದ ನಾಗರಿಕರ ಜೀವರಕ್ಷಣೆಗೆ ಮಧ್ಯಪ್ರವೇಶಿಸಬೇಕು"

ಜೂನ್ 14 ರಂದು ಝಾರ್ಖಂಡ್‌ನ ಗೊಡ್ಡ ಜಿಲ್ಲೆಯಲ್ಲಿ ಮುರ್ತಝಾ ಅನ್ಸಾರಿ ಮತ್ತು ಚರ್ಕು ಅನ್ಸಾರಿ ಎಂಬ ಇಬ್ಬರು ಯುವಕರನ್ನು ಒಂದು ಜನಜಂಗುಳಿ ಗೋರಕ್ಷಣೆಯ ಹೆಸರಲ್ಲಿ ಬಡಿದು ಸಾಯಿಸಿದೆ. ಇದು ಆರೆಸ್ಸೆಸ್‌ನ ಸೆಲ್ ಆಳ್ವಿಕೆಯನ್ನು ಬಯಲಿಗೆಳೆದಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಖಂಡಿಸಿದೆ. ಜಾನುವಾರು ಆರ್ಥಿಕದಿಂದ ಬದುಕು ಸಾಗಿಸುತ್ತಿರುವ ಅಮಾಯಕರ ಜೀವಗಳನ್ನು ಗೋವಿನ ಹೆಸರಿನಲ್ಲಿ ಕಾವಲುಕೋರರು ತೆಗೆಯುತ್ತಿರುವುದನ್ನು ಒಪ್ಪಲು ಸಾಧ್ಯವಿಲ್ಲ, ಪೋಲೀಸರೂ ಕೊಲೆಗಡುಕರೊಂದಿಗೆ ಶಾಮೀಲಾಗುತ್ತಾರೆ, ಸಾಯಿಸಲ್ಪಟ್ಟವರ ಮೇಲೆಯೇ ಕೇಸುಗಳನ್ನು ದಾಖಲಿಸುತ್ತಾರೆ, ಅತ್ತ ಕೊಲೆಗಡುಕರ ಪರವಾಗಿ ನೆವಗಳನ್ನು ಹುಡುಕಲು ಸರ್ವಪ್ರಯತ್ನ ನಡೆಸುತ್ತಾರೆ ಎಂದು ಎಐಕೆಎಸ್ ಹೇಳಿದೆ.

ಇಂತಹ ಕಾನೂನಿನ ಬಹಿರಂಗ ಉಲ್ಲಂಘನೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಆಳ್ವಿಕೆಯಲ್ಲಿ ಮಾತ್ರ ಸಂಭವಿಸುತ್ತದೆ. ಅವರು 2015 ರ ಆರಂಭದಲ್ಲಿ ದಾದ್ರಿಯಲ್ಲಿ ಮಹಮ್ಮದ್ ಅಖ್ಲಾಖ್‌ನ ಕೊಲೆಯಿಂದ ಆರಂಭಿಸಿ ಈ ರೀತಿ ಅಮಾಯಕರ ಕೊಲೆ ನಡೆದಾಗಲೆಲ್ಲ ಮೌನಧಾರಣೆ ಮಾಡುತ್ತಾರೆ ಎರದು ಎಐಕೆಎಸ್ ಟಿಪ್ಪಣಿ ಮಾಡಿದೆ.

ಇದುವರೆಗೆ ಭಜರಂಗ್ ದಳ ಮತ್ತು ವಿಶ್ವ ಹಿಂದು ಪರಿಷತ್‌ಗೆ ಸೇರಿದ ಕಾವಲುಕೋರ ಮಂದಿಗಳು 35ಕ್ಕೂ ಹೆಚ್ಚು ಜನಗಳನ್ನು ಬಡಿದು ಸಾಯಿಸಿದ್ದಾರೆ. ಝಾರ್ಖಂಡ್‌ನಲ್ಲಿ ಒಂದೆಡೆಯಲ್ಲಿ ಮಾತ್ರ ಒಂದು ಕೇಸಿನಲ್ಲಿ ಒಬ್ಬ ಬಿಜೆಪಿ ಮುಖಂಡ ಸೇರಿದಂತೆ ಕೆಲವರನ್ನು ದಂಡಿಸಲಾಗಿದೆ, ಬೇರಲ್ಲೂ ಈ ಅಪರಾಧಗಳನ್ನು ಎಸಗಿದವರು ದಂಡನೆಗೆ ಗುರಿಯಾಗಿಲ್ಲ. ಇದು ಇವರಿಗೆ ಬಿಜೆಪಿ–ಆರೆಸ್ಸೆಸ್‌ನ ಬಲವಾದ ಕೃಪಾಪೋಷಣೆಯನ್ನು ತೋರಿಸುತ್ತದೆ. ಮೋದಿ ರಾಜ್ಯಭಾರದಲ್ಲಿ ಯಾರೂ ಸುರಕ್ಷಿತರಲ್ಲೆಂಬುದು ಆರೆಸ್ಸೆಸ್‌ನ ಸೆಲ್ ಆಳ್ವಿಕೆಯ ಸಂಕೇತ ಎಂಬ ಭಾವನೆ ದೇಶಾದ್ಯಂತ ಸಾರ್ವಜನಿಕರಲ್ಲಿ ಉಂಟಾಗಿದೆ. ಕಾನೂನು ಆಳ್ವಿಕೆ ಶೋಚನೀಯವಾಗಿದೆ ಎಂದು ಎಐಕೆಎಸ್ ಹೇಳಿದೆ.

ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಬೇಕು ಮತ್ತು ನಾಗರಿಕರ ಜೀವಗಳಿಗೆ ಗೋರಕ್ಷಕರೆನಿಸಿಕೊಂಡವರಿಂದ ರಕ್ಷಣೆ ಸಿಗುವಂತೆ ಮಾಡಬೇಕು ಎಂದು ಆಗ್ರಹಿಸಿರುವ ಎಐಕೆಎಸ್ ಬಿಜೆಪಿ ನೇತೃತ್ವದ ರಘುಬೀರ್ ದಾಸ್ ಸರಕಾರ ತಕ್ಷಣವೇ ಎಲ್ಲ ಅಪರಾಧಿಗಳನ್ನು ಬಂಧಿಸಬೇಕು, ಬಡಿದು ಸಾಯಿಸಿದ ಈ ಘಟನೆಯ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಮತ್ತು ಸಾವಿಗೀಡಾದವರ ಕುಟುಂಬಗಳಿಗೆ ತಲಾ ಒಂದು ಕೋಟಿ ರೂ. ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದೆ.



ಕಾಂ ಸತ್ಯನಾರಾಯಣ

ಉತ್ತರಾಖಂಡ ರಾಜ್ಯದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಕಾರ್ಮಿಕ ಮುಂದಾಳು, 94 ವರ್ಷ ವಯಸ್ಸಿನ ಸತ್ಯಪ್ರಕಾಶ್ ಜೂನ್ 14 ರಂದು ನಿಧನರಾಗಿದ್ದಾರೆ.

'ಬಾಬೂಜಿ ಎಂದು ಜನಪ್ರಿಯರಾಗಿದ್ದ ಇವರು ರಾಜ್ಯದ ಬಹಳ ಹಿರಿಯ ವ್ಯಕ್ತಿತ್ವ. ಕಾರ್ಮಿಕರು ಮತ್ತು ರೈತರ ಹಕ್ಕುಗಳಿಗಾಗಿ, ಒಕ್ಕಲೆಬ್ಬಿಸಿದವರ ಭೂಮಿ ಹಕ್ಕುಗಳು ಮತ್ತು ಪುನರ್ವಸತಿಗಾಗಿ ಹಲವು ಸಮರಧೀರ ಹೋರಾಟಗಳಿಗೆ ನೇತೃತ್ವ ನೀಡಿದ್ದರು.

ಸತ್ಯಪ್ರಕಾಶ್ ಅವರ ನಿಧನ ಪ್ರಜಾಪ್ರಭುತ್ವ ಆಂದೋಲನಕ್ಕೆ, ನಿರ್ದಿಷ್ಟವಾಗಿ ಕಾರ್ಮಿಕ ಆಂದೋಲನಕ್ಕೆ ತುಂಬಲಾಗದ ನಷ್ಟ ಎಂದು ಸಿಐಟಿಯು ತನ್ನ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.

3 ಲಕ್ಷ ಅಂಚೆ ಇಲಾಖೆಯ ಜಿಡಿಎಸ್ ನೌಕರರ 16 ದಿನಗಳ ಯಶಸ್ವಿ ಮುಷ್ಕರ

ಅಂಚೆ ಇಲಾಖೆಯ 1.55 ಲಕ್ಷ ಕಚೇರಿಗಳ ಪೈಕಿ ಗ್ರಾಮೀಣ ಪ್ರದೇಶಗಳಲ್ಲಿರುವ 1.29 ಲಕ್ಷ ಶಾಖಾ ಅಂಚೆಕಚೇರಿಗಳಲ್ಲಿ ದುಡಿಯುತ್ತಿರುವ 3.07 ಕ್ಷ ಗ್ರಾಮೀಣ ಡಾಕ್ ಸೇವಕ್ (ಜಿಡಿಎಸ್) ಎನಿಸಿಕೊಂಡಿರುವವರು ತಮ್ಮ 16 ದಿನಗಳ ಐಕ್ಯ ಮುಷ್ಕರದ ಮೂಲಕ ಸರಕಾರ ಮಾತುಕತೆಗೆ ಬರುವಂತೆ ಮಾಡುವಲ್ಲಿ, ಮತ್ತು ಮುಷ್ಕರ ನಿಲ್ಲಿಸದೆ ಮಾತುಕತೆ ಇಲ್ಲ ಎಂದು ಪಟ್ಟು ಹಿಡಿದಿದ್ದ ಕೇಂದ್ರ ಸಂಪುಟ ಕೊನೆಗೂ ಜೂನ್ 6 ರಂದು ಸಭೆ ಸೇರಿ ಸಂಬಳಗಳಲ್ಲಿ ಏರಿಕೆ ಕುರಿತಾದ ಕೆಲವು ಪ್ರಮುಖ ಶಿಫಾರಸುಗಳನ್ನು ಜಾರಿ ಮಾಡಲು ಒಪ್ಪಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಜಿಡಿಎಸ್ ನೌಕರರು ನಿಯಮಿತ ಸಂಬಳವಿಲ್ಲದೆ ಮಾಸಿಕ ಅಲೋಯೆನ್ಸ್ ಮೇಲೆ ಕೆಲಸ ಮಾಡುತ್ತಿರುವ ನೌಕರರು. ಬೇರಾವ ಸೌಲಭ್ಯಗಳೂ ಅವರಿಗೆ ಸಿಗುತ್ತಿಲ್ಲ. ಇವರನ್ನು 7ನೇ ವೇತನ ಆಯೋಗದ ವ್ಯಾಪ್ತಿಗೆ ತರಬೇಕೆಂಬ ಬೇಡಿಕೆ ಬಂದಾಗ ಅದನ್ನು ಒಪ್ಪದ ಸರಕಾರ ಇವರ ವೇತನ ಮತ್ತಿತರ ಸೇವಾ ಶರತ್ತುಗಳ ಪರಿಶೀಲನೆಗೆ ಒಂದು ಸಮಿತಿ ನೇಮಿಸಿತು. ಅದು ನವೆಂಬರ್ 2016ರಲ್ಲಿ ವರದಿ ಒಪ್ಪಿಸಿತು. ಅದರಲ್ಲಿ ಹಲವು ಸಕಾರಾತ್ಮಕ ಶಿಫಾರಸುಗಳಿದ್ದವು. ಆದರೆ ಸರಕಾರ ಅವುಗಳ ಜಾರಿಯ ಆಗ್ರಹಗಳಿಗೆ ಕಿವಿಗೊಡಲಿಲ್ಲ. ಈ ಹಿನ್ನೆಲೆಯಲ್ಲಿ ಈ ಮುಷ್ಕರ ನಡೆದರೂ, ಮುಷ್ಕರ ಹಿಂತೆಗೆದುಕೊಂಡರೆ ಮಾತ್ರ ಮಾತುಕತೆ ನಡೆಸುತ್ತೇವೆ ಎಂಬ ವಿಚಿತ್ರ ನಿಲುವನ್ನು ಮಂತ್ರಿಗಳು ತಳೆದರು. ಆದರೆ ಕೇವಲ 4% ಸದಸ್ಯತ್ವ ಹೊಂದಿರುವ ಸಣ್ಣ ಬಿಎಂಎಸ್ ಸಂಘವನ್ನು ಬಿಟ್ಟರೆ ಬೇರೆಲ್ಲರೂ ಗಟ್ಟಿಯಾಗಿ ನಿಂತಿದ್ದರಿಂದ ಕೊನೆಗೂ ಕೆಲವಾದರೂ ಪ್ರಮುಖ ಶಿಫಾರಸುಗಳನ್ನು 18 ತಿಂಗಳ ನಂತರ ಸರಕಾರ ಈಗ ಒಪ್ಪಿಕೊಂಡಿದೆ.

ಕಾಶ್ಮೀರದ ಹಿರಿಯ ಪತ್ರಕರ್ತರ ಕೊಲೆ

ಕಾಶ್ಮೀರದ ಒಬ್ಬ ಹಿರಿಯ ಪತ್ರಕರ್ತ, 'ರೈಸಿಂಗ್ ಕಾಶ್ಮೀರ್' ಪತ್ರಿಕೆಯ ಸಂಪಾದಕ **ಶುಜಾತ್ ಬುಖಾರಿ** ಯವರನ್ನು ಜೂನ್ 14ರಂದು ಶ್ರೀನಗರದಲ್ಲಿ ಅವರು ತಮ್ಮ ಕಚೇರಿಯಿಂದ ಹೊರ ಬರುತ್ತಿದ್ದಾಗ ಒಬ್ಬ ಅಪರಿಚಿತ ಗುಂಡಿಟ್ಟು ಸಾಯಿಸಿದ್ದಾನೆ. ಈತ ಒಂದು ಉಗ್ರಗಾಮಿ ಗುಂಪಿಗೆ ಸೇರಿದವನೆಂದು ಶಂಕಿಸಲಾಗಿದೆ.



"ದ್ ಶ್ ಕ್ ಗ್ ಳ್ ಂದ್ ಪರಿಚಿತರಾಗಿರುವ ಶುಜಾತ್ ಬುಖಾರಿಯವರ ಬೀಕರ ಕೊಲೆಯಿಂದ ನನಗೆ ಆಘಾತವಾಗಿದೆ. ಅವರು ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ಮತ್ತು ಸಾಮಾನ್ಯ ಸ್ಥಿತಿ ನೆಲೆಗೊಳ್ಳಲು ನಿರಂತರವಾಗಿ ಶ್ರಮಿಸುತ್ತಿದ್ದ ಒಬ್ಬ ಪತ್ರಕರ್ತ, ಹೋರಾಟಗಾರ. ಒಂದು ವಿವೇಕದ ದನಿಯಾಗಿದ್ದ ಅವರು ಇನ್ಸಾನಿಯತ್, ಕಶ್ಮೀರಿಯತ್, ಜಮ್ಹೂರಿಯತ್‌ನ್ನು ನಿಜವಾಗಿಯೂ ಎತ್ತಿ ಹಿಡಿದವರು. ಜಮ್ಮು ಮತ್ತು ಕಾಶ್ಮೀರದಲ್ಲಿ ಸ್ಥಿತಿಯನ್ನು ಸರಿಪಡಿಸಲು ಹೋರಾಡುತ್ತಿರುವ ನಮ್ಮೆಲ್ಲರಿಗೂ ಒಂದು ದೊಡ್ಡನಷ್ಟ" ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಅವರ ಕುಟುಂಬದವರಿಗೆ, ನಿಕಟವರ್ತಿಗಳಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದ್ದಾರೆ.

ಎಲ್ಲರಿಗೂ ವಿದ್ಯುತ್ ಎಂಬ ಬೇಡಿಕೆಯ ಮೇಲೆ ವಿದ್ಯುತ್ ನೌಕರರ ಮುಷ್ಕರ: ಡಿಸೆಂಬರ್ 7

ವಿದ್ಯುತ್ ವಿತರಣೆಯ ಖಾಸಗೀಕರಣವನ್ನು ವಿಸ್ತರಿಸಲು ಪ್ರಯತ್ನಿಸುತ್ತಿರುವ, ಆ ಮೂಲಕ ಬಡವರಿಂದ ವಿದ್ಯುತ್ತಿನ ಹಕ್ಕನ್ನು ಕಸಿದುಕೋಳುತ್ತಿರುವ ವಿದ್ಯುತ್(ತಿದ್ದುಪಡಿ) ಮಸೂದೆ, 2014 ರ ವಿರುದ್ಧ ಡಿಸೆಂಬರ್ 7ರಂದು 24 ಗಂಟೆಗಳ ಮುಷ್ಕರ ನಡೆಸಲು ವಿದ್ಯುತ್ ವಲಯದ ನೌಕರರು ನಿರ್ಧರಿಸಿದ್ದಾರೆ. ಬಿಜೆಪಿ ಸರಕಾರ ಅದಕ್ಕಿಂತ ಮೊದಲು ಮಸೂದೆಯನ್ನು ಪಾಸು ಮಾಡಿಕೊಳ್ಳಲು ಪ್ರಯತ್ನಿಸಿದರೆ, ನೌಕರರು ಮಿಂಚಿನ ಮುಷ್ಕರ ನಡೆಸುತ್ತಾರೆ. ಜೂನ್ 8ರಂದು ದಿಲ್ಲಿಯಲ್ಲಿ ನಡೆದ ವಿದ್ಯುತ್ ನೌಕರರು ಮತ್ತು ಇಂಜಿನಿಯರುಗಳ ರಾಷ್ಟ್ರೀಯ ಸಮನ್ವಯ ಸಮಿತಿಯ ರಾಷ್ಟ್ರೀಯ ಸಮಾವೇಶದಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಈ ಸಮನ್ವಯ ಸಮಿತಿ ವಿದ್ಯುತ್ ವಲಯದ ಎಲ್ಲ ಸಂಘನೆಗಳ ಒಂದು ಜಂಟಿ ವೇದಿಕೆ.

ದೇಶದೆಲ್ಲೆಡೆಗಳಿಂದ ಬಂದ 500ಕ್ಕೂ ಹೆಚ್ಚು ನೌಕರರು ಮತ್ತು ಇಂಜಿನಿಯರುಗಳು ಈ ಸಮಾವೇಶದಲ್ಲಿ ಭಾಗವಹಿಸಿದರು. ವಿದ್ಯುತ್ ನೌಕರರು ಮತ್ತು ಇಂಜಿನಿಯರುಗಳ ಬೇಡಿಕೆಗಳು ಹೀಗಿವೆ:

1. ವಿದ್ಯುತ್ ಕಾಯ್ದೆ, 2003ರ ಜಾರಿಯಿಂದಾಗಿ ವಿದ್ಯುತ್ ಬಳಕೆದಾರರು ಮತ್ತು ನೌಕರರ ಮೇಲೆ ಹೇರಿರುವ ಹೊರೆಗಳ ಪರಿಣಾಮಗಳ ಪರಾಮರ್ಶೆಯನ್ನು ಪರಿಣಿತರಿಂದ ನಡೆಸಬೇಕು. ಪ್ರತ್ಯೇಕಗೊಳಿಸಿದ ವಿದ್ಯುತ್ ವಲಯವನ್ನು ಮತ್ತೆ ಸಮಗ್ರೀಕರಿಸುವುದಕ್ಕೆ ಉನ್ನತ ಆದ್ಯತೆ 2. ಹಿಂದಿನ ವಿದ್ಯುತ್ ಮಂತ್ರಿಗಳು ಆಶ್ವಾಸನೆ ನೀಡಿದಂತೆ ವಿದ್ಯುತ್ ನೌಕರರು ಮತ್ತು ಇಂಜಿನಿಯರುಗಳ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸುವ ಮೊದಲು ಈ ಮಸೂದೆಯನ್ನು ಶಾಸನವಾಗಿ ಮಾಡಬಾರದು. 3. ಕಳೆದೆರಡು ದಶಕಗಳಲ್ಲಿ ಆಗಾಗ ದರಗಳನ್ನು ಏರಿಸಿದರೂ ನಷ್ಟಗಳು ಹೆಚ್ಚಿರುವುದರ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಟ್ಟದ ನೌಕರರ ಮತ್ತು ಇಂಜಿನಿಯರುಗಳ ಸಂಘಟನೆಗಳೊಂದಿಗೆ ಸಮಾಲೋಚನೆಗಳು 4. ರಾಷ್ಟ್ರೀಯ ವಿದ್ಯುತ್ ಧೋರಣೆ ದೇಶೀ ಸಂಪನ್ಮೂಲಗಳು ಮತ್ತು ಉತ್ಪಾದನಾ ಸಾಮರ್ಥ್ಯ ಮತ್ತು ನಮ್ಮ ಜನತೆಯ ಪಾವತಿ ಸಾಮರ್ಥ್ಯ ಇವೆಲ್ಲದರಲ್ಲಿ ಸಮತೋಲನ 5. ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸಬೇಕು, 6.ಹಳೆಯ ಪೆನ್ಷನ್ ಪದ್ಧತಿಯ ಜಾರಿ. 7.ವಿದ್ಯುತ್ ವಲಯದಲ್ಲಿ ಅಪಾಯಗಳಿರುವ ಕೆಲಸಗಳಲ್ಲಿ ಸುರಕ್ಷಿತ ಕೆಲಸದ ಪರಿಸ್ಥಿತಿಗಳು ಇರುವಂತೆ ಮಾಡಬೇಕು. 8. ನೈಸರ್ಗಿಕ ಇಂಧನ ಸಂಪನ್ಮೂಲಗಳನ್ನು ಖಾಸಗಿ ಬಂಡವಾಳಶಾಹಿಗಳಿಗೆ ವರ್ಗಾಯಿಸುವುದನ್ನು ನಿಲ್ಲಿಸಬೇಕು. 9. ಸಾರ್ವಜನಿಕ ವಲಯದ ವಿದ್ಯುತ್ ಕ್ಷೇತ್ರದಲ್ಲಿ ಶೇರು ಹಿಂಪಡಿಕೆಯನ್ನು ನಿಲ್ಲಿಸಬೇಕು. 10. 'ಇಂಧನದ ಹಕ್ಕು ಮಾನವ ಹಕ್ಕು' ಎಂದು ಲಭ್ಯವಾಗುವಂತೆ ಮಾಡಬೇಕು.


ಸೊಲ್ಲಾಪುರದ ಸಿಐಟಿಯು ನೇತೃತ್ವದ ವಸತಿ ಯೋಜನೆಗೆ ಅಂತರಾಷ್ಟ್ರೀಯ ಪ್ರಶಸ್ತಿ

ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಬೀಡಿ ಕಾರ್ಮಿಕರಿಗೆ 15,000ಕ್ಕೂ ಹೆಚ್ಚು ಮನೆಗಳು ಕಟ್ಟಿಸಿ ಕೊಡಲು ಕಾರಣವಾದ ಸಿಐಟಿಯು ಪ್ರಯತ್ನಕ್ಕೆ ನೆದರ್ಲೆಂಡ್‌ನ ರಾಜಧಾನಿ ಆಮ್‌ಸ್ಟರ್‌ಡ್ಯಾಂ ನಲ್ಲಿರುವ ಟ್ರಾನ್ಸ್‌ನೇಶನಲ್ ಇನ್ಸ್‌ಟಿಟ್ಯುಟ್ 'ಟ್ರಾನ್ಸ್‌ಫಾರ್ಮೆಟಿವ್ ಸಿಟೀಸ್ (ಪರಿವರ್ತನಕಾರಿ ನಗರಗಳು) 2018 ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

1990ರ ದಶಕದಿಂದ ಆರಂಭಿಸಿ ಸಿಐಟಿಯು ನೇತೃತ್ವದಲ್ಲಿ ನಡೆದ ಹೋರಾಟಗಳಿಂದಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸೊಲ್ಲಾಪುರದಲ್ಲಿ ಕೊಳೆಗೇರಿಗಳಲ್ಲಿ ಶೋಚನೀಯ ಸ್ಥಿತಿಯಲ್ಲಿ ಬದುಕುತ್ತಿದ್ದ ಕಾರ್ಮಿಕರಿಗೆ ವಸತಿ ಸೌಕರ್ಯ ಕಲ್ಪಿಸಲೆಂದು ಹಣವನ್ನು ಒದಗಿಸಿದವು. 2006ರಲ್ಲಿ 10 ಸಾವಿರ ಮನೆಗಳಿದ್ದ ಗೋದಾವರಿ ಪರುಳೇಕರ್ ಹೆಸರು ಹೊತ್ತ ನಗರ ಉದ್ಘಾಟನೆಗೊಂಡಿತು.

ನಂತರ ಇನ್ನೂ 5100 ಮನೆಗಳ ಮತ್ತೊಂದು ಪ್ರಾಜೆಕ್ಟ್ 2015ರಲ್ಲಿ ಪೂರ್ಣಗೊಂಡಿತು. ಇದಕ್ಕೆ ಬೀಡಿ ಕಾರ್ಮಿಕರನ್ನು ಸಂಘಟಿಸುವ ಕೆಲಸವನ್ನು ಆರಂಭಿಸಿದ ಮೀನಾಕ್ಷಿ ಸಾಣೆಯವರ ಹೆಸರನ್ನು ಇಡಲಾಗಿದೆ.

ಈ ವಸತಿ ಯೋಜನೆಯನ್ನು ನಿರ್ವಹಿಸಲು ಕಾರ್ಮಿಕರ ಸಹಕಾರಿ ಹೌಸಿಂಗ್ ಸೊಸೈಟಿಯನ್ನು ಸಿಐಟಿಯು ರಚಿಸಿತು. ಫಲಾನುಭವಿಗಳು ಒಟ್ಟು ಖರ್ಚಿನ ಮೂರನೇ ಒಂದು ಭಾಗ ವಹಿಸಿಕೊಂಡಿದ್ದಾರೆ, ಉಳಿದವನ್ನು ಕೇಂದ್ರ ಮತ್ತು ರಾಜ್ಯ ಸರಕಾರ ಸಮನಾಗಿ ನೀಡಿವೆ.



ಈ ಪ್ರಶಸ್ತಿಗಳನ್ನು ನೀರು, ಇಂಧನ ಮತ್ತು ವಸತಿ ಕ್ಷೇತ್ರಗಳಲ್ಲಿ ಇತರರಿಗೆ ಸ್ಫೂರ್ತಿ ತುಂಬುವ ರಾಜಕೀಯ ಆಚರಣೆಗಳನ್ನು ಎತ್ತಿ ತೋರುವ ಆಶಯದಿಂದ ಕೊಡಲಾಗುತ್ತಿದೆ. ಈ ಸಂಸ್ಥೆ 19 ದೇಶಗಳಿಂದ 32 ಇಂತಹ ಸ್ಫೂರ್ತಿದಾಯಕ "ಶಿವಗ್ರಾಮಿ, ಪ್ರಜಾಸತ್ತಾತ್ಮಕ, ಜನಾಧಿಕಾರ ಸಂಪನ್ನ" ಪ್ರಯತ್ನಗಳ ಪಟ್ಟಿ ತಯಾರಿಸಿತು. ಇವುಗಳಲ್ಲಿ ಮೂರು ಕ್ಷೇತ್ರಗಳಲ್ಲಿ ತಲಾ ಮೂರರಂತೆ ಒಂಭತ್ತನ್ನು ಆರಿಸಲಾಯಿತು. ಇವು ಬೊಲಿವಿಯ, ನೈಜೀರಿಯ, ಫ್ರಾನ್ಸ್, ಅಮೆರಿಕ, ಮಾರಿಷಸ್, ತಂಜೇನಿಯ, ಸ್ಪೇನ್ ಮತ್ತು ಭಾರತಕ್ಕೆ ಸೇರಿದವುಗಳು.

ಸೊಲ್ಲಾಪುರ ವಸತಿ ಯೋಜನೆ ಈ ಎಲ್ಲ 9 ಮುತುವರ್ಜಿಗಳಲ್ಲಿ ಅತಿ ಹೆಚ್ಚು ಮತಗಳನ್ನು ಪಡೆದಿದೆ.

ಸಂಪಾದಕೀಯ

ಮೈತ್ರಿ ಸರಕಾರ ಎತ್ತ ಸಾಗಿದೆ ?

ಮೈತ್ರಿ ಸರಕಾರ ರಚನೆಯಾಗಿ ನಾಲ್ಕು ವಾರಗಳು ಕಳೆಯುತ್ತಾ ಬಂದಿದ್ದರೂ ಸರಕಾರ ಇನ್ನೂ ಟೇಕಾಫ್ ಆಗಿಲ್ಲ, ಪೂರ್ಣಪ್ರಮಾಣದಲ್ಲಿ ಕೆಲಸ ಆರಂಭಿಸಿಲ್ಲ ಎಂಬ ಅನುಮಾನ ರಾಜ್ಯದ ಜನತೆಯಲ್ಲಿ ಆರಂಭವಾಗಿದೆ. ನಿಜವಾಗಿಯೂ ಸರಕಾರದ ರಚನೆ ಇನ್ನೂ ಪೂರ್ಣಗೊಂಡಿಲ್ಲ. ಇನ್ನೂ ಕೆಲವು ಇಲಾಖೆಗಳಿಗೆ ಸಚಿವರು ನೇಮಕವಾಗಿಲ್ಲ. ಇನ್ನೂ ಹಲವು ಸಚಿವ ಸ್ಥಾನಗಳು ಭರ್ತಿಯಾಗಬೇಕಾಗಿದೆ. ಇದು ಉತ್ತಮ ಆಡಳಿತದ ಶುಭಸೂಚನೆಯಂತೂ ಅಲ್ಲ.

ಒಂದು ಕಡೆ ಸಚಿವ ಸ್ಥಾನ ಸಿಗದ ಅತೃಪ್ತ ಶಾಸಕರ ಮತ್ತು ಅವರ ಬೆಂಬಲಿಗರ ಆಕ್ರೋಶದ ಬಹಿರಂಗ ಪ್ರದರ್ಶನ ಮುಂದುವರೆದಿದೆ. ಸಚಿವ ಸ್ಥಾನ ಸಿಗದ ಕಾಂಗ್ರೆಸಿನ ಹಿರಿಯ ಶಾಸಕರಾದ ಎಚ್.ಕೆ.ಪಾಟೀಲ, ಶ್ಯಾಮನೂರು ಶಿವಶಂಕರಪ್ಪ, ರಾಮಲಿಂಗಾ ರೆಡ್ಡಿ ಮುಂತಾದವರು ಹಾಗೂ ಸತೀಶ ಜಾರಕಿಹೊಳಿ, ಎಂ.ಬಿ. ಪಾಟೀಲ ಮುಂತಾದ ಪ್ರಭಾವಿಗಳು ಸೇರಿದಂತೆ ಸುಮಾರು 20 ಆಕಾಂಕ್ಷಿಗಳ ಮತ್ತು ಅವರ ಬೆಂಬಲಿಗರ ಆಕ್ರೋಶ ಮುಂದುವರೆದಿದೆ. ಅವರು ಸಭೆ ಸೇರುವ, ಅವರ ನಾಯಕರನ್ನು ದೆಹಲಿಗೆ ಕರೆ ಕಳಿಸಿ ಸಮಾಧಾನ ಪಡಿಸುವ, ಆದರೂ ಅವರ ಚಟುವಟಿಕೆಗಳು ಮುಂದುವರೆಯುವ ಗೊಂದಲ ಮುಂದುವರೆದಿದೆ. ಕಾಂಗ್ರೆಸ್ ಮಾತ್ರವಲ್ಲ, ಜೆಡಿ-ಎಸ್ ನಲ್ಲೂ ಬಸವರಾಜ ಹೊರಟ್ಟಿ ಮುಂತಾದ ಸಚಿವ ಸ್ಥಾನ ಸಿಗದ ಪ್ರಮುಖರೂ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಚಿವ ಸ್ಥಾನ ಸಿಗದಿರುವುದು ಎರಡು ಪಕ್ಷಗಳ ನಡುವೆ ಮತು ತಮ್ಮದೇ ಪಕ್ಷದ ಹಿರಿಯ ನಾಯಕರ ಬಗ್ಗೆ ಅನುಮಾನಕ್ಕೂ ಕೆಲವು ಕಾರಣವಾಗಿದೆ. ಜೆಡಿ-ಎಸ್ ಹಿರಿಯ ನಾಯಕರ ಒತ್ತಡದಿಂದಾಗಿ ತಮ್ಮ ಅವಕಾಶ ತಪ್ಪಿತೆಂದು ಕೆಲವು ಕಾಂಗ್ರೆಸ್ ಶಾಸಕರೂ, ಕಾಂಗ್ರೆಸ್ ಒತ್ತಡದಿಂದ ತಮಗೆ ಮಂತ್ರಿಗಿರಿ ಸಿಗಲಿಲ್ಲವೆಂದು ಜೆಡಿ-ಎಸ್ ಶಾಸಕರು ಅನುಮಾನ ಪಟ್ಟಿದ್ದಾರೆ. ಸಿದ್ಧರಾಮಯ್ಯ, ಪರಮೇಶ್ವರ್ ಅವರಿಂದಾಗಿ ತಮಗೆ ಸಚಿವ ಸ್ಥಾನ ಸಿಗಲಿಲ್ಲವೆಂದು ಕೆಲವು ಕಾಂಗ್ರೆಸ್ ಶಾಸಕರೇ ಆಕ್ರೋಶ ಹೊರ ಹಾಕಿದ್ದಾರೆ.

ಮೈತ್ರಿ ಸರಕಾರದ (ಅದರಲ್ಲೂ ಚುನಾವಣೋತ್ತರ ಮೈತ್ರಿಯಲ್ಲಿ) ಆರಂಭದ ಅವಧಿಯಲ್ಲಿ ಈ ಗೊಂದಲ ಸ್ವಲ್ಪ ಮಟ್ಟಿಗೆ ನಿರೀಕ್ಷಿತವಾದರೂ ಬಹುಶಃ ಇದು ಬಹಳ ಮಟ್ಟಿಗೆ ಎರಡೂ ಪಕ್ಷಗಳ ನಾಯಕತ್ವ ಸಚಿವರ ಮತ್ತು ಇಲಾಖೆಯ ಆಯ್ಕೆಯಲ್ಲಿ ಯಾವುದೇ ಮಾನದಂಡ ಅನುಸರಿಸದಿರುವುದರಿಂದಾಗಿ ತೀವ್ರ ಗೊಂದಲ ಆಗಿದೆ. ಲಿಂಗಾಯತ ವೀರಶೈವ ಚಳುವಳಿಗಳಲ್ಲಿ ಭಾಗವಹಿಸಿದ ಯಾರಿಗೂ ಮಂತ್ರಿಸ್ಥಾನ ಕೊಡಲಾಗಿಲ್ಲ ಎಂಬ ಭಾವನೆ ಬರುವಂತೆ ಸಂಪುಟ ರಚನೆಯಾಗಿರುವುದೂ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಪ್ರಾದೇಶಿಕ ಮತ್ತು ಜಾತಿವಾರು ಸಮತೋಲನ ಕಾಯ್ದುಕೊಳ್ಳುವ ಕನಿಷ್ಟ ಪ್ರಯತ್ನ ನಡೆಯದೆ ಹೋದದ್ದೂ ಪರಿಸ್ಥಿತಿ ಉಲ್ಬಣವಾಗುವುದಕ್ಕೆ ಕಾರಣವಾಗಿದೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

ಸಚಿವ ಸ್ಥಾನ ಸಿಕ್ಕಿದವರೂ ತಮ್ಮ ಖಾತೆಗಳ ಬಗ್ಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿರುವುದು ಬಹುಶಃ ಇನ್ನೂ ಗಂಭೀರವಾದ ಬೆಳವಣಿಗೆ. ಡಿ.ಕೆ.ಶಿವಕುಮಾರ್, ಜಿ.ಟಿ.ದೇವೇಗೌಡ ಸೇರಿದಂತೆ ಹಲವು ಪ್ರಮುಖ ಸಚಿವರು ತಮ್ಮ ಖಾತೆ ಬಗ್ಗೆ ಅಸಮಾಧಾನದಿಂದ ಇರುವುದು ಉತ್ತಮ ಆಡಳಿತಕ್ಕೆ ಪೂರಕವಂತೂ ಖಂಡಿತ ಅಲ್ಲ. ಸಾಲದ್ದಕ್ಕೆ ಡಿ.ಕೆ.ಶಿವಕುಮಾರ್ ಇಲಾಖೆಯ ಕೆಲವು ವರ್ಗಾವಣೆಗಳಲ್ಲಿ ರೇವಣ್ಣ ಅವರಿಂದ ಹಸ್ತಕ್ಷೇಪ ನಡೆದಿದೆ ಎಂಬುದು ತೀವ್ರ ಘರ್ಷಣೆಗೆ ಕಾರಣವಾಗಿರುವುದು ಸಹ ಗಂಭೀರವಾದ ಬೆಳವಣಿಗೆಯೇ. ಸಚಿವ ಖಾತೆ ಹಂಚಿಕೆಯಾದ ಇಲಾಖೆಗಳ ಕೆಲಸವೂ ಸುಗಮವಾಗಿ ನಡೆಯುತ್ತಿಲ್ಲ. ಎರಡೂ ಪಕ್ಷಗಳ ಹೈ ಕಮಾಂಡ್ ಮತ್ತು ಮುಖ್ಯಮಂತ್ರಿ-ಉಪಮುಖ್ಯಮಂತ್ರಿಗಳೂ ಇದನ್ನು ಹೇಗೆ ಪರಿಹರಿಸಬೇಕು ಎಂದು ತಿಳಿಯದೆ ಕಳವಳಗೊಂಡಿದ್ದಾರೆ.

ಉಳಿದಿರುವ ಸಚಿವ ಸ್ಥಾನಗಳನ್ನು ಹೆಚ್ಚಿನ ಅತೃಪ್ತರನ್ನು ಸಮಾಧಾನಪಡಿಸುವಂತೆ ತುಂಬುವುದು, ಇತರರನ್ನು ನಿಗಮ-ಮಂಡಳಿಗಳ ಸ್ಥಾನಗಳಿಂದ ಸಂತೃಪ್ತಗೊಳಿಸುವುದು, ಕೆಲವು ಖಾತೆಗಳ ಮರುಹಂಚಿಕೆ ಎರಡೂ ಪಕ್ಷಗಳ ನಾಯಕತ್ವ ಕಂಡುಕೊಂಡಿರುವ ಸೂತ್ರ. ಇದರ ಜತೆಗೆ ಅತೃಪ್ತರು ಸಭೆ ನಡೆಸುವುದನ್ನು ಮುಂದುವರೆಸಿದರೆ ಶಿಸ್ತುಕ್ರಮದ ಬೆದರಿಕೆಯನ್ನೂ ಒಡ್ಡಲಾಗಿದೆ. ಎರಡೂ ಪಕ್ಷಗಳ ನಡುವೆ ಸಮನ್ವಯಕ್ಕೆ ಸಮಿತಿಯ ರಚನೆ, ಪಕ್ಷಗಳ ನಡುವಿನ ಎಲ್ಲಾ ವಿವಾದಗಳನ್ನು ಬಗೆಹರಿಸುವುದು ಎಂದೂ ನಿರ್ಧಾರವಾಗಿದೆ.

ಈ ಬಿಕ್ಕಟ್ಟು ಬರಿಯ ಮೈತ್ರಿ ಸರಕಾರದ ಬಿಕ್ಕಟ್ಟು ಮಾತ್ರವಲ್ಲ. ಹಿಂದಿನ ಏಕಪಕ್ಷೀಯ ಬಿಜೆಪಿಯ ಸರಕಾರದಲ್ಲೂ ಸಚಿವ ಖಾತೆ ಹಂಚಿಕೆ ಬಿಕ್ಕಟ್ಟು ಸೃಷ್ಟಿಸಿತ್ತು. ಹಲವು ಲಾಬಿಗಳ ಮಾಫಿಯಾಗಳ ಸದಸ್ಯರು ಹಣಬಲ ತೋಳ್ಬಲದಿಂದ ಚುನಾವಣೆ ಗೆದ್ದು ಶಾಸಕರಾಗಿದ್ದು, ಅವರ ಆ "ಹೂಡಿಕೆಗೆ ನಷ್ಟ"ವಾಗದಿರಬೇಕಾದರೆ ಸಚಿವರಾಗದೆ ಅದರಲ್ಲೂ "ಭ್ರಷ್ಟಾಚಾರಕ್ಕೆ ವಿಪುಲ ಅವಕಾಶವಿರುವ" ಖಾತೆಯಲ್ಲಿ ಮಂತ್ರಿಯಾಗದೆ ಸಾಧ್ಯವಿಲ್ಲ. ತಮಗೆ ಸವಿವಸ್ಥಾಣ ಸಿಗದೆ ಹೋದರೆ ತಮ್ಮ ಪಕ್ಷದ ಸರಕಾರ ಇದ್ದರೆಷ್ಟು ಬಿದ್ದರೆಷ್ಟು ಎನ್ನುವ ಧೋರಣೆ ಸ್ಪಷ್ಟವಾಗಿ ಕಂಡುಬರುತ್ತಿದೆ.

ಸರಕಾರ ಟೇಕಾಫ್ ಆಗಿಲ್ಲ ಎಂಬ ಆತಂಕ, ಈ ಬಿಕ್ಕಟ್ಟು ಕೋಮುವಾದಿ ಬಿಜೆಪಿಗೆ ನೆರವಾಗುತ್ತದೆ ಎಂಬ ಭೀತಿ ಸೌಹಾರ್ದಪ್ರಿಯ ಸೆಕ್ಯುಲರ್ ಜನತೆಯಲ್ಲಿ ಮನೆ ಮಾಡಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಸರಕಾರದ ಭದ್ರತೆಗೂ ಸಂಚಕಾರವಿದೆ. ಇನ್ನೂ ಎರಡು ಪಕ್ಷಗಳ ಕನಿಷ್ಟ ಕಾರ್ಯಕ್ರಮ ಸಹ ನಿರ್ಧಾರವಾಗಿಲ್ಲ. ಬಜೆಟಿನಲ್ಲಿ ಸಾಲಮನ್ನಾ ಮಾಡಲಾಗುವುದು ಎಂಬ ಘೋಷಣೆ ಮಾತ್ರ ಮೈತ್ರಿ ಸರಕಾರ ಕೆಲಸ ಮಾಡುತ್ತಿದೆ ಎಂಬ ಸೂಚನೆ ಕೊಡುತ್ತಿದೆ.

ನವ-ಉದಾರೀಕರಣದ ದಾಳಿ ಹಿಮ್ಮೆಟ್ಟಿಸುವತ್ತ

ಜನಶಕ್ತಿ : ಸಿ.ಐ.ಟಿ.ಯು ನಡೆಸುತ್ತಿರುವ ಈ ಕಾರ್ಯಗಾರ ಯಾವ ಹಿನ್ನೆಲೆಯೊಳಗೆ ನಡೆಯುತ್ತಾ ಇದೆ? ಮತ್ತು ಯಾವ ಉದ್ದೇಶಗಳನ್ನು ಒಳಗೊಂಡಿದೆ?

ವರಲಕ್ಷ್ಮಿ : 1970 ರಲ್ಲಿ ಸಿ.ಐ.ಟಿ.ಯು ಪ್ರಾರಂಭವಾದ ನಂತರ ಸಂಘಟನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದಕ್ಕಾಗಿ 1993 ರಲ್ಲಿ ಭುವನೇಶ್ವರ ದಸ್ತಾವೇಜನ್ನು ಅಂಗೀಕರಿಸಿ ಜಾರಿಗೆ ತಂದೆವು. ಆವತ್ತಿನ ಸಂದರ್ಭ ನವ-ಉದಾರೀಕರಣ ನೀತಿಗಳು ಪ್ರಾರಂಭವಾದಂತಹ ದಿನಗಳು. ಇವತ್ತಿಗೆ 27 ವರ್ಷಗಳಾದವು. ಇದರ ಪರಿಣಾಮವಾಗಿ ಕಾರ್ಮಿಕ ನೀತಿಗಳು ಹಲವು ರೀತಿಯಲ್ಲಿ ಬದಲಾವಣೆಗೆ ಒಳಪಟ್ಟಿವೆ. ಉದಾ: ಹಿಂದೆ ಮಾಲೀಕರಿಗೆ ಮತ್ತು ಕಾರ್ಮಿಕರಿಗೆ, ಸರಕಾರಕ್ಕೆ ಮತ್ತು ನೌಕರರಿಗೆ ನೇರವಾದ ಸಂಬಂಧಗಳು ಇರುತ್ತಿದ್ದವು. ಇವತ್ತು ಅಂತಹ ನೇರವಾದ ಉತ್ಪಾದನಾ ಸಂಬಂಧಗಳು ಕಡಿದು ಹೋಗಿವೆ. ಹಿಂದೆ ಒಂದು ಕಾರ್ಖಾನೆ ಒಳಗಡೆ ಎಲ್ಲರೂ ಒಂದೆ ರೀತಿಯ ಸಂಘಟನೆಯನ್ನು ಕಟ್ಟಿಕೊಳ್ಳುವ ಮತ್ತು ಒಂದೇ ಥರದ ಹಕ್ಕುಗಳನ್ನು ಹೊಂದುವ ವ್ಯವಸ್ಥೆ ಇತ್ತು. ಇಂದು ಒಂದು ಕಾರ್ಖಾನೆಯೊಳಗಡೆ ಎರಡು ಮೂರು ರೀತಿಯ ಕಾರ್ಮಿಕ ವಿಭಾಗಗಳನ್ನು ನಾವು ನೋಡ್ತಾ ಇದ್ದೀವಿ ಮತ್ತು ಅವರ ಹಕ್ಕುಗಳು ಒಂದೇ ರೀತಿಯಲ್ಲಿ ಇಲ್ಲ. ಉದಾ: 500 ಕಾರ್ಮಿಕರಿದ್ದರೆ ಅದರಲ್ಲಿ 250 ಜನರು ಖಾಯಂ ಕಾರ್ಮಿಕರಿರುತ್ತಾರೆ. ಅವರಿಗೆಲ್ಲ ಒಂದು ರೀತಿಯ ಬದ್ಧತೆ, ಹಕ್ಕುಗಳನ್ನು ನೀಡಲಾಗಿರುತ್ತೆ. ಅದರ ಒಟ್ಟಿಗೆ ಶೋಷಣೆಯೂ ಇರುತ್ತದೆ. ಅದೇ ಕಾರ್ಖಾನೆಯಲ್ಲಿ 100 ಜನ ಕಾರ್ಮಿಕರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುತ್ತಾರೆ. ಆದರೆ ಅವರಿಗೆ ಯಾವುದೇ ಬದ್ರತೆ ಹಕ್ಕು ಇರುವುದಿಲ್ಲ. ಅದೇ ಕಾರ್ಖಾನೆಯೊಳಗಡೆ NEEM(ನೀಮ್) ಎಂಬ ಕೇಂದ್ರ ಸರ್ಕಾರ ಕಾರ್ಯಕ್ರಮವನ್ನು ತಂದಿದ್ದಾರೆ. ಇದರಲ್ಲಿ ಕಾರ್ಮಿಕರನ್ನು ತರಬೇತಿ ಪಡೆಯುವವರು ಎಂದು ಪರಿಗಣಿಸಿ ಅವರನ್ನು ಅತ್ಯಂತ ನಿಕೃಷ್ಟವಾಗಿ ದುಡಿಸಿಕೊಳ್ಳಲಾಗುತ್ತಿದೆ. ಇಂತಹ ಕಾರ್ಮಿಕರನ್ನು ಸಂಘಟಿಸುವುದು ಒಂದು ದೊಡ್ಡ ಸವಾಲು. ಕಾರ್ಮಿಕರ ವಿವಾದಗಳೂ ಬೇರೆ ಬೇರೆ ರೀತಿಯಲ್ಲಿವೆ. ಖಾಯಂ ಕಾರ್ಮಿಕರ ಬೇಡಿಕೆಗಳು, ಗುತ್ತಿಗೆ ಕಾರ್ಮಿಕರ ಬೇಡಿಕೆಗಳು, ಮತ್ತು ಟ್ರೇನಿ ಅಂತ ಕೆಲಸಮಾಡುವ ಕಾರ್ಮಿಕರ ಬೇಡಿಕೆಗಳು ಮತ್ತು ಮನೋಧರ್ಮ ಬೇರೆ ಬೇರೆ ರೀತಿಯಲ್ಲಿರುತ್ತದೆ. ಖಾಯಂ ಕಾರ್ಮಿಕರ ಹಕ್ಕುಗಳು ಮತ್ತು ಸವಲತ್ತುಗಳು ಉಳಿಬೇಕು ಎನ್ನುವುದಾರೆ, ಕಾಯಂ ಕಾರ್ಮಿಕರು ಅವರಿಗಿಂತ ಕೆಳಗಿರುವ, ಹಕ್ಕುಗಳು ಮತ್ತು ಸವಲತ್ತುಗಳಿಂದ ವಂಚಿತರಾಗಿರುವ ಕಾರ್ಮಿಕ ವಿಭಾಗವನ್ನು ಸಂಘಟಿಸಬೇಕು ಅನ್ನುವಂತಹ ಧೋರಣೆಯನ್ನು ಸಿ.ಐ.ಟಿ.ಯು ಹೊಂದಿದೆ. 'ನನ್ನ ಕೆಲಸಕ್ಕೆ ಭದ್ರತೆ ಇದೆ ನನಗೆ ಸವಲತ್ತು ಇದೆ ನಾನ್ಯಾಕೆ ಅವರನ್ನ ಸಂಘಟಿಸಬೇಕು' ಎಂಬುದು ಖಾಯಂ ಕಾರ್ಮಿಕರ ಮನಸ್ಥಿತಿ. ಆದ್ದರಿಂದ ಖಾಯಮೇತರ ಕಾರ್ಮಿಕರ ಸಂಘಟನೆ ಮಾಡುವುದು ನಮಗೆ ಇದು ದೊಡ್ಡ ಸವಾಲಾಗಿದೆ.

ಜನಶಕ್ತಿ : ನವ ಉದಾರೀಕರಣ ನೀತಿಗಳಿಂದ ಉತ್ಪಾದನಾ ಪ್ರಕ್ರಿಯೆಯಲ್ಲಿ ಏನು ಬದಲಾವಣೆಯಾಗಿದೆ? ಇದರಿಂದ ಕಾರ್ಮಿಕರು ಯಾವ ರೀತಿಯಾದ ಪರಿಣಾಮವನ್ನು ಅನುಭವಿಸುತ್ತಿದ್ದಾರೆ?

ವರಲಕ್ಷ್ಮಿ : ಬಂಡವಾಳಶಾಹಿಯ ಉತ್ಪಾದನಾ ಪ್ರಕ್ರಿಯೆಯಲ್ಲಿ ಹಲವಾರು ಬದಲಾವಣೆಗಳು ಆಗಿವೆ. ಉದಾ: ಹಿಂದೆ ಗುತ್ತಿಗೆ ಅಥವಾ ಹೊರಗುತ್ತಿಗೆ ಅಂತ ಇರಲಿಲ್ಲ. ಕೆಲವು ಕೆಲಸಗಳನ್ನು ಪೀಸ್ ರೇಟ್ ರೂಪದಲ್ಲಿ ಸಣ್ಣ ಕಂಪನಿಗಳಿಗೆ ನೀಡಲಾಗುತ್ತಿತ್ತು. ಇವತ್ತಿನ ಸಂದರ್ಭದಲ್ಲಿ ಅವುಗಳನ್ನೆಲ್ಲ ಹೊರಗುತ್ತಿಗೆಯನ್ನಾಗಿ ಮಾಡಿದ್ದಾರೆ. ಉದಾ; ಯಾವುದೊ ಒಂದು ಕಾರು ಉತ್ಪಾದನೆಯಾಗುತ್ತೆ ಅಂದ್ರೆ ಬಿಡಿಭಾಗಗಳನ್ನು ಮಾಡಲು ಗುತ್ತಿಗೆ ಆಧಾರದಲ್ಲಿ ಹಲವು ಕಂಪೆನಿಗಳಿಗೆ ನೀಡಲಾಗುತ್ತದೆ. ಇದರಲ್ಲಿ ನೇರವಾಗಿ ಕಾಣದ ಶ್ರಮವೊಂದು ಪಾಲ್ಗೊಂಡಿರುತ್ತದೆ. ಈ ರೀತಿಯ ಪ್ರಕ್ರಿಯೆ ದೊಡ್ಡ ಉತ್ಪಾದನಾ ಘಟಕಗಳಲ್ಲಿ ಹುಟ್ಟಿಕೊಂಡಿದೆ. ಇದರಿಂದ ಉತ್ಪನ್ನ ಮಾಡುವ ಹಲವಾರು ಕಾರ್ಮಿಕರಿಗೂ ಮಾಲೀಕರಿಗೂ ಯಾವುದೇ ಸಂಬಂಧ ಇರುವುದಿಲ್ಲ.

ಇನ್ನೊಂದು ಕಡ್ರೆ ಸರಬರಾಜುದಾರರು ಹುಟ್ಟಿಕೊಂಡಿದ್ದಾರೆ. ಇವರು ಸಾಗಾಣಿಕೆಯ ಕೆಲಸ ಮಾಡ್ತಾರೆ. ಇದೆಲ್ಲ ದೊಡ್ಡ ಕಾರ್ಖಾನೆಯ ಕೆಲಸವೇ ಆಗಿದ್ದರು ಕೂಡ ಇಲ್ಲಿಯೂ ಸಹ ಮಾಲೀಕನಿಗೂ ಮತು ಸರಬರಾಜಿನಲ್ಲಿ ಪಾಲ್ಗೊಳ್ಳುವ ಕಾರ್ಮಿಕರಿಗೆ ಸಂಬಂಧಗಳಿರುವುದಿಲ್ಲ. ಈ ರೀತಿಯ ಸರಬರಾಜುಗಾರಿಕೆ ಎಲ್ಲಾ ಹಂತದಲ್ಲಿ ಇರುತ್ತದೆ. ಅವರದೇ ಕೆಲಸ. ಆದರೆ ಇಲ್ಲಿ ಹಲವು ಹಂತದ ಕಾರ್ಮಿಕರಿಗೂ ಮಾಲಿಕರಿಗೂ ಯಾವುದೇ ಪರಸ್ಪರ ಸಂಬಂಧಗಳಿರುವುದಿಲ್ಲ ಕಾರ್ಮಿಕರಿಗೆ ಯಾವುದೇ ಬದ್ರತೆ ಮತ್ತು ಹಕ್ಕು ಇರುವುದಿಲ್ಲ. ಹೀಗೆ ಅಧಿಕೃತ ಸಂಬಂಧಗಳಿಲ್ಲದೆ ಕಾರ್ಮಿಕರ ಸೇವೆಯನ್ನು ಮಾತ್ರ ಶೋಷಣೆ ಮಾಡುವ ಮೂಲಕ ಮಾಲೀಕರು ಪಡೆಯುತ್ತಿದ್ದಾರೆ.

ಇನ್ನೊಂದು ಕಡೆ, ನವ-ಉದಾರೀಕರಣದ

ಪುಟ 8 ನೋಡಿ

ರಾಜಕಾಲುವೆ ತೆರವುಗೊಳಿಸಲು ಕೂಳೂರಿನಲ್ಲಿ ಡಿವೈಎಫ್‌ಐ ಧರಣಿ

ಮೇ 29 ರಂದು ಮಂಗಳೂರಿನಲ್ಲೂ ದಕ್ಷಿಣ ಕನ್ನಡ ವ್ಯಾಪ್ತಿಯಲ್ಲೂ ಭಾರೀ ಮಳೆ ಸುರಿಯಿತು. ಅದು ಜಿಲ್ಲೆಯಲ್ಲಿ ವರ್ಷದ ಮೊದಲ ದೊಡ್ಡ ಮಳೆ. ಆದರೆ ಪ್ರಥಮ ಮಳೆಯಲ್ಲೇ ಮಂಗಳೂರು ನಗರದ ತಗ್ಗಿನ ಭಾಗಗಳು ಜಲಾವೃತವಾಗಿ ಸಂಚಾರ ಸ್ಥಗಿತ, ಅಪಘಾತ, ಮನೆಕುಸಿತ, ನೆರೆ ಹಾವಳಿ ತೀವ್ರವಾಯಿತು. ಜಿಲ್ಲಾಡಳಿತದ ಪ್ರಾಥಮಿಕ ತನಿಖೆಯಲ್ಲೇ ಮಂಗಳೂರು ನಗರದ ರಾಜಕಾಲುವೆಗಳಲ್ಲಿ ಒತ್ತುವರಿಯಾದುದು ಹಾಗೂ ಹೂಳು ಕಸ ತುಂಬಿರುವುದು ಇದಕ್ಕೆ ಕಾರಣವೆಂದು ಸಾಬೀತಾಗಿದೆ. ಅದರಲ್ಲೂ 2 ಪ್ರಮುಖ ರಾಜಕಾಲುವೆಗಳಾದ ಜಪ್ಪು ತೋಡು ಮತ್ತು ಕೊಟ್ಟಾರ ತೋಡುಗಳ ಹೂಳು ಕಸಗಳ ವಿಲೇವಾರಿಯಿಂದ ಏರಿದ್ದ ನೆರೆಯನ್ನು ನಿವಾರಿಸಲು ಸಾಧ್ಯವಾಯಿತು.

ಕೊಟ್ಟಾರ ರಾಜಕಾಲುವೆ ಹಾದು ಹೋಗುವ ಬಂಗ್ರಕೂಳೂರು ಫೋರ್ತ್‌ಮೈಲ್ ಬಳಿ ಉದ್ಯಮಿಗಳು ಒತ್ತುವರಿ ಮಾಡಿಕೊಂಡಿದ್ದು, ಹೀಗಾಗಿ ಅಲ್ಲಲ್ಲಿ ರಾಜಕಾಲುವೆಗಳ ಅಗಲ ಕಿರಿದಾಗಿದೆ. ಉದ್ಯಮಿಗಳು, ಬಿಲ್ಡರುಗಳು ಒತ್ತುವರಿ ಮಾಡುವಾಗ ಸುಮ್ಮನಿರುವ ಸರಕಾರಿ ಅಧಿಕಾರಿಗಳು, ಅನಾಹುತದಿಂದ ತಮ್ಮ ಮೇಲೆ ಟೀಕೆಗಳ ಸುರಿಮಳೆ ಬಿದ್ದಮೇಲೆ ಎಚ್ಚೆತ್ತುಕೊಳ್ಳುತ್ತಾರೆ. ಒತ್ತುವರಿ ಸಂದರ್ಭದಲ್ಲೇ ಕಾನೂನು ಪ್ರಕಾರ ಅಧಿಕಾರಿಗಳು ತಡೆಯೊಡ್ಡಿದ್ದರೆ, ಮಂಗಳೂರಿನಲ್ಲಿ ಮಳೆ ನೀರು ತುಂಬಿ ಜಲಾವೃತಗೊಂಡು ಸಮಸ್ಯೆಗಳು ಬಿಗಡಾಯಿಸುತ್ತಿರಲಿಲ್ಲ. ನಗರ ಯೋಜನಾ ಪ್ರಾಧಿಕಾರ ಅಕ್ರಮ ಕಟ್ಟಡ ರಚನೆಯಾದಾಗಲೂ ಸುಮ್ಮನಿದ್ದು, ಕೊನೆಯಲ್ಲಿ ಕಂಪ್ಲೀಷನ್ ಪ್ರಮಾಣಪತ್ರ ನೀಡುತ್ತಿದೆ. ಕೂಳೂರು ನದಿ ಸೇರುವ ಕೊಟ್ಟಾರ ರಾಜ ಕಾಲುವೆಯ ಎರಡೂ ಬದಿಗಳಲ್ಲಿ ಕಾನೂನು ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಿಸಲಾಗಿದೆ. ಇಂಥ ಅಕ್ರಮ ಕಟ್ಟಡಗಳನ್ನು ಕೆಡವುವಂತಹ ದಿಟ್ಟತನವನ್ನು ಅಧಿಕಾರಿಗಳು ತೋರಿಸುತ್ತಿಲ್ಲ.

ಕೊಟ್ಟಾರ–ಕೂಳೂರು ರಾಜಕಾಲುವೆ ತೆರವುಗೊಳಿಸಬೇಕು ಹಾಗೂ ಎರಡೂ ಬದಿಗಳಲ್ಲಿನ ಅಕ್ರಮ ಕಟ್ಟಡಗಳನ್ನು ಕೆಡವಬೇಕು ಎಂದು ಆಗ್ರಹಿಸಿ ಡಿವೈಎಫ್‌ಐ ಕೂಳೂರು–ಪಂಜಿಮೊಗರು ಘಟಕದ ವತಿಯಿಂದ ಜೂನ್ 10 ರಂದು ಬಂಗ್ರಕೂಳೂರು ಬಳಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಮಂಗಳೂರು ನಗರ ಪಾಲಿಕೆ ಸದಸ್ಯ ಹಾಗೂ ಡಿವೈಎಫ್‌ಐ ಜಿಲ್ಲಾ ಉಪಾಧ್ಯಕ್ಷ ದಯಾನಂದ ಶೆಟ್ಟಿ, ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಸ್ಥಳೀಯ ಘಟಕ ಮುಖಂಡರಾದ ಅನಿಲ್ ಡಿ'ಸೋಜ, ಚರಣ್ ಪಂಜಿಮೊಗರು, ಸೌಮ್ಯ, ಸಂತೋಷ್ ಡಿ'ಸೋಜ, ಇಬ್ರಾಹಿಂ ಖಲೀಲ್, ಮುಸ್ತಾಫ ಅಂಗರಗುಂಡಿ, ಸಿಪಿಐ(ಎಂ) ಕಾರ್ಯಕರ್ತರಾದ ಅಶೋಕ್ ಶ್ರೀಯಾನ್, ಸ್ಯಾಮುವೆಲ್ ಟೈಟಸ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

– ವಾಸುದೇವ ಉಚ್ಚಿಲ್

ಕಾ. ಸುಭಾಸ ಕೊಪ್ಪಿಕರ್ ಕುಟುಂಬಕ್ಕೆ ಸಹಾಯ ನಿಧಿಗೆ ಮನವಿ



ಉತ್ತರ ಕನ್ನಡ ಜಿಲ್ಲೆಯ ಕಾರ್ಮಿಕ ಚಳುವಳಿಯ ಮುಂಚೂಣಿ ನಾಯಕ, ಸಂಘಟಕ, ಹೋರಾಟಗಾರ ಕಾಮ್ರೇಡ್ ಸುಭಾಶ ಕೊಪ್ಪಿಕರ್ ಮೇ 5 ರಂದು ತೀವ್ರ ಹೃದಯಾಘಾತದಿಂದ ನಮ್ಮನ್ನಗಲಿದರು. ಸಿಐಟಿಯು ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾಗಿ, ಗ್ರಾಮ ಪಂಚಾಯ್ತಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾಗಿ, ಯುವಜನ ಸಂಘಟನೆ ಡಿವೈಎಫ್‌ಐ ಜಿಲ್ಲಾ ಅಧ್ಯಕ್ಷರಾಗಿ, ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ ಜಿಲ್ಲಾ ಮುಖಂಡರಾಗಿ, ಅರಣ್ಯ ಅತಿಕ್ರಮಣ ಭೂಮಿ ಹೋರಾಟ ಸಮಿತಿ ಪದಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಇವರು ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ, ಭಟ್ಕಳ ತಾಲೂಕ ಸಮಿತಿ ಕಾರ್ಯದರ್ಶಿಯಾಗಿದ್ದರು. ಭಟ್ಕಳವನ್ನು ಕೇಂದ್ರವಾಗಿಟ್ಟು ಜಿಲ್ಲೆಯ ಪ್ರಗತಿಪರ ಚಳುವಳಿಗೆ ತನ್ನ ಪ್ರಾಮಾಣಿಕ ಕೊಡುಗೆಯನ್ನು ನೀಡುತ್ತ ಬಂದವರು. ಇವರ ಅಕಾಲಿಕ ಅಗಲುವಿಕೆಯಿಂದ ಚಳುವಳಿಗೆ ಮತ್ತು ಸಾಮಾನ್ಯ ಬಡ ಕುಟುಂಬದ ಇವರ ಅವಲಂಬಿತರಿಗೆ ಸಹಿಸಲಸಾಧ್ಯವಾದ ನಷ್ಟವನ್ನು ನೋವನ್ನು ನೀಡಿದೆ. ಇವರ ಮಡದಿ ಮತ್ತು ಮಗಳಿಗೆ ಕುಟುಂಬ ನಿರ್ವಹಣೆ ಮತ್ತು ಮಗಳ ವಿದ್ಯಾಭ್ಯಾಸಕ್ಕಾಗಿ ಎಲ್ಲಾ ರೀತಿಯ ಸಹಾಯ, ಸಹಕಾರ ನೀಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇದಕ್ಕಾಗಿ ಸಹಾಯ ನಿಧಿ ಸಂಗ್ರಹ ಸಮಿತಿ ರಚಿಸಿಕೊಳ್ಳಲಾಗಿದೆ. ಎಲ್ಲರೂ ವೈಯಕ್ತಿಕವಾಗಿ ಹಾಗೂ ತಮ್ಮ ಸಂಘ/ಸಂಸ್ಥೆಯಿಂದಲೂ ಹೆಚ್ಚಿನ ರೀತಿಯಲ್ಲಿ ಧನ ಸಹಾಯ ನೀಡಬೇಕೆಂದು ಸಮಿತಿಯ ಪರವಾಗಿ ಸಂಚಾಲಕರಾದ ಶಾಂತಾರಾಂ ನಾಯಕ್ ಕೋರಿದ್ದಾರೆ.

– ಶಾಂತಾರಾಂ ನಾಯಕ್

ಶೇಖರ್ ಲಾಯಿಲಾ ವಿವಾಹ

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಂಘಟನಾ ಸಮಿತಿಯ ಸದಸ್ಯ, ದಲಿತ ಹಕ್ಕುಗಳ ಸಮಿತಿಯ ದಕ್ಷಿಣ ಕನ್ನಡ ಜಿಲ್ಲೆಯ ಮುಖಂಡ ಶೇಖರ್ ಲಾಯಿಲಾ ಮತ್ತು ಬೀಡಿ ಕೆಲಸಗಾರರ ಸಂಘದ ಕಾರ್ಯಕರ್ತೆಯಾಗಿದ್ದ ಸಿಐಟಿಯು ಸಂಗಾತಿ ಮಾಲಿನಿ ಯವರ ವಿವಾಹ ಸಮಾರಂಭ ಇದೇ 2018, ಎಪ್ರಿಲ್ 8 ರಂದು ಬೆಳ್ತಂಗಡಿಯ ನಾರಾಯಣ ಗುರು ಕಲ್ಯಾಣ ಮಂಟಪದಲ್ಲಿ ಜರುಗಿತು.

ಈ ಸಮಾರಂಭಕ್ಕೆ ಸಾಕ್ಷಿಯಾಗಿ ಶುಭ ಹಾರೈಸಿದವರು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿದ್ದ ದಿನೇಶ್ ಅಮೀನ್ ಮಟ್ಟು ರವರು ಹಾಗೂ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕರಾದ ಎಸ್.ವೈ. ಗುರುಶಾಂತ್ ರವರು. ಅಲ್ಲದೇ ಆಗಮಿಸಿದವರು ಹಲವು ಕ್ಷೇತ್ರಗಳ ಗಣ್ಯರು, ವಿವಿಧ ಸಂಘಟನೆಗಳ ಪ್ರಮುಖರು, ಗೆಳೆಯರು, ಬಂಧು–ಬಳಗ ಇತ್ಯಾದಿ...

ಈ ಸಮಾರಂಭ ಅತ್ಯಂತ ಸರಳ, ಸುಲಲಿತವಾಗಿತ್ತು. ಹಿರಿಯರಾದ ಅಮೀನ್ ಮಟ್ಟು ರವರ ಕೆಲವು ಪ್ರಧಾನ ಮಾತುಗಳು. ಸಂಗಾತಿ ಎಸ್.ವೈ.ಗುರುಶಾಂತ್‌ರವರಿಂದ ಜೋಡಿಗಳಿಗೆ ಪ್ರತಿಜ್ಞಾ ವಿಧಿ ಬೋಧನೆ. ನಂತರ ಎಲ್ಲರಿಂದ ಶುಭ ಹಾರೈಕೆಗಳು. ಹೀಗೆ ಶುಭ ಹಾರೈಸಿದ ಪ್ರಮುಖರಲ್ಲಿ ಅಂದು ಶಾಸಕರಾಗಿದ್ದ ವಸಂತ ಬಂಗೇರಾ, ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ಶಿವಕುಮಾರ್, ರೈತ ನಾಯಕ ಹರಿದಾಸ್, ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ನ್ಯಾಯವಾದಿ ಸುಕನ್ಯಾ ಹೆಬ್ಬಾರ್, ಕಾರ್ಮಿಕ ನಾಯಕ ವಸಂತ ನಡ, ಪತ್ರಕರ್ತ ಶಿಬಿ ಧರ್ಮಸ್ಥಳ ಮತ್ತು ಹಲವು ಮಾಧ್ಯಮ ಮಿತ್ರರು, ಆದಿವಾಸಿ ಸಂಘದ ಜಯಾನಂದ ಪಿಲಿಕುಲ, ಲಕ್ಷ್ಮಣ ಅಲಂಗಾಯಿ ಮಲೆಕುಡಿಯ ಮತ್ತಿತರರು, ದಲಿತ ಸಂಘಟನೆಗಳ ನಾಯಕರಾದ ಚಂದು.ಎಲ್, ಬಿ.ಕೆ.ವಸಂತ, ಜಿಲ್ಲಾ ಪಂಚಾಯತ್ ಸದಸ್ಯರಾದ ಧರಣೇಂದ್ರಕುಮಾರ್ ಹಾಗೂ ಶೇಖರ್ ಕುಕ್ಕೇಡಿ, ನಗರ ಪಂಚಾಯತ್ ಅಧ್ಯಕ್ಷರಾದ ಮುಗಳಿ ನಾರಾಯಣರಾವ್ ಮುಂತಾಗಿ.

ಜನಶಕ್ತಿಗೆ ನಿಧಿ ಕೊಡುಗೆ

ಈ ವಿವಾಹದ ಸಂತೋಷದ ನೆನಪಿನಲ್ಲಿ ದುಡಿಯುವ ಜನರ ಪ್ರಾಣ ಮಿತ್ರ 'ಜನಶಕ್ತಿ' ವಾರ ಪತ್ರಿಕೆಗೆ ನವ ದಂಪತಿಗಳು ರೂ.2000/– ನಿಧಿ ಕೊಡುಗೆಯಾಗಿ ನೀಡಿ ಪ್ರಕಟಣೆಗೆ ನೆರವಾದರು. ಸಾಮಾಜಿಕ ಬದ್ಧತೆಯ ಈ ನವ ದಂಪತಿಗಳಿಗೆ ಜನಶಕ್ತಿ ತುಂಬು ಹೃದಯದ ಶುಭಾಶಯಗಳನ್ನು ತಿಳಿಸಿದೆ.

– ಗುರುಶಾಂತ್ ಎಸ್.ವೈ.



ಗೌರಿ ಲಂಕೇಶ್ ರವರಿಗೆ ಮರಣೋತ್ತರ ಪ್ರಶಸ್ತಿ



ಸಾಮಾಜಿಕ ಕಳಕಳಿ ಮತ್ತು ಕೋಮು ಸೌಹಾರ್ದತೆಗೆ ಬದ್ಧವಾಗಿ ಕ್ರಿಯಾಶೀಲವಾಗಿದ್ದ ಪತ್ರಕರ್ತೆ, ಸಾಮಾಜಿಕ ಕಾರ್ಯಕರ್ತೆ, ಕೋಮುವಾದಿ ಫ್ಯಾಶಿಸ್ಟ್ ಶಕ್ತಿಗಳಿಂದ ಹತ್ಯೆಗೀಡಾದ **ಗೌರಿ ಲಂಕೇಶ್** ರವರಿಗೆ ಮರಣೋತ್ತರ ಪ್ರಶಸ್ತಿಯನ್ನು ನೀಡಿ ಗೌರವ ಸಲ್ಲಿಸಲು **ಕೇರಳ ಗೆಜೆಟೆಡ್ ಅಧಿಕಾರಿಗಳ ಸಂಘ (ಕೆ.ಜಿ.ಓ.ಎ)** ನಿರ್ಧರಿಸಿದೆ.

ಇತ್ತೀಚೆಗೆ ಅದರ ರಾಜ್ಯ ಕಾರ್ಯಕಾರಿಣಿ ಸಮಿತಿಯ ಸಭೆಯು ತಿರುವನಂತಪುರದಲ್ಲಿ ಸೇರಿತ್ತು.

ಈ ಪ್ರಶಸ್ತಿಯನ್ನು **'ಡಾ.ಎನ್.ಎಂ.ಮಹಮ್ಮದ್ ಅಲಿ ದತ್ತಿ ಪ್ರಶಸ್ತಿ'** ಹೆಸರಿನಲ್ಲಿ ಸಂಘವು ನೀಡಲಿದೆ. ಡಾ.ಮಹಮದ್ ಅಲಿ ಯವರು ಕೇರಳದ ಸರ್ಕಾರಿ ನೌಕರರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಮಾತ್ರವಲ್ಲ, ಮುಖ್ಯವಾಗಿ ಅವರು ಗೆಜೆಟೆಡ್ ಅಧಿಕಾರಿಗಳ ಸಂಘದ ಅಧ್ಯಕ್ಷರಾಗಿ, ಪ್ರಧಾನ ಕಾರ್ಯದರ್ಶಿಯಾಗಿ ದೀರ್ಘ ಕಾಲ ನಾಯಕತ್ವ ಕೊಟ್ಟವರು. ವೃತ್ತಿಯಲ್ಲಿ ವೈದ್ಯರಾಗಿದ್ದ ಅವರು ಸದಾ ಜನಪರವಾಗಿದ್ದವರು. ಹೀಗಾಗಿಯೇ ಅವರು ಅತ್ಯಂತ ಜನಪ್ರಿಯ ವೈದ್ಯರೂ ಆಗಿದ್ದರು. ಸಾಮಾಜಿಕ ಕಳಕಳಿಯುಳ್ಳ ಅವರು ಕೋಮು ಸೌಹಾರ್ದತೆಗಾಗಿ ಶ್ರಮಿಸಿದವರು. ಅವರ ಮತ್ತೊಂದು ವಿಶೇಷತೆಯೆಂದರೆ ಹಲವಾರು ಮನೋ ವೈಜ್ಞಾನಿಕ, ವೈಚಾರಿಕ ವಿಶ್ಲೇಷಣೆಯುಳ್ಳ ಹಲವು ಪುಸ್ತಕಗಳನ್ನು ಹಾಗೂ ಕಾದಂಬರಿಯನ್ನೂ ಬರೆದಿದ್ದಾರೆ. ಹೀಗಾಗಿ ಅವರ ಹೆಸರಿನಲ್ಲಿ ಸಂಘವು 2016 ರಿಂದ ಪ್ರಶಸ್ತಿಯನ್ನು ನೀಡುತ್ತಿದೆ.

ಪ್ರಶಸ್ತಿಯು ರೂ. 50,000/–ಗಳು ಮತ್ತು ಒಂದು ಫಲಕವನ್ನು ಒಳಗೊಂಡಿದೆ.

ಮೊದಲು ವೈದ್ಯಕೀಯ ಕ್ಷೇತ್ರ, ಕಳೆದ ವರುಷ ಕಾರ್ಮಿಕ ಸಂಘಟನೆ ಮುಖಂಡರಿಗೆ ಪ್ರಶಸ್ತಿಯನ್ನು ನೀಡಿದೆ. ಈ ಬಾರಿ ಸಾಮಾಜಿಕ ಕಾರ್ಯಕರ್ತರಿಗೆ ಪ್ರಶಸ್ತಿ ನೀಡಬೇಕೆಂದು ಎಂದು ಸಮಿತಿಯು ನಿರ್ಧರಿಸಿತ್ತು.

ಪ್ರಶಸ್ತಿ ಪ್ರಧಾನ ಸಮಾರಂಭವು ಇದೇ 2018 ರ ಜೂನ್ 22 ರಂದು ಮಧ್ಯಾಹ್ನ 3 ಗಂಟೆಗೆ ತಿರುವನಂತಪುರದ ವಿ.ಜೆ.ಟಿ. ಹಾಲ್‌ನಲ್ಲಿ ಜರುಗಲಿದೆ.

ಅಕಾಲಿಕ ಮಳೆ ಬಿರುಗಾಳಿಗಳಿಂದ ಬಾಧಿತರಿಗೆ ಪರಿಹಾರಕ್ಕೆ ರೈತ ಸಂಘಟನೆಗಳ ಆಗ್ರಹ



ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಅಖಿಲ ಕರ್ನಾಟಕ ರೈತರ ಕೃಷಿ ಟ್ರ್ಯಾಕ್ಟರ್ ಮಾಲೀಕರ ಸಂಘದ ಪ್ರತಿನಿಧಿಗಳು ಜಂಟಿಯಾಗಿ ರೈತರ ಹಾಗೂ ಕೃಷಿ ಟ್ರ್ಯಾಕ್ಟರ್‌ರ ಹಲವು ಬೇಡಿಕೆ ಈಡೇರಿಸಬೇಕೆಂದು ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಜಿಲ್ಲಾ ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ಆಪ್ತ ಸಹಾಯಕರಾದ ಕಟ್ಟಿಮನಿಯವರ ಮೂಲಕ ಕರ್ನಾಟಕ ಸರ್ಕಾರದ ನೂತನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯದ ಉಪಾಧ್ಯಕ್ಷರಾದ ಭಿಮಶಿ ಕಲಾದಗಿ ಮಾತನಾಡಿ, ಅಕಾಲಿಕ ಮಳೆ ಬಿರುಗಾಳಿಯಿಂದ ದ್ರಾಕ್ಷಿ, ದಾಳಿಂಬೆ, ಮಾವು ಎಲೆ ತೋಟ ಹಾಗೂ ಇನ್ನಿತರ ಹಣ್ಣಿನ ಬೆಳೆಗಳು ಅಪಾರ ಪ್ರಮಾಣದಲ್ಲಿ ಕೋಟ್ಯಾಂತರ ರುಪಾಯಿ ಮೌಲ್ಯಗಳ ಬೆಳೆಗಳು ಹಾನಿಗೊಳಗಾಗಿವೆ. ನಾಡಿನ ಮುಖ್ಯಮಂತ್ರಿಯವರು ಹಾನಿಗೊಳಗಾದ ಪ್ರದೇಶಕ್ಕೆ ತೆರಳಿ ಸಮೀಕ್ಷೆ ಮಾಡಿ ಹಾನಿಗೊಳಗಾದವರಿಗೆ ಪರಿಹಾರ ನೀಡಬೇಕು. ಎಲೆ ಬೆಳ್ಳಿ ತೋಟಗಳು ಬಾಗೇವಾಡಿ ತಾಲೂಕ ಮತ್ತು ಕೂಡಗಿ ತಳೇವಾಡದಲ್ಲಿ ಸಂಪೂರ್ಣ ನಾಶವಾಗಿದ್ದಾವೆ. ಇದರ ಕುರಿತು ತಹಶೀಲ್ದಾರರಿಗೆ ರೈತರು ಮನವಿ ಸಲ್ಲಿಸಿದರು ಕೂಡ ಯಾವುದೇ ಪ್ರಯೋಜನವಾಗಲಿ, ಪರಿಹಾರವಾಗಲಿ ರೈತರಿಗೆ ನೀಡಿಲ್ಲ. ತಕ್ಷಣ ನಾಶವಾದ ಪ್ರದೇಶಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತೆರಳಿ ಪರಿಶೀಲಿಸಿ ಅವರಿಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ಅಖಿಲ ಕರ್ನಾಟಕ ಕೃಷಿ ಟ್ರ್ಯಾಕ್ಟರ್ ಸಂಘದ ಅಧ್ಯಕ್ಷರಾದ ಡಾ.ಎಸ್.ಜಿ. ಪಾಟೀಲ ಮಾತನಾಡಿ, ವಿಜಯಪುರ ಜಿಲ್ಲೆಯಲ್ಲಿ ಸರಿಯಾಗಿ ಮಳೆಯಾಗದೆ ಬೆಳೆಬಾರದೆ ಟ್ರ್ಯಾಕ್ಟರ್ ಸಾಲ ಇನ್ನಿತರ ಸಾಲ ತಗೆದುಕೊಂಡಿದ್ದ ರೈತರು ತುಂಬಲಾಗದೇ ಸಾವಿಗೆ ಶರಣಾಗಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ ಹಾಗೂ ಸಹಕಾರಿ ಸಂಘಗಳಿಂದ ಸಾಲವನ್ನು ತೆಗೆದುಕೊಂಡಿದ್ದು ಸಾಲವನ್ನು ತುಂಬಲಾಗದೇ ಬಹಳಷ್ಟು ಸಂಕಟದಲ್ಲಿದ್ದಾರೆ. ಕಾಂಗ್ರೆಸ್ ಜೆಡಿಎಸ್ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಗಳಾಗಿದ್ದ ಕುಮಾರಸ್ವಾಮಿಯವರು ಚುನಾವಣೆಯ ಪೂರ್ವ ಸಾಲ ಮನ್ನಾ ಮಾಡುತ್ತೇನೆಂದು ತಿಳಿಸಿ 2009 ರಿಂದ 2017ರ ವರೆಗಿನ ಸಾಲ ಮಾತ್ರ ಸಂಪೂರ್ಣ ಮನ್ನಾ ಮಾಡಲಾಗುವುದೆಂದು ಘೋಷಣೆಯಲ್ಲಿ ತಿಳಿಸಿದ್ದಾರೆ. ಮಾರ್ಚ 2007 ರಿಂದ 2017 ರ ತನಕ ಸಂಪೂರ್ಣ ಸಾಲ ಮನ್ನಾ ಘೋಷಣೆ ಮಾಡಲೇಬೇಕು. ಬರುವ ಹದಿನೈದು ದಿವಸಗಳಲ್ಲಿ ಸಾಲ ಮನ್ನಾ ಘೋಷಣೆ ಮಾಡದಿದ್ದರೆ ನಮ್ಮ ಸಂಘಟನೆಗಳ ಮೂಲಕ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಿದರು.

ಈ ಸಂಧರ್ಭದಲ್ಲಿ ಟ್ರ್ಯಾಕ್ಟರ್ ಸಂಘದ ಉಪಾಧ್ಯಕ್ಷರಾದ ಈರಣ್ಣ ಆರ್.ಕಾಪಸೆ, ಶಿವು ರಾಠೋಡ, ಇಮಾಮ್‌ಸಾಬ ಮುಲ್ಲಾ, ರೈತ ಸಂಘದ ಸಿದ್ರಾಮ ಬಂಗಾರಿ, ಜನವಾದಿ ಮಹಿಳಾ ಸಂಘದ ಈರಾಬಾಯಿ ಹಜೇರಿ, ಸೋನುಬಾಯಿ ಬ್ಯಾಳಿ, ಸುಮಿತ್ರ ಭೀ. ಗೊಣಸಗಿ, ರಾಜಶೇಖರ ರಣದೇವಿ ಮುಂತಾದವರು ಭಾಗವಹಿಸಿದ್ದರು.

ಗೌರಿ, ಕಲಬುರ್ಗಿ ಹಂತಕರನ್ನು ಬಂಧಿಸಲು ಆಗ್ರಹ

ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಕಳೆದ ನಾಲ್ಕು ವರ್ಷಗಳ ಅಂತರದಲ್ಲಿ ನಾಲ್ಕು ಕೊಲೆಗಳು ಸೈದ್ಧಾಂತಿಕ ಭಿನ್ನಾಭಿಪ್ರಾಯದ ಕಾರಣವಾಗಿ ನಡೆದಿವೆ. ಮಹಾರಾಷ್ಟ್ರದ ಡಾ.ನರೇಂದ್ರ ದಾಬೋಲ್ಕರ್ ಮತ್ತು ಕಾ.ಗೋವಿಂದ ಪನ್ಸಾರೆ. ಕರ್ನಾಟಕದ ಡಾ.ಎಂ.ಎಂ.ಕಲಬುರ್ಗಿ ಮತ್ತು ಗೌರಿ ಲಂಕೇಶ. ಈ ನಾಲ್ವರು ಬಹುಸಾಂಸ್ಕೃತಿಕ ಪರಂಪರೆಯ ಪ್ರತಿಪಾದಕರಾಗಿದ್ದರು. ವೈಜ್ಞಾನಿಕ ವೈಚಾರಿಕ ಚಿಂತನೆಯ ಜೀವಪರ ಚಟುವಟಿಕೆ ನಡೆಸುವವರಾಗಿದ್ದರು. ಇವರುಗಳಿಗೆ ಕೊಲೆಯ ಬೆದರಿಕೆಗಳು ಬಲಪಂಥೀಯ ಮತೀಯವಾದಿಗಳಿಂದ ನಿರಂತರ ಬರುತ್ತಲೇ ಇದ್ದವು.

ಈಗ ಕರ್ನಾಟಕದಲ್ಲಿ ಕೊಲೆಯಾಗಲ್ಪಟ್ಟ ಚಿಂತಕಿ ಪತ್ರಕರ್ತೆ ಗೌರಿ ಲಂಕೇಶ್ ಅವರ ಕೊಲೆಯ ಆರೋಪಿಗಳನ್ನು ಬಂಧಿಸಲಾಗಿದೆ. ಎಸ್.ಐ.ಟಿ. ಮತ್ತು ಪೋಲಿಸ್ ಇಲಾಖೆಗೆ ಖಂಡಿತ ಧನ್ಯವಾದಗಳು. ಈ ತನಿಖಾ ಕ್ರಮವು ಇನ್ನಷ್ಟು ತೀವ್ರಗತಿಯಿಂದ ನಿರ್ಭಯದಿಂದ ಮುಂದುವರೆಯಬೇಕಿದೆ. ಡಾ.ಎಂ.ಎಂ.ಕಲಬುರ್ಗಿಯವರ ಕೊಲೆಯೂ ನಡೆದಿದ್ದು ಅವರ ಮನೆಯಲ್ಲಿಯೇ. ಕೊಲೆಗಡಕರು ಮನೆಯೊಳಗೆ ಬಂದು ಹಣೆಗೆ ಗುಂಡಿಟ್ಟು ಬೈಕ್ ಮೇಲೆ ಪರಾರಿ ಆಗಿರುವ ಕುರಿತು ಪೋಲಿಸ್ ಇಲಾಖೆ ದೃಢಪಡಿಸಿದೆ. ಅದೆ ರೀತಿಯಲ್ಲಿಯೇ ಗೌರಿ ಕೊಲೆ ನಡೆದಿದೆ. ನಾಲ್ಕೂ ಕೊಲೆಗಳೂ ಇಂತಹದೇ ಮಾದರಿಯಲ್ಲಿ ನಡೆದಿರುವುದು ಪೋಲಿಸ್ ಇಲಾಖೆ ಗಂಭೀರವಾಗಿಯೇ ಪರಿಗಣಿಸಬೇಕಿದೆ. ಈಗ ಬಂಧನಕ್ಕೊಳಗಾಗಿರುವ ಆರೋಪಿಗಳು ಅನೇಕ ಮತೀಯ ಪಿತೂರಿಯಲ್ಲಿ ಭಾಗಿಯಾದ ಆರೋಪಕ್ಕೊಳಗಾಗಿದ್ದವರೇ.ಮತೀಯ ಸಂಘಟನೆಗಳ ಸಕ್ರಿಯ ಕಾರ್ಯಕರ್ತರೇ. ವಿಜಯಪುರ ಜಿಲ್ಲೆಯ ಸಿಂದಗಿಯಲ್ಲಿ ಪಾಕಿಸ್ತಾನದ ಬಾವುಟ ಹಾರಿಸಿ ಗಲಭೆ ಹಬ್ಬಿಸಲು ಮಾಡಿದ ಷಡ್ಯಂತ್ರದಲ್ಲಿ ಸಿಕ್ಕಿ ಬಿದ್ದವನೇ ಪರಶುರಾಮ ವಾಘ್ಮೋರೆ. ಹಸು ಪಾಲಕರ ಮೇಲೆ ಹಲ್ಲೆ ಮತ್ತಿತರ ಮತೀಯ ಗಲಭೆಯ ಗಂಭೀರ ಆರೋಪ ಈತನ ಮೇಲಿವೆ.

ಹೀಗೆಂದಿರುವ ಕಲಬುರಗಿಯ ಪ್ರಗತಿಪರ ಸಂಘಟನೆಗಳ ಒಕ್ಕೂಟ 13 ಜೂನ್ 2018 ರಂದು ಈ ಕೆಳಕಂಡಂತಹ ಆಗ್ರಹಗಳಿಗಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸಿತು.

ಆಗ್ರಹಗಳು :–

1. ಗೌರಿ ಲಂಕೇಶ್ ಹತ್ಯೆಗೈದ ಆರೋಪಿಗಳನ್ನು ಬಂಧಿಸಿದ ಕರ್ನಾಟಕದ ಪೋಲಿಸ್ ಇಲಾಖೆಗೆ ನಿಷ್ಪಕ್ಷಪಾತವಾಗಿ ಮುಂದಿನ ಕ್ರಮ ಕೈಗೊಳ್ಳಲು ಸಮಗ್ರ ತನಿಖೆ ನಡೆಸಲು ಸ್ವಾತಂತ್ರ್ಯ ಮತ್ತು ನೈತಿಕ ಧೈರ್ಯ ಕೊಡಬೇಕು. ಯಾವ ಕಾರಣಕ್ಕೂ ಪೋಲಿಸ್ ಇಲಾಖೆಯ ತನಿಖೆಯನ್ನು ದುರ್ಬಲಗೊಳಿಸುವ ವಿದ್ಯಮಾನಗಳು ನಡೆಯಬಾರದು.
2. ಹಂತಕ ಆರೋಪಿಗಳ ಹಿನ್ನೆಲೆಯು ಬಲಪಂಥೀಯ ಕೋಮುಸಂಘಟನೆಗಳ (ಶ್ರೀರಾಮ ಸೇನೆ, ಸನಾತನ ಸಂಸ್ಥೆ ಇತ್ಯಾದಿ) ನಂಟು ಹೊಂದಿರುವುದು ಸ್ಪಷ್ಟವಾಗಿದೆ. ಆದ್ದರಿಂದ ಅಂತಹ ಎಲ್ಲ ಕೋಮುವಾದಿ ಸಂಘಟನೆಗಳ ಸಮಗ್ರ ತನಿಖೆ ನಡೆಯಬೇಕು. ಭಾರತೀಯ ಬಹುವಾಗ್ವಾದವುಳ್ಳ ಹಿಂದೂತತ್ವಶಾಸ್ತ್ರದ ಗರಿಮೆಯನ್ನು ಮಣ್ಣು ಮುಕ್ಕಿಸುತ್ತಿರುವ ಮತಾಂಧ ಸಂಘಟನೆಗಳಾದ ಶ್ರೀರಾಮ ಸೇನೆ, ಸನಾತನ ಸಂಸ್ಥೆ ಮತ್ತಿತರ ಸಂಘಟನೆಗಳ ತನಿಖೆ ನಡೆಸಿ ನಿಷೇಧ ಹೇರಬೇಕು.
3. ಇಂತಹ ಮತೀಯ ಹತ್ಯಾಸಂಸ್ಕೃತಿಗೆ ಕಾರಣವಾಗುತ್ತಿರುವ ಧರ್ಮದ ಹೆಸರಿನಲ್ಲಿ ಮತೀಯ ಭಯೋತ್ಪಾದನೆ ಹುಟ್ಟು ಹಾಕಿ ಯುವಜನತೆಯನ್ನು ಕೊಲೆಗಡುಕರನ್ನಾಗಿ ಮಾಡುತ್ತಿರುವ ಎಲ್ಲ ಕೋಮು ಸಂಘಟನೆಗಳನ್ನು ನಿಷೇಧಿಸಬೇಕು.
4. ಡಾ.ಎಂ.ಎಂ.ಕಲಬುರ್ಗಿ, ಡಾ.ನರೇಂದ್ರ ದಾಬೋಲ್ಕರ್ ಹಾಗೂ ಕಾ.ಗೋವಿಂದ ಪಾನ್ಸಾರೆ ಇವರನ್ನು ಹತ್ಯೆ ಮಾಡಿದವರನ್ನೂ ಬಂಧಿಸುವಲ್ಲಿ ತ್ವರಿತಗತಿಯ ಕ್ರಮ ಕೈಗೊಳ್ಳಬೇಕು.

ಅಖಿಲ ಭಾರತ ಸರಕಾರಿ ನೌಕರರ ಬೇಡಿಕೆ ದಿನಾಚಾರಣೆ



ರಾಜ್ಯ, ಕೇಂದ್ರ ಸಮಿತಿಯ ಕರೆಯ ಮೇರೆಗೆ ವಿಜಯಪುರ ಜಿಲ್ಲಾ ಸರಕಾರ ನೌಕರರ ಒಕ್ಕೂಟದಿಂದ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಗೆ ಪ್ರತಿಭಟನೆಯ ಮೂಲಕ ತೆರಳಿ ವಿವಿಧ ಬೇಡಿಕೆ ಈಡೇರಿಸಬೇಕೆಂದು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಚಂದ್ರಶೇಖರ ಲೆಂಡಿ, ರಾಜ್ಯ ಕಾರ್ಯದರ್ಶಿ ಸುರೇಶ ಜೆ.ಬಿ ಮಾತನಾಡಿ, ಅವೈಜ್ಞಾನಿಕವಾದ ಹೊಸ ಪಿಂಚಣಿ ಪದ್ಧತಿಯನ್ನು ಎನ್.ಪಿ.ಎಸ್ ರದ್ದುಗೊಳಿಸಿ ನಿಶ್ಚಿತ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕು ಹಾಗೂ ಹೊರ ಗುತ್ತಿಗೆ ನೌಕರರಿಗೆ ಸರಿ ಸಮಾನ ವೇತನ ಸೌಲಭ್ಯ ನೀಡಬೇಕು. ಎಲ್ಲ ಗುತ್ತಿಗೆ ಆಧಾರಿತ, ದಿನಗೂಲಿ ಆಧಾರಿತ ಹೊರಗುತಿಗೆ ನೌಕರರನ್ನು ನಿಯಮಾನುಸಾರ ಖಾಯಂಗೊಳಿಸಬೇಕು. ಎಲ್ಲರಿಗೂ ಕನಿಷ್ಠ ವೇತನ ಸೌಲಭ್ಯ ನೀಡಬೇಕು. ಕೇಂದ್ರ ಸರಿಸಮಾನ ವೇತನ ಸೌಲಭ್ಯ ನೀಡಬೇಕು. 1956ರಿಂದ ಇತ್ತೀಚಿಗೆ ಕೇಂದ್ರವು 7 ಸಲ ವೇತನ ಪರಿಷ್ಕರಣೆ ಮಾಡಿದ್ದು, ರಾಜ್ಯ ಸರ್ಕಾರ 6 ಸಲ ವೇತನ ಪರಿಷ್ಕರಣೆ ಮಾಡಿದೆ. ಆದರೆ ಕೇಂದ್ರಕ್ಕೆ ಸಮಾನವಾಗಿ ವೇತನ ಸೌಲಭ್ಯ ನೀಡಲು ರಾಜ್ಯ ಸರಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು ತಕ್ಷಣ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ಇತ್ತಕಡೆ ಗಮನ ಹರಿಸಿ ಸಮಸ್ಯೆಯನ್ನು ಪರಿಹರಿಸಿ ನೌಕರರ ಬೇಡಿಕೆ ಈಡೇರಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಮಾನದಲ್ಲಿ ಒಕ್ಕೂಟದ ವತಿಯಿಂದ ಉಗ್ರಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಂತೋಷ ಬಿರಾದಾರ, ಉದಯ ಕುಲಕರ್ಣಿ, ಎಸ್.ಜಿ. ಸಂಗಾಪೂರ, ನೀಲಮ್ಮ ಹರದೊಳ್ಳಿ, ಆರ್. ಎಸ್. ಮೇಣಸಗಿ, ಜಿ.ಬಿ. ಅಂಗಡಿ ಹಾಗೂ ದಿನಗೂಲಿ ನೌಕರರ ಸಂಘದ ಅಧ್ಯಕ್ಷರಾದ ಎ.ಎಮ್. ಪಾಟೀಲ, ಕೊಂಡಗೂಳಿ, ಬಳ್ಳೂರ, ಆರ್.ಸಿ.ತಳವಾರ ಮುಂತಾದವರು ಭಾಗಹಿಸಿದ್ದರು.

●

ಜಿ.ಡಿ.ಪಿ. ಯಲ್ಲಿ ಕುಸಿತ: ಎನ್.ಡಿ.ಎ ಸಾಧನೆ!

ಅತಿಥಿ ಅಂಕಣ



ಪ್ರೊ. ಟಿ. ಆರ್. ಚಂದ್ರಶೇಖರ

ಈ ಸರ್ಕಾರವು ಅಧಿಕಾರಕ್ಕೆ ಬಂದಾಗ ಆರ್ಥಿಕ ಅಭಿವೃದ್ಧಿಯ ಬೆಳವಣಿಗೆ ಗತಿಯು ಸರಾಸರಿ ಶೇ.8 ರಷ್ಟಿತ್ತು. ಆದರೆ ಅದರ ನಂತರ ಅದು ತೀವ್ರ ಅಭದ್ರತೆಗೆ ಒಳಗಾಗಿ 2017–18ರಲ್ಲಿ ಅದರ ಬೆಳವಣಿಗೆ ದರ ಶೇ. 6.7ಕ್ಕೆ ಕುಸಿದಿದೆ. ಭಾರತೀಯ ರಿಸರ್ವ್ ಬ್ಯಾಂಕು ನಡೆಸಿದ ಅನುಭೋಗಿಗಳ ಆತ್ಮವಿಶ್ವಾಸ ಸಮೀಕ್ಷೆ ಪ್ರಕಾರ 2015ರಲ್ಲಿ ವರಮಾನದಲ್ಲಿ ಏರಿಕೆಯಾಗುತ್ತಿದೆಯೇ, ಉದ್ಯೋಗದ ಅವಕಾಶಗಳು ವರ್ಧಿಸುತ್ತಿವೆಯೇ ಮತ್ತು ಒಟ್ಟಾರೆ ಆರ್ಥಿಕ ಸ್ಥಿತಿಯು ಉತ್ತಮವಾಗಿದೆಯೇ ಎಂಬ ಪ್ರಶ್ನೆಗಳಿಗೆ ಸಂತೃಪ್ತಿಯ–ಸಮಾಧಾನದ ಉತ್ತರ ನೀಡಿದ್ದ ಜನರ ಪ್ರಮಾಣ 2015 ರಲ್ಲಿ ಕ್ರಮವಾಗಿ ಶೇ. 34.9, ಶೇ.36 ಮತ್ತು ಶೇ.43.1 ರಷ್ಟಿದ್ದುದು 2017ರಲ್ಲಿ ಅದು ಕ್ರಮವಾಗಿ ಶೇ.23.8, ಶೇ.30.8 ಮತ್ತು ಶೇ.32.4ಕ್ಕೆ ಕುಸಿದಿದೆ. ಆರ್ಥಿಕ ಸ್ಥಿತಿಯು ಅಭದ್ರವಾಗುತ್ತಿದೆ ಮತ್ತು ಜನರ ಭಾವನೆಯೂ ನಿರಾಶಾದಾಯಕವಾಗಿದೆ. ಅಭಿವೃದ್ಧಿಗೆ ಬಂಡವಾಳ, ಮೂಲ ಸೌಲಭ್ಯಗಳು, ತಂತ್ರಜ್ಞಾನ ಎಷ್ಟು ಮುಖ್ಯವೋ ಜನರ ಮಾನಸಿಕ ಭಾವನೆಯೂ ಅಷ್ಟೇ ಮುಖ್ಯ. ಇಂದು ಜನರಲ್ಲಿ ಆರ್ಥಿಕತೆ ಬಗ್ಗೆ ವಿಶ್ವಾಸ ಕುಸಿದಿದೆ. ಇದು ಆತಂಕಕಾರಿ ಸಂಗತಿಯಾಗಿದೆ.

ನಮ್ಮ ಈಗಿನ ಕೇಂದ್ರ ಸರ್ಕಾರವು ಅಧಿಕಾರಕ್ಕೆ ಬಂದಾಗಿನಿಂದ ವರಮಾನ, ಅದರಲ್ಲಿನ ಏರಿಕೆಯನ್ನೇ ಅಭಿವೃದ್ಧಿ ಎಂದು ಪರಿಭಾವಿಸಿಕೊಂಡು ಬರುತ್ತಿದೆ. ಅದಕ್ಕೆ ಅದರ ಒಳರಚನೆಯ ಬಗ್ಗೆಯಾಗಲಿ ಅಥವಾ ಏರಿಕೆಯಾದ ಜಿ ಡಿ ಪಿ ಯು ಯಾರ ವಶವಾಗುತ್ತಿದೆ ಅನ್ನುವುದರ ಬಗ್ಗೆಯಾಗಲಿ ಅಥವಾ ಅದರ ದೀರ್ಘಾವಧಿ ಬೆಳವಣಿಗೆ ಪ್ರವೃತ್ತಿ ಬಗ್ಗೆಯಾಗಲಿ ರವಷ್ಟು ಕಾಳಜಿಯಿಲ್ಲ. ಏಕೆಂದರೆ ಈ ಸರ್ಕಾರದ ಮೂಲ ಧೋರಣೆ: ಮೊದಲು ಉತ್ಪಾದನೆ, ನಂತರ ವಿತರಣೆ. ಮೊದಲನೆಯದರ ಬಗ್ಗೆ ಸರ್ಕಾರವು ತೀವ್ರ ಆಸಕ್ತಿ ತೋರಿಸುತ್ತಿದೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಉದಾಹರಣೆಗೆ 'ವ್ಯವಹಾರವನ್ನು ಸರಳಗೊಳಿಸುವುದು', 'ಮೇಕ್ ಇನ್ ಇಂಡಿಯಾ', 'ಸ್ಟಾಂಡ್ ಅಪ್ ಇಂಡಿಯಾ', 'ಸ್ಟಾರ್ಟ್ ಅಪ್ ಇಂಡಿಯಾ', 'ಡಿಜಿಟಲೈಸೇಶನ್' ಮುಂತಾದವು. ಈ ಸರ್ಕಾರವು 2014 ರಲ್ಲಿ ನೀಡಿದ ಘೋಷಣೆ 'ಲೆಸ್ ಗೌವರ್ನಮೆಂಟ್: ಮೋರ್ ಗೌವರ್ನೆನ್ಸ್'. ವಿತರಣೆಯನ್ನು ಸರ್ಕಾರವು ಮಾರುಕಟ್ಟೆಯ ವಶಕ್ಕೆ ಬಿಟ್ಟುಕೊಟ್ಟಿದೆ. ಪೆಟ್ರೋಲ್ ಮತ್ತು ಡೀಸಲ್ ಬೆಲೆಗಳ ನಿರ್ವಹಣೆ ಇದಕ್ಕೆ ಪಕ್ಕಾ ನಿದರ್ಶನವಾಗಿದೆ.

ಜಿಡಿಪಿಯ ಸತತ ಕುಸಿತ

ಕೇಂದ್ರೀಯ ಸಾಂಖ್ಯಿಕ ಕಚೇರಿಯು 2017–18ನೆಯ ಸಾಲಿನ ಜಿ ಡಿ ಪಿ ಅಂಕಿಅಂಶಗಳ ವಿವರಗಳನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ 2015–16 ರಲ್ಲಿ ಜಿ ಡಿ ಪಿ ಯ ಬೆಳವಣಿಗೆ ದರ (ಸ್ಥಿರ ಬೆಲೆಗಳು) ಶೇ.8.0. ಇದು 2016–17ರಲ್ಲಿ ಶೇ. 7.1ಕ್ಕೆ ಮತ್ತು 2017–18ರಲ್ಲಿ ಶೇ.6.7ಕ್ಕೆ ಕುಸಿದಿದೆ. ಸರ್ಕಾರ ಏನೇ ಹೇಳಿದರೂ ಈ ಕುಸಿತಕ್ಕೆ ಮುಖ್ಯ ಕಾರಣ ನವೆಂಬರ್ 8, 2016 ರಲ್ಲಿ ಘೋಷಿಸಿದ ಅನಾಣ್ಯೇಕರಣ ಹಾಗೂ ದೇಶದ ಅನೌಪಚಾರಿಕ ಮಾರುಕಟ್ಟೆಯನ್ನು ಮೂರಾಬಟ್ಟೆ ಮಾಡಿರುವ ಜಿ.ಎಸ್.ಟಿ. ಪ್ರಸ್ತುತ ಸರ್ಕಾರವು 2014ರ ನಂತರ ಜಾರಿಗೊಂಡ ಆರ್ಥಿಕ ಸುಧಾರಣಾ ಕ್ರಮಗಳನ್ನು ಚಾರಿತ್ರಿಕವಾದುದು ಎಂದು ತನ್ನ ಬೆನ್ನನ್ನೇ ತಾನು ತಟ್ಟಿಕೊಳ್ಳುತ್ತಿದೆ. ಆದರೆ 1991ರ ಬೃಹತ್ ಆರ್ಥಿಕ ಸುಧಾರಣೆಯ ನಂತರ ಆರ್ಥಿಕ ಅಭಿವೃದ್ಧಿಯು ದೃಢತೆಯನ್ನು ಕಂಡುಕೊಂಡಿತು.

ಜಾಗತಿಕ ಆರ್ಥಿಕ ಬಿಕ್ಕಟ್ಟು ಸಂಭವಿಸಿದ ನಂತರದ 2009–10 ಮತ್ತು 2010–11ನೆಯ ಸಾಲುಗಳಲ್ಲಿ ಜಿ ಡಿ ಪಿ ಬೆಳವಣಿಗೆ ದರ ಕ್ರಮವಾಗಿ ಶೇ.8.5 ಮತ್ತು ಶೇ.9.8 ರಷ್ಟಿತ್ತು(ಭಾರತದ ಆರ್ಥಿಕ ಸಮೀಕ್ಷೆ 2017–18). ಈ ಸರ್ಕಾರವು ಅಧಿಕಾರಕ್ಕೆ ಬಂದಾಗ ಆರ್ಥಿಕ ಅಭಿವೃದ್ಧಿಯ ಬೆಳವಣಿಗೆ ಗತಿಯು ಸರಾಸರಿ ಶೇ.8 ರಷ್ಟಿತ್ತು. ಆದರೆ ಅದರ ನಂತರ ಅದು ತೀವ್ರ ಅಭದ್ರತೆಗೆ ಒಳಗಾಗಿ 2017–18ರಲ್ಲಿ ಅದರ ಬೆಳವಣಿಗೆ ದರ ಶೇ. 6.7ಕ್ಕೆ ಕುಸಿದಿದೆ. ಇದಕ್ಕೆ ಅನೇಕ ಕಾರಣಗಳನ್ನು ನೀಡಬಹುದು. ಬಹು ಮುಖ್ಯವಾದುದು ಜನರ ಬೇಡಿಕೆ ಸಾಮರ್ಥ್ಯವು ದುರ್ಬಲವಾಗಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಜನರ ಬಳಿಯಲ್ಲಿ ಕೊಳ್ಳುವ ಶಕ್ತಿಯಿಲ್ಲ. ಸಮಗ್ರ ಬೇಡಿಕೆಯು ಎಲ್ಲಿಯವರೆಗೆ ದುರ್ಬಲವಾಗಿರುತ್ತದೆಯೋ ಅಲ್ಲಿಯವರೆಗೆ ಉತ್ಪಾದನೆ ಏರಿಕೆಯಾಗುವ ಸಾಧ್ಯತೆಯಿಲ್ಲ. ಉದ್ಯೋಗದ ಅವಕಾಶಗಳು ವಿಸ್ತರಿಸುವುದಿಲ್ಲ. ಇಂದು ಆರ್ಥಿಕತೆ ಇಂತಹ ಬಿಕ್ಕಟ್ಟಿನಲ್ಲಿದೆ.

ನಿರಾಶಾದಾಯಕ ವಾತಾವರಣ

ಭಾರತೀಯ ರಿಸರ್ವ್ ಬ್ಯಾಂಕು ನಡೆಸಿದ ಅನುಭೋಗಿಗಳ ಆತ್ಮವಿಶ್ವಾಸ ಸಮೀಕ್ಷೆ ಪ್ರಕಾರ 2015ರಲ್ಲಿ ವರಮಾನದಲ್ಲಿ ಏರಿಕೆಯಾಗುತ್ತಿದೆಯೇ, ಉದ್ಯೋಗದ ಅವಕಾಶಗಳು ವರ್ಧಿಸುತ್ತಿವೆಯೇ ಮತ್ತು ಒಟ್ಟಾರೆ ಆರ್ಥಿಕ ಸ್ಥಿತಿಯು ಉತ್ತಮವಾಗಿದೆಯೇ ಎಂಬ ಪ್ರಶ್ನೆಗಳಿಗೆ ಸಂತೃಪ್ತಿಯ–ಸಮಾಧಾನದ ಉತ್ತರ ನೀಡಿದ್ದ ಜನರ ಪ್ರಮಾಣ 2015 ರಲ್ಲಿ ಕ್ರಮವಾಗಿ ಶೇ. 34.9, ಶೇ.36 ಮತ್ತು ಶೇ.43.1 ರಷ್ಟಿದ್ದುದು 2017ರಲ್ಲಿ ಅದು ಕ್ರಮವಾಗಿ ಶೇ.23.8, ಶೇ.30.8 ಮತ್ತು ಶೇ.32.4ಕ್ಕೆ ಕುಸಿದಿದೆ. ಅದೇ ರೀತಿಯಲ್ಲಿ ವರಮಾನದ ಸ್ಥಿತಿ, ಉದ್ಯೋಗದ ಅವಕಾಶಗಳು ಮತ್ತು ಒಟ್ಟಾರೆ ಆರ್ಥಿಕ ಸ್ಥಿತಿಗತಿ ದುರ್ಬಲವಾಗಿದೆ ಎಂದು ಉತ್ತರ ನೀಡಿದ್ದವರ ಪ್ರಮಾಣ 2015ರಲ್ಲಿ ಕ್ರಮವಾಗಿ ಶೇ.21.4, ಶೇ. 31.8 ಮತ್ತು ಶೆ.27.8 ರಷ್ಟಿದ್ದುದು 2017ರಲ್ಲಿ ಅದು ಕ್ರಮವಾಗಿ ಶೆ.22.4, ಶೇ.38.9 ಮತ್ತು ಶೇ.27.7ಕ್ಕೆ 2017ರಲ್ಲಿ ಏರಿಕೆಯಾಗಿದೆ. ಆರ್ಥಿಕ ಸ್ಥಿತಿಯು ಅಭದ್ರವಾಗುತ್ತಿದೆ ಮತ್ತು ಜನರ ಭಾವನೆಯೂ ನಿರಾಶಾದಾಯಕವಾಗಿದೆ.

ಅಭಿವೃದ್ಧಿಗೆ ಬಂಡವಾಳ, ಮೂಲ ಸೌಲಭ್ಯಗಳು, ತಂತ್ರಜ್ಞಾನ ಎಷ್ಟು ಮುಖ್ಯವೋ ಜನರ ಮಾನಸಿಕ ಭಾವನೆಯೂ ಅಷ್ಟೇ ಮುಖ್ಯ. ಇಂದು ಜನರಲ್ಲಿ ಆರ್ಥಿಕತೆ ಬಗ್ಗೆ ವಿಶ್ವಾಸ ಕುಸಿದಿದೆ. ಇದು ಆತಂಕಕಾರಿ ಸಂಗತಿಯಾಗಿದೆ. ಅತ್ಯಂತ ವಿಷಾದದ ಸಂಗತಿಯೆಂದರೆ ಇದು ಮಾನವ ನಿರ್ಮಿತ ಕುಸಿತವಾಗಿದೆ. ಅಭಿವೃದ್ಧಿಯು ಕೇವಲ ಘೋಷಣೆಗೆ ಸೀಮಿತವಾಗಿ ಸಮಾಜದಲ್ಲಿ ಅಸಹಿಷ್ಣುತೆಯನ್ನು ಬಿತ್ತುವುದು ನಡೆದಿದೆ. ಸಮಾಜದಲ್ಲಿ ಭಯದ ವಾತಾವರಣವನ್ನು ಉಂಟು ಮಾಡಲಾಗುತ್ತಿದೆ. ಅಲ್ಪಸಂಖ್ಯಾತರ ಬಗ್ಗೆ ಸೃಷ್ಟಿಸಿದ ಆರೋಪಗಳು, ಸಂವಿಧಾನ ವಿರೋಧಿ ಚಟುವಟಿಕೆಗಳು ಮತ್ತು ಮಾನವ ಹಕ್ಕು ಉಲ್ಲಂಘನೆ ರಾಜಾರೋಷವಾಗಿ ನಡೆಯುತ್ತಿದೆ. ಈ ಬಗೆಯ ಕ್ರಿಮಿನಲ್ ಚಟುವಟಿಕೆಗಳಲ್ಲಿ ನಿರತರಾದವರನ್ನು ಸ್ವತಂತ್ರವಾಗಿರಲು ಬಿಟ್ಟು ಅದರ ವಿರುದ್ಧ ಧ್ವನಿಯೆತ್ತುವವರ ಮೇಲೆ ಕಾನೂನಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಭೀಮಕೋರೆಗಾವ್ ಪ್ರಕರಣದ ಬಗ್ಗೆ ಸರ್ಕಾರಗಳು ನಡೆದುಕೊಳ್ಳುತ್ತಿರುವ ರೀತಿಯು ಇದಕ್ಕೆ ಅಪ್ಪಟ ನಿದರ್ಶನವಾಗಿದೆ.

ವರಮಾನದ ಏರಿಕೆಯೇ ಅಭಿವೃದ್ಧಿಯಲ್ಲ!

ಈಗಾಗಲೆ ಹೇಳಿದಂತೆ ವರಮಾನದಲ್ಲಿನ ಬೆಳವಣಿಗೆಯನ್ನೇ ಅಭಿವೃದ್ಧಿ ಎಂದು ಸರ್ಕಾರಗಳು ಪ್ರತಿಪಾದಿಸಿಕೊಂಡು ಬರುತ್ತಿವೆ. ಸರ್ಕಾರಗಳ ಸಾಧನೆಯನ್ನು ವರಮಾನದ ಬೆಳವಣಿಗೆ ದರದ ಮೇಲೆ ಮಾಪನ ಮಾಡಲಾಗುತ್ತದೆ. ಇದು ಒಂದು ಹಂತದವರೆಗೆ ಮಾತ್ರ ಸರಿ. ವರಮಾನ, ಉತ್ಪಾದನೆ, ಬಂಡವಾಳ – ಇವೆಲ್ಲ ಅಭಿವೃದ್ಧಿಯ ಸಾಧನೆಗಳೇ ವಿನಾ ಅವು ಅಭಿವೃದ್ಧಿಯ ಸಾಧ್ಯವಲ್ಲ. ಅಭಿವೃದ್ಧಿ ಅನ್ನುವುದು ಜನರಿಗೆ, ಜನರ ಬದುಕಿಗೆ ಸಂಬಂಧಿಸಿದ ಸಂಗತಿ. ಈ ಹಿನ್ನೆಲೆಯಲ್ಲಿ ಅಮರ್ತ್ಯ ಸೆನ್ ಹೇಳಿದ್ದು 'ಅಭಿವೃದ್ಧಿ ಅನ್ನುವುದು ಜನರ ಬದುಕಿನ ಸಮೃದ್ಧಿಗೆ ಸಂಬಂಧಿಸಿದ ಸಂಗತಿಯೇ ವಿನಾ ಆರ್ಥಿಕ ಸಮೃದ್ಧತೆಗೆ ಸಂಬಂಧಿಸಿದಲ್ಲ'. ಜನರ ಆರೋಗ್ಯ, ಶಿಕ್ಷಣ, ಆಹಾರ ಭದ್ರತೆ, ಮಹಿಳೆಯರ ಸ್ವಾತಂತ್ರ್ಯ, ಮಕ್ಕಳ ಮತ್ತು ಮಹಿಳೆಯರ ಪೌಷ್ಟಿಕತೆ ಮುಂತಾದವು ಅಭಿವೃದ್ಧಿಯ ಅವಿಭಾಜ್ಯ ಅಂಗಗಳು. ಆದರೆ ಇಂದು ಸರ್ಕಾರಗಳು ಮತ್ತು ಅದರ ಪ್ರಭೃತಿಗಳು ಇವುಗಳ ಬಗ್ಗೆ ಮಾತನಾಡುತ್ತಿಲ್ಲ. ಇಂದು ವರಮಾನ ಕುರಿತ ಚರ್ಚೆಯಲ್ಲಿ ಮೂಲೆ ಸೇರಿರುವ ಮುಖ್ಯ ಸಂಗತಿಯೆಂದರೆ ಏರಿಕೆಯಾದ ವರಮಾನವು ಸಮಾಜದಲ್ಲಿ ಯಾವ ವರ್ಗದ ಪಾಲಾಗುತ್ತಿದೆ ಅನ್ನುವುದು. ವರಮಾನದ ಮೇಲೆ ಜನರು ತಮ್ಮ ಹಕ್ಕನ್ನು ಸ್ಥಾಪಿಸಲು ಅವರಿಗೆ ಧಾರಣಾ ಸಾಮರ್ಥ್ಯವಿರಬೇಕು. ನಮ್ಮ ಸಂದರ್ಭದಲ್ಲಿ ಭೂರಹಿತ ದುಡಿಮೆಗಾರರ, ಮಹಿಳೆಯರ, ಅನೌಪಚಾರಿಕ ಮಾರುಕಟ್ಟೆಯಲ್ಲಿ ವ್ಯಾಪಾರ ವ್ಯವಹಾರ ನಡೆಸುತ್ತಿರುವವರ, ಕೃಷಿಕರ ಧಾರಣ ಸಾಮರ್ಥ್ಯವು ಅತ್ಯಂತ ದುರ್ಬಲವಾಗಿದೆ. ಈ ವರ್ಗಕ್ಕೆ ಏರಿಕೆಯಾದ ವರಮಾನದಲ್ಲಿ ಹೆಚ್ಚು ಹೆಚ್ಚು ದೊರೆಯಬೇಕಾದರೆ ಅವರ ಧಾರಣ ಸಾಮರ್ಥ್ಯವನ್ನು ಉತ್ತಮಪಡಿಸುವ ಕ್ರಮಗಳು ಅಗತ್ಯ. "ಸಬ್ ಕಾ ಸಾತ್, ಸಬ್ ಕಾ ವಿಕಾಸ್" ನೀತಿಯಿಂದ ಅಥವಾ "ಲೆಸ್ ಗೌವರ್ನಮೆಂಟ್, ಮೋರ್ ಗೌವರ್ನೆನ್ಸ್" ನೀತಿಗಳಿಂದ ಸಮಾಜದಲ್ಲಿನ ವಂಚಿತ ವರ್ಗಗಳಿಗೆ, ಅಂಚಿನಲ್ಲಿರುವವರಿಗೆ ಅನುಕೂಲ ದೊರೆಯುವುದಿಲ್ಲ. ಅವು ಕೇವಲ ಉಳ್ಳವರ ಹಿತಾಸಕ್ತಿಗಳನ್ನು ಕಾಯಬಹುದು. ಇಲ್ಲಿ ಉಳಿದವರ ಬದುಕು ಮೂರಾಬಟ್ಟೆಯಾಗಿ ಬಿಡುತ್ತದೆ.



ಆದ್ದರಿಂದ ಜಿ.ಡಿ.ಪಿ. ದರ ಕುಸಿಯುತ್ತಿದೆಯೋ ಅಥವಾ ಏರಿಕೆಯಾಗುತ್ತಿದೆಯೋ ಅನ್ನುವುದು ಅಷ್ಟು ಮುಖ್ಯವಲ್ಲ. ವರಮಾನದಲ್ಲಿ ಯಾರು ಪಾಲು ಪಡೆಯುತ್ತಿದ್ದಾರೆ, ಏರಿಕೆಯಾದ ವರಮಾನದ ಮೇಲೆ ಯಾರು ತಮ್ಮ ಹಕ್ಕನ್ನು ಸ್ಥಾಪಿಸುತ್ತಿದ್ದಾರೆ, ವರಮಾನದಿಂದ ಯಾರು ವಂಚಿತರಾಗಿದ್ದಾರೆ ಅನ್ನುವುದು ಮುಖ್ಯ. ಇಂದು ಕೇಂದ್ರ ಸರ್ಕಾರವು 'ಉತ್ಪಾದನೆ ಮೊದಲು: ವಿತರಣೆ ನಂತರ' ಅನ್ನುವ ನೀತಿಯನ್ನು ಅನುಸರಿಸುತ್ತಿದೆ. ಇದೂ ಕೂಡ ಉಳ್ಳವರ ಹಿತಾಸಕ್ತಿಗಳನ್ನು ಕಾಪಿಡುವ ಸಂಗತಿಯಾಗಿದೆ. ಉಳ್ಳವರಿಗೆ ಎಲ್ಲ ಬಗೆಯ ಅನುಕೂಲಗಳನ್ನು ಒದಗಿಸುತ್ತಾ ಉಳಿದವರ ಮನಸ್ಸಿನಲ್ಲಿ ಕೇವಲ ಕನಸುಗಳನ್ನು ಬಿತ್ತುತ್ತಾ ಸರ್ಕಾರ ನಡೆದಿದೆ. ಬಡವರ, ಹಸಿವನ್ನು ಎದುರಿಸುತ್ತಿರುವವರ, ಭೂರಹಿತ ದುಡಿಮೆಗಾರರ ಮನಸ್ಸಿನಲ್ಲಿ ಉತ್ತಮ ರಾಜ್ಯದ ಭ್ರಮೆಯನ್ನು ಬಿತ್ತಲಾಗಿದೆ. ಅದರಿಂದ ಆಳುವ ವರ್ಗಕ್ಕೆ ಫಲಗಳು ದೊರೆಯುತ್ತಿವೆ. ಪಶ್ಚಿಮ ಬಂಗಾಳ, ತ್ರಿಪುರ, ಉತ್ತರ ಪ್ರದೇಶ, ಕರ್ನಾಟಕದಲ್ಲಿನ ಚುನಾವಣೆಗಳ ಫಲಿತಾಂಶಗಳು ಇದನ್ನು ಸ್ಪಷ್ಟವಾಗಿ ತೋರಿಸುತ್ತಿವೆ. ಆದರೆ ಇವುಗಳಿಂದ ಉಳಿದವರಿಗೆ, ಆಳಿಸಿಕೊಳ್ಳುತ್ತಿರುವ ವರ್ಗಕ್ಕೆ ಇದರಿಂದ ಯಾವುದೇ ಅನುಕೂಲವಿಲ್ಲ. ಇಂದು ಸಮಾನತೆ, ಸಾಮಾಜಿಕ ನ್ಯಾಯ, ಹಸಿವು, ಸಕಾರಾತ್ಮಕ ತಾರತಮ್ಯ ನೀತಿ, ಗ್ರಾಮೀಣ ಪ್ರದೇಶ, ಮಹಿಳೆಯರ ಸ್ವಾತಂತ್ರ್ಯ – ಇವು ಅಸಹ್ಯಕರ ಸಂಗತಿಗಳಾಗಿ ಬಿಟ್ಟಿವೆ. ಇವುಗಳ ಬಗ್ಗೆ ಮಾತನಾಡುವವರನ್ನು ಅಣಕ ಮಾಡಲಾಗುತ್ತಿದೆ ಮತ್ತು ಎಡಪಂಥೀಯರೆಂದು ಹಣೆಪಟ್ಟಿ ಹಚ್ಚಲಾಗುತ್ತಿದೆ. ಬಡವರ ಬಗ್ಗೆ, ಶೋಷಿತರ ಬಗ್ಗೆ ಮಾತನಾಡುವುದು, ಚಳುವಳಿ ಮಾಡುವುದು ಅಪರಾಧದ ಸಂಗತಿಯಾಗಿದೆ.

ಒಟ್ಟಾರೆ ಜಿ.ಡಿ.ಪಿ. ಯೇ ಮುಖ್ಯವಲ್ಲ. ಅದರ ಹಂಚಿಕೆ ಮತ್ತು ಏರಿಕೆಯಾದ ವರಮಾನದಲ್ಲಿ ಯಾವ ವರ್ಗವು ಹೆಚ್ಚು ಪಾಲು ಪಡೆಯುತ್ತಿದೆ ಅನ್ನುವುದು ಮುಖ್ಯ. ಈ ಬಗೆಯ ಧೋರಣೆ, ನೀತಿ, ಕಾರ್ಯಕ್ರಮಗಳು, ಯೋಜನೆಗಳು ಮಾತ್ರ ಜನರ ಮೂಲ ಸಮಸ್ಯೆಗಳಾದ ಬಡತನ, ಹಸಿವು, ಅಪೌಷ್ಟಿಕತೆ, ಅಸಮಾನತೆ, ಅವಮಾನಗಳನ್ನು ಎದುರಿಸಬಲ್ಲವು. ●

ದಲಿತರ ಮೇಲೆ ವ್ಯಾಪಕ ದಮನ-ದಬ್ಬಾಳಿಕೆ

ಬಿಜೆಪಿಯ ದಲಿತ ಕಲ್ಯಾಣದ ಬೂಟಾಟಿಕೆ ಬಯಲು

ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವುದರ ವಿರುದ್ಧ ದಲಿತ ಯುವಜನರ ಆಕ್ರೋಶವನ್ನು ಬಿಜೆಪಿ ಸರಕಾರಗಳು ದಮನ ಮಾಡುತ್ತಿರುವ ರೀತಿ ಮತ್ತು ಭೀಮಾ-ಕೋರೆಗಾಂವ್ ವಿಜಯೋತ್ಸವ ಸಂದರ್ಭದಲ್ಲಿ ಹಲ್ಲೆಗೊಳಗಾದ, ಗಾಯಗೊಂಡ ಹಾಗೂ ಹತರಾದ ಜನರ ಪರವಾಗಿ ನ್ಯಾಯಕ್ಕಾಗಿ ಹೋರಾಡುತ್ತಿರುವ ಐವರು ಕಾರ್ಯಕರ್ತರನ್ನು ಮಹಾರಾಷ್ಟ್ರದ ಬಿಜೆಪಿ ಸರಕಾರ ಇತ್ತೀಚೆಗೆ ಕರಾಳ ಕಾನೂನಿನ ಅಡಿಯಲ್ಲಿ ಬಂಧಿಸಿ, ಆರಂಭದಲ್ಲಿ 'ನಗರ ಮಾವೋವಾದಿಗಳು', ಆಮೇಲೆ ಪ್ರಧಾನಿಯನ್ನು ಕೊಲ್ಲಲು ಸಂಚು ರೂಪಿಸಿದ್ದರು ಎಂಬ ಆರೋಪ ಹೊರಿಸಿರುವುದು ದಲಿತರ ಕಲ್ಯಾಣದ ಬಗ್ಗೆ ಬಿಜೆಪಿಯ ಮಾತುಗಳೆಲ್ಲವೂ ಕೇವಲ ಬೂಟಾಟಿಕೆ ಎಂಬುದನ್ನು ಬಯಲಿಗೆ ತಂದಿವೆ.

ದಲಿತ ಯುವಜನರಲ್ಲಿ ಹೊಸ ಜಾಗೃತಿ ಮೂಡುತ್ತಿರುವುದರಿಂದ ದಲಿತರ ಹಕ್ಕುಗಳಿಗಾಗಿನ ಈ ಹೋರಾಟಗಳನ್ನು ದಮನಿಸಲು ಯಾವುದೇ ರೀತಿಯ ದಬ್ಬಾಳಿಕೆಗೆ ಸಾಧ್ಯವಾಗದು- ಪ್ರಕಾಶ ಕಾರಟ್





ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ(ಪಿಒಎ)ಯನ್ನು ದುರ್ಬಲಗೊಳಿಸುವ ಸುಪ್ರೀಂಕೋರ್ಟ್‌ನ ಆದೇಶದ ವಿರುದ್ಧ ಎಪ್ರಿಲ್ 2 ರ ಭಾರತ ಬಂದ್ ನಡೆದು ಎರಡು ತಿಂಗಳು ಕಳೆದಿವೆ. ಈ ಅವಧಿಯಲ್ಲಿ ಬಿಜೆಪಿ ಆಡಳಿತದ ಉತ್ತರ ಪ್ರದೇಶ, ಮಧ್ಯ ಪ್ರದೇಶ, ರಾಜಸ್ತಾನ ಮತ್ತು ಮಹಾರಾಷ್ಟ್ರಗಳಲ್ಲಿ ದಲಿತರ ಮೇಲೆ ತೀವ್ರ ರೀತಿಯ ದಬ್ಬಾಳಿಕೆಗಳು ನಡೆದಿವೆ.

ಅವುಗಳು ಬಿಜೆಪಿ ಆಡಳಿತದ ರಾಜ್ಯ ಸರಕಾರಗಳ ಆಳವಾದ ದಲಿತ-ವಿರೋಧಿ ನಿಲವು ಮತ್ತು ಹಿಂದೂತ್ವ ಶಕ್ತಿಗಳ ಮೇಲ್ಜಾತಿ ಸಂಕುಚಿತ ಬುದ್ಧಿಗೆ ಸಾಕ್ಷಿಯಾಗಿವೆ.

ಬಂದ್ ವೇಳೆ ಕನಿಷ್ಟ ಪಕ್ಷ ಎಂಟು ದಲಿತರನ್ನು ಹತ್ಯೆ ಮಾಡಲಾಯಿತು. ಆ ಪೈಕಿ ಕೆಲವು ಹತ್ಯೆ ನಡೆದದ್ದು ಆರ್‌ಎಸ್‌ಎಸ್ ಗೂಂಡಾಗಳಿಂದ. ಆದರೆ ಈ ಹತ್ಯೆಗಳಿಗೆ ಹೊಣೆಯಾದ ಯಾರೊಬ್ಬರನ್ನೂ ಇದುವರೆಗೆ ಬಂಧಿಸಿಲ್ಲ ಅಥವಾ ಶಿಕ್ಷಿಸಿಲ್ಲ. ಕೆಲವು ಕುಟುಂಬಗಳಿಗೆ ಎಸ್‌ಸಿ-ಎಸ್‌ಟಿ ಕಾನೂನಿನ ಅನ್ವಯ ಪರಿಹಾರ ನೀಡಲಾಗಿದೆಯಾದರೂ ರಾಜ್ಯ ಸರಕಾರಗಳು ಆ ಕುಟುಂಬಗಳಿಗೆ ಯಾವುದೇ ಪರಿಹಾರ ಅಥವಾ ನೆರವನ್ನು ಘೋಷಿಸಿಲ್ಲ.

ಎಪ್ರಿಲ್ 2 ರಂದು ಮಧ್ಯಪ್ರದೇಶದಲ್ಲಿ ದಲಿತರ ಮೇಲೆ ಬಹಿರಂಗವಾಗಿ ಗುಂಡು ಹಾರಿಸಿದ ಅಥವಾ ಅವರನ್ನು ಥಳಿಸಿದ ಜನರನ್ನು ಇನ್ನೂ ಬಂಧಿಸಿಲ್ಲ. ಎಪ್ರಿಲ್ 3ರಂದು ವಶಕ್ಕೆ ಪಡೆದ ದಲಿತರನ್ನು ಗ್ವಾಲಿಯರ್ ನ್ಯಾಯಾಲಯದಲ್ಲಿ ಹಾಜರುಪಡಿಸಿದಾಗ ಅವರ ಮೇಲೆ ವಕೀಲರು ಅಮಾನುಷವಾಗಿ ಹಲ್ಲೆ ಮಾಡಿದರು. ಆದಾಗ್ಯೂ ಯಾವುದೇ ಒಬ್ಬ ಆರೋಪಿಯ ವಿರುದ್ಧವೂ ಕ್ರಮ ಕೈಗೊಂಡಿಲ್ಲ. ಅದೇ ರೀತಿ ಎಪ್ರಿಲ್ 3ರಂದು ರಾಜಸ್ತಾನದಲ್ಲಿ ಬಿಜೆಪಿಯ ಒಬ್ಬ ಹಾಲಿ ದಲಿತ ಶಾಸಕ ಮತ್ತು ಕಾಂಗ್ರೆಸ್‌ನ ಒಬ್ಬ ಮಾಜಿ ದಲಿತ ಶಾಸಕರ ಮನೆಗಳನ್ನು ನೆಲಸಮ ಮಾಡಲಾಯಿತು. ಉತ್ತರ ಪ್ರದೇಶದಲ್ಲಿ ದಲಿತರನ್ನು ಹೊಡೆಯಲಾಯಿತು, ಅವರ ಮನೆಗಳ ಮೇಲೆ ದಾಳಿ ಮಾಡಲಾಯಿತು ಹಾಗೂ ಬಂದ್ ನಡೆದ ತರುವಾಯದಲ್ಲಿ ಸಾಮಾಜಿಕ ಜಾಲತಾಣದಲ್ಲಿ 'ಗಲ್ಲು ಶಿಕ್ಷೆ ವಿಧಿಸಿದ' ಒಬ್ಬ ದಲಿತ ಕಾರ್ಯಕರ್ತನ್ನು ಕೊಲ್ಲಲಾಯಿತು. ಆದರೂ ಯಾರನ್ನೂ ಬಂಧಿಸಿಲ್ಲ.

ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ಎಪ್ರಿಲ್ 2ರಂದು ದಲಿತರ ಮೇಲೆ ದಾಳಿ ಮಾಡಲಾಯಿತು. ಆ ಸಂಬಂಧ ಕೆಲವರನ್ನು ಬಂಧಿಸಲಾಯಿತು. ಆದರೆ ಈ ವರ್ಷ ಜನವರಿ ಒಂದರಂದು ಭೀಮಾ-ಕೋರೆಗಾಂವ್ ವಿಜಯೋತ್ಸವದ ವೇಳೆ ದಲಿತರನ್ನು ಗುರಿಯಾಗಿಸಿ ನಡೆದ ದೌರ್ಜನ್ಯ-ದೊಂಬಿಗಳಲ್ಲಿ ಭಾಗವಹಿಸಿದವರ ವಿಚಾರದಲ್ಲಿ ಮಹಾರಾಷ್ಟ್ರ ಸರಕಾರ ನಡೆದುಕೊಂಡ ರೀತಿ ಅದರ ದಲಿತ-ವಿರೋಧಿ, ಜಾತಿವಾದಿ ಮುಖವನ್ನು ಅನಾವರಣಗೊಳಿಸಿತು. ಹಿಂಸಾಚಾರ ಪ್ರಚೋದಿಸಲು ಮುಖ್ಯ ಕಾರಣಕರ್ತರಲ್ಲಿ ಒಬ್ಬನಾದ ಹಾಗೂ ಪ್ರಧಾನ ಮಂತ್ರಿಯ 'ಗುರು' ಸಂಭಾಜಿ ಭಿಡೆ ಇನ್ನೂ ತಲೆಮರೆಸಿಕೊಂಡಿದ್ದು ದ್ವೇಷವನ್ನು ಕಾರುತ್ತಿದ್ದಾನೆ. ಪ್ರಮುಖ ಆರೋಪಿ ಮಿಲಿಂದ್ ಏಕ್‌ಬೋಟೆ ಮತ್ತಿತರರು ಜಾಮೀನು ಮೇಲೆ ಹೊರಗೆ ಬಂದಿದ್ದಾರೆ.

ಆದರೆ ಇದಕ್ಕೆ ತದ್ವಿರುದ್ಧವಾಗಿ, ದಲಿತರು ಕಲ್ಪಿಸಿಕೊಳ್ಳಲೂ ಆಗದ ಅನ್ಯಾಯಕ್ಕೆ ಒಳಗಾಗಿದ್ದಾರೆ.

ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ ಸರಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಅದರ ದಲಿತ-ವಿರೋಧಿ ಗುಣ ಬಯಲಿಗೆ ಬರುತ್ತಿದೆ. ಶಿಕ್ಷೆಯ ಯಾವುದೇ ಭೀತಿಯಿಲ್ಲದ ರೀತಿಯಲ್ಲಿ ದಾಳಿಗಳನ್ನು ನಡೆಸಲು ಅದು ಮೇಲ್ಜಾತಿ ಜನರಿಗೆ ಕುಮ್ಮಕ್ಕು ನೀಡುತ್ತಿದೆ. ಭೀಮ ಸೇನೆಯ ಚಂದ್ರಶೇಖರ್ ಹಾಗೂ ಇತರ ಇಬ್ಬರ ಮೇಲೆ ರಾಷ್ಟ್ರೀಯ ಭದ್ರತಾ ಕಾನೂನನ್ನು (ಎನ್‌ಎಸ್‌ಎ) ಪ್ರಯೋಗಿಸಿ ಅವರನ್ನು ಸೆರೆಮನೆಗೆ ತಳ್ಳಿದೆ. ಅವರು ಒಂದು ವರ್ಷಕ್ಕೂ ಹೆಚ್ಚು ಅವಧಿಯಿಂದ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಎಪ್ರಿಲ್ 2ರ ನಂತರ ಪಶ್ಚಿಮ ಉತ್ತರ ಪ್ರದೇಶದಾದ್ಯಂತ ದಲಿತರ ಮೇಲೆ ಆಕ್ರಮಣಗಳು ನಡೆಯುತ್ತಿದ್ದು ಅನೇಕ ಜನರು ಜೀವ ಭಯದಿಂದಾಗಿ ಹಳ್ಳಿಗಳಿಂದ ಪಲಾಯನ ಮಾಡಿದ್ದಾರೆ. ಡಜನ್‌ಗಟ್ಟಲೆ ದಲಿತ ಯುವಕರು ಹೀನ ಅಪರಾಧಗಳ ಅನ್ಯಾಯಯುತ ಆರೋಪಗಳ ಮೇಲೆ ಸೆರೆಮನೆಗಳಲ್ಲಿದ್ದಾರೆ. ಅನೇಕ ದಲಿತ ಅಪ್ರಾಪ್ತ ಬಾಲಕರನ್ನು ಕೂಡ ಜೈಲಿಗೆ ತಳ್ಳಲಾಗಿದೆ. ಅವರ ವಯಸ್ಸಿನ ರುಜುವಾತಿಗೆ ಆಧಾರ್ ಕಾರ್ಡ್ ಸಾಕ್ಷ್ಯವನ್ನು ಪರಿಗಣಿಸಲೂ ಸರಕಾರ ತಯಾರಿಲ್ಲ. ಅವರನ್ನು ವಯಸ್ಕ ಬಂಧಿಗಳ ಜೊತೆಯಲ್ಲೇ ಇರಿಸಲಾಗಿದೆ. ಅವರಿಗೆ ಜಾಮೀನು ಮಂಜೂರು ಮಾಡುವುದು ಬಿಡಿ, ಜಾಮೀನು ಅರ್ಜಿಗಳನ್ನು ನ್ಯಾಯಾಲಯದಲ್ಲಿ ಸರಿಯಾಗಿ ಪ್ರೊಸೆಸ್ ಮಾಡಲಾಗುತ್ತಿಲ್ಲ ಅಥವಾ ಅವುಗಳನ್ನು ಅಂಗೀಕರಿಸಲಾಗುತ್ತಿಲ್ಲ.

ರಾಜಸ್ತಾನದ 33 ಜಿಲ್ಲೆಗಳ ಪೈಕಿ 12 ಜಿಲ್ಲೆಗಳಲ್ಲಿ 436 ದಲಿತರು ಮತ್ತು ಆದಿವಾಸಿಗಳನ್ನು ಎಪ್ರಿಲ್ 2ರ ನಂತರ ಬಂಧಿಸಲಾಗಿದೆ. ದಲಿತ ಶೋಷಣ್ ಮುಕ್ತಿ ಮೋರ್ಚಾ (ಡಿಎಸ್‌ಎಂಎಂ), ದಲಿತರ ಮೇಲಿನ ದಬ್ಬಾಳಿಕೆ ವಿರೋಧಿ ಆಂದೋಲನ, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರ ಸಹಿತ ವಿವಿಧ ದಲಿತ ಮತ್ತು ಆದಿವಾಸಿ ಸಂಘಟನೆಗಳ ಒಕ್ಕೂಟ ಎಪ್ರಿಲ್ 2ರ ಬಂದ್‌ನಲ್ಲಿ ಸಂತ್ರಸ್ತರಾದವರ ಪರ ದನಿ ಎತ್ತಿದೆ. ಜೈಲುಗಳಲ್ಲಿ ಇರುವವರು ಮಾತ್ರವೇ ಅಲ್ಲದೆ ಅನೇಕ ಎಸ್‌ಸಿ-ಎಸ್‌ಟಿ ಸರಕಾರಿ ನೌಕರರು ಕೂಡ ಬೆದರಿಕೆಗಳನ್ನು ಎದುರಿಸುತ್ತಿದ್ದಾರೆ. ಈ ಸಂಘಟನೆಗಳ ಪ್ರಯತ್ನಗಳಿಂದಾಗಿ ಜೈಲಿನಲ್ಲಿರುವವರೆಲ್ಲರೂ ಜಾಮೀನಿನಲ್ಲಿ ಬಿಡುಗಡೆಯಾಗಿದ್ದಾರೆ. ನ್ಯಾಯಕ್ಕಾಗಿ ಹಾಗೂ ದೌರ್ಜನ್ಯದ ವಿರುದ್ಧ ಚಳವಳಿ ಮುಂದುವರಿದಿದೆ. ದಲಿತರ ವಿರುದ್ಧ ಹಿಂಸಾಚಾರ ನಡೆಸಿದವರು ಯಾರೂ ಬಂಧಿತರಾಗಿಲ್ಲ ಅಥವಾ ನಷ್ಟ ಅನುಭವಿಸಿದ ಸಂತ್ರಸ್ತ ದಲಿತ ಕುಟುಂಬಗಳಿಗೆ ಪರಿಹಾರವನ್ನು ನೀಡಲಾಗಿಲ್ಲ.

ಮಧ್ಯ ಪ್ರದೇಶದಲ್ಲಿ ಸಂತ್ರಸ್ತಗೊಂಡ ಮೂರು ಜಿಲ್ಲೆಗಳಲ್ಲಿ 400ಕ್ಕೂ ಹೆಚ್ಚು ದಲಿತರು ಸೆರೆಮನೆಗಳಲ್ಲಿದ್ದಾರೆ. ಸಾವಿರಾರು ಜನರು ಬಂಧನ ಹಾಗೂ ಕಿರುಕುಳದ ಬೆದರಿಕೆ ಎದುರಿಸುತ್ತಿದ್ದಾರೆ. ಭಾರಿ ದೊಡ್ಡ ಸಂಖ್ಯೆಯ 'ಇತರ ಅಪರಿಚಿತರು' ಎಂದು ಪೊಲೀಸ್ ಎಫ್‌ಐಆರ್‌ಗಳಲ್ಲಿ ನಮೂದಿಸಿರುವುದೇ ಇದಕ್ಕೆ ಕಾರಣ. ಸಿಪಿಐ (ಎಂ) ಮತ್ತು ಡಿಎಸ್‌ಎಂಎಂ ನಿರಂತರವಾಗಿ ಮಧ್ಯಪ್ರವೇಶ ಮಾಡುತ್ತಿರುವ ಕಾರಣದಿಂದಾಗಿ ಕಳೆದ ತಿಂಗಳು ಕೇವಲ ಎರಡರಿಂದ ಮೂರು ಬಂಧನಗಳು ವರದಿಯಾಗಿವೆ. ಆದರೆ ಪೊಲೀಸರ ಕಿರುಕುಳ ಮುಂದುವರಿದೇ ಇದೆ. ಕೆಳ ನ್ಯಾಯಾಲಯಗಳಲ್ಲಿ ಸಲ್ಲಿಸಿದ ಎಲ್ಲಾ ಜಾಮೀನು ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಅಗತ್ಯವಿರುವ ದಾಖಲೆಗಳನ್ನು ಸಲ್ಲಿಸಲು ಪೊಲೀಸರು ನಿರಾಕರಿಸುತ್ತಿರುವುದೇ ಇದಕ್ಕೆ ಕಾರಣವಾಗಿದೆ. ಜಾಮೀನು ಅರ್ಜಿಗಳನ್ನು ಅಂಗೀಕರಿಸಲು ಹೈಕೋರ್ಟ್ ಕೂಡ ನಿರಾಕರಿಸುತ್ತಿರುವುದು ಇನ್ನೂ ದುರದೃಷ್ಟಕರ ಸಂಗತಿಯಾಗಿದೆ.

ಭೀಮಾ-ಕೋರೆಗಾಂವ್ ವಿಜಯೋತ್ಸವ ಸಂದರ್ಭದಲ್ಲಿ ಹಲ್ಲೆಗೊಳಗಾದ, ಗಾಯಗೊಂಡ ಹಾಗೂ ಹತರಾದ ಜನರ ಪರವಾಗಿ ನ್ಯಾಯಕ್ಕಾಗಿ ಹೋರಾಡುತ್ತಿರುವ ಐವರು ಕಾರ್ಯಕರ್ತರನ್ನು ಮಹಾರಾಷ್ಟ್ರದ ಬಿಜೆಪಿ ಸರಕಾರ ಇತ್ತೀಚೆಗೆ ಬಂಧಿಸಿದೆ. ಆರಂಭದಲ್ಲಿ ಅವರನ್ನು ದೇಶದ್ರೋಹಿ ಹಾಗೂ ರಾಷ್ಟ್ರವಿರೋಧಿ ಚಟುವಟಿಕೆಗಳಿಗೆ ಯೋಜನೆ ರೂಪಿಸುತ್ತಿರುವ 'ನಗರ ಮಾವೋವಾದಿಗಳು' ಎಂದು ಆರೋಪಿಸಲಾಯಿತು. ಇದೀಗ, ಪ್ರಧಾನಿಯನ್ನು ಕೊಲ್ಲಲು ಸಂಚು ರೂಪಿಸಿದ್ದರು ಎಂಬ ಆರೋಪ ಹೊರಿಸಲಾಗಿದೆ. ಹೀಗಾಗಿ ಅವರ ವಿರುದ್ಧ ಕರಾಳ ಕಾನೂನುಬಾಹಿರ ಚಟುವಟಿಕೆಗಳು (ತಡೆ) ಕಾನೂನನ್ನು(ಯುಎಪಿಎ) ಅನ್ವಯಿಸಲಾಗಿದೆ.

ದಲಿತರ ಕಲ್ಯಾಣದ ಬಗ್ಗೆ ಮಾತನಾಡುವ ಬಿಜೆಪಿಯ ಬೂಟಾಟಿಕೆಯನ್ನು ಬಯಲು ಮಾಡಬೇಕಾಗಿದೆ. ಈ ಎಲ್ಲಾ ರಾಜ್ಯ ಸರಕಾರಗಳ ಪ್ರತೀಕಾರದ ಹಾಗೂ ಅನ್ಯಾಯದ ಕ್ರಮಗಳನ್ನು ಖಂಡಿಸಬೇಕು. ನ್ಯಾಯಕ್ಕಾಗಿನ ಹೋರಾಟ ಮುಂದುವರಿಯಬೇಕು. ಅದನ್ನು ಬೆಂಬಲಿಸಲು ಎಲ್ಲಾ ಪ್ರಜಾಸತ್ತಾತ್ಮಕ ವಿಭಾಗಗಳು ಮತ್ತು ಸಂಘಟನೆಗಳು ಮುಂದೆ ಬಂದು ಹೋರಾಟವನ್ನು ಬಲಪಡಿಸಬೇಕು. ದಲಿತರಲ್ಲಿ, ಅದರಲ್ಲೂ ವಿಶೇಷವಾಗಿ ದಲಿತ ಯುವಜನರಲ್ಲಿ ಒಂದು ಹೊಸ ಜಾಗೃತಿ ಮೂಡುತ್ತಿರುವುದರಿಂದ ದಲಿತ ಹಕ್ಕುಗಳಿಗಾಗಿನ ಹೋರಾಟವನ್ನು ದಮನಿಸಲು ಯಾವುದೇ ರೀತಿಯ ದಬ್ಬಾಳಿಕೆಗೆ ಸಾಧ್ಯವಾಗದು.

ಅನು: ವಿಶ್ವ

ಮಧ್ಯಪ್ರದೇಶದಲ್ಲಿ ದಲಿತರ ಮೇಲಿನ ದಬ್ಬಾಳಿಕೆಯ ವಿರುದ್ಧ ಎರಡು ತಿಂಗಳ ಪ್ರಚಾರಾಂದೋಲನ

"ಸಂವಿಧಾನದ ಜಾಗದಲ್ಲಿ ಮನುಸ್ಮೃತಿ ಕೂರಿಸಲು ಜನ ಬಿಡುವುದಿಲ್ಲ" -ಸೀತಾರಾಮ್ ಯೆಚುರಿ

ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುತ್ತಿರುವುದರ ವಿರುದ್ಧ ಎಪ್ರಿಲ್ 2ರಂದು ದೇಶವ್ಯಾಪಿ ಆಕ್ರೋಶ ವ್ಯಕ್ತವಾದಾಗ ಹಾಗೂ ನಂತರ ಈ ರಾಜ್ಯದಲ್ಲಿ ದಲಿತರ ಮೇಲೆ ನಡೆಯುತ್ತಿರುವ ದಾಳಿಗಳ ವಿರುದ್ಧ ಸಿಪಿಐ(ಎಂ) ನೇತೃತ್ವದಲ್ಲಿ ಎರಡು ತಿಂಗಳ ಕಾಲ ನಡೆದ ವ್ಯಾಪಕ ಪ್ರಚಾರಾಂದೋಲನ ಜೂನ್ 10ರಂದು "ದಲಿತ್ ಉತ್ಪೀಡನಾ-ವಿರೋಧಿ ಸಂಕಲ್ಪ ಸಭಾ' ದೊಂದಿಗೆ ಸಮಾರೋಪಗೊಂಡಿತು.

ಇದರಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿ, ಅದಕ್ಕೆ ಮೊದಲು ಎಪ್ರಿಲ್ 2 ರಂದು ಪ್ರಾಣ ಕಳಕೊಂಡವರ ಕುಟುಂಬಗಳನ್ನು ಭೇಟಿ ಮಾಡಿದರು, ಪಕ್ಷ ಸಂಗ್ರಹಿಸಿದ ಹಣಕಾಸು ನೆರವಿನ ಚೆಕ್‌ಗಳನ್ನು ನೀಡಿದರು.



ಸಾರ್ವಜನಿಕ ಸಭೆಯಲ್ಲಿ ಮಾತಾಡುತ್ತ "ದಾಳಿಗೆ ಒಳಗಾದವರು ಜೈಲುಗಳಲ್ಲಿದ್ದಾರೆ, ಜಾಮೀನು ಕೂಡ ಸಿಗುತ್ತಿಲ್ಲ, ದಾಳಿಕೋರರು ಆರಾಮವಾಗಿ ತಿರಗಾಡುತ್ತಿದ್ದಾರೆ, ದಲಿತರ ಮೇಲೆ ಇಂತಹ ಹಿಂಸಾಚಾರ ಮತ್ತು ಸರಕಾರದ ದಮನವನ್ನು ಬೇರೆಲ್ಲೂ ನೋಡಿಲ್ಲ" ಎಂದರು. ವಾಸ್ತವವಾಗಿ ಬಿಜೆಪಿಯವರು ಸಂವಿಧಾನವನ್ನು ಮುಗಿಸಿಬಿಟ್ಟು ಮನುಸ್ಮೃತಿ ಕೂರಿಸ ಬಯಸುತ್ತಿದ್ದಾರೆ. ಆದರೆ ದೇಶದ ಜನತೆ ಇದಕ್ಕೆ ಅವಕಾಶ ಕೊಡುವುದಿಲ್ಲ, ಹೋರಾಟ ಮುಂದುವರಿಯುತ್ತದೆ ಎಂದು ಎಚ್ಚರಿಸಿದರು.

ಸುಭಾಷಿಣಿ ಅಲಿಯವರು ಮಾತಾಡುತ್ತ ಕೊಲೆಗಡುಕರನ್ನು ಬಂಧಿಸದಿದ್ದರೆ ಸಂಘರ್ಷ ತೀವ್ರಗೊಳ್ಳುತ್ತದೆ ಎಂದು ಎಚ್ಚರಿಸಿದರು.

ಮಧ್ಯಪ್ರದೇಶ ಸಿಪಿಐ(ಎಂ) ಕಾರ್ಯದರ್ಶಿ ಜಸ್ವಿಂದರ್ ಸಿಂಗ್ ಹೋರಾಟದ ಮುಂದಿನ ಹಂತದ ಘೋಷಣೆ ಮಾಡಿದರು.

ನವ–ಉದಾರೀಕರಣದ ದಾಳಿ ಹಿಮ್ಮೆಟ್ಟಿಸುವತ್ತ..

ಪುಟ 3 ರಿಂದ

ಪ್ರಮುಖವಾದ ಉದ್ದೇಶ ಮತ್ತು ಅಪೇಕ್ಷೆ ಬಂಡವಾಳಶಾಹಿಗಳಿಗೆ ಲಾಭವನ್ನು ಹೆಚ್ಚು ಮಾಡಿಕೊಡುವಂತದ್ದಾಗಿದೆ. 2007–08 ರ ಆರ್ಥಿಕ ಬಿಕ್ಕಟ್ಟಿನ ನಂತರದಲ್ಲಿ ನವ ಉದಾರೀಕರಣ ನೀತಿಗಳು ಸಹಾಯಕವಾಗಿವೆ ಎಂಬುದು ಬಂಡವಾಳಶಾಹಿಯ ವಾದ. ಆದರೆ ನಮ್ಮ ವಾದ ಆಗಿಲ್ಲ ಅಂತ. ಹಾಗಾಗಿ ಆರ್ಥಿಕ ಬಿಕ್ಕಟ್ಟಿಲ್ಲ ಎನ್ನುವಂತದ್ದನ್ನು ಅವರಿಗೆ ಮುಚ್ಚಿಡಬೇಕು. ಇದು ಅವರಿಗೆ ಸಾಧ್ಯವಾಗುತ್ತಿಲ್ಲ. ಬಿಕಟ್ಟಿನಿಂದ ಪಾರಾಗಲು ಮತ್ತು ಲಾಭವನ್ನು ಗಳಿಸಲು ಅವರಿಗೆ ಇರುವದೊಂದೇ ಮಾರ್ಗ, ದುಡಿಯುವ ವರ್ಗದ ಮೇಲೆ ತೀವ್ರತರವಾದ ಕಾರ್ಮಿಕ ನೀತಿಗಳನ್ನು ಅನುಸರಿಸುವುದು. ಕಾರ್ಮಿಕರ ಸಂಬಳ, ಬದ್ಧತೆ, ಸವಲತ್ತುಗಳು, ಪೆನ್ಶನ್, ಸಬ್ಸಿಡಿ, ಇಂಕ್ರಿಮೆಂಟ್ಸ್, ಮತ್ತು ಸಾಮಾಜಿಕ ಧೋರಣೆಗಳನ್ನು ಇಟ್ಟುಕೊಂಡು ಮಾಡುವ ಕಾರ್ಯಕ್ರಮಗಳನ್ನು ನೀಡುವ ಲಾಭಾಂಶಗಳನ್ನು ಕಡಿತಗೊಳಿಸುವ ಮತ್ತು ರದ್ದುಗೊಳಿಸುವ ನೀತಿಗಳನ್ನು ಜಾರಿ ಮಾಡಲಿಕ್ಕೆ ಹೊರಡುತ್ತಿದ್ದಾರೆ. ಈ ನೀತಿಗಳು ಕಾರ್ಮಿಕರ ಮೇಲೆ ದಾಳಿ ಮಾಡುತ್ತಾ ಇವೆ. ಕಾರ್ಮಿಕರ ಬದುಕನ್ನು ಬಿಕ್ಕಟ್ಟಿಗೆ ಒಳಪಡಿಸುವುದಾಗಿದೆ. ಇಂತಹ ಸವಾಲಿನ ಸಂದರ್ಭದಲ್ಲಿ ಕಾರ್ಮಿಕರನ್ನು ಸಂಘಟಿಸಬೇಕಾಗಿದೆ. ಬಂಡವಾಳಶಾಹಿ ವ್ಯವಸ್ಥೆಯಿಂದ ಕಾರ್ಮಿಕವರ್ಗದ ವಿಮೋಚನೆಯಾಗಬೇಕಾಗಿದೆ. ಹಾಗಾಗಿ ಸಿ.ಐ.ಟಿ.ಯು ವ್ಯವಸ್ಥೆ ಬದಲಾಗಬೇಕು ಅಂತ ಹೇಳುತ್ತೆ. ಕಾರ್ಮಿಕ ಸಂಘ ಕಾರ್ಮಿಕ ಚಳುವಳಿಯಾಗಿ ಮಾರ್ಪಡುಗೊಂಡಾಗ ಮಾತ್ರ ಅದು ಸಾಧ್ಯ. ಇವತಿನ ಸಂದರ್ಭದಲ್ಲಿ ಕಾರ್ಮಿಕವರ್ಗವನ್ನು ಸಂಘಟಿಸುವುದು ಕೂಡ ಒಂದು ಸವಾಲಾಗಿದೆ. ಹಾಗಾಗಿ ನಾವು ನಮ್ಮ ಸಂಘಟನಾ ವಿಧಾನಗಳಲ್ಲಿ ಯಾವ ರೀತಿಯ ಬದಲಾವಣೆಗಳನ್ನು ಅಳವಡಿಸಿಕೊಳ್ಳಬೇಕು ಎನ್ನುವುದನ್ನು ಚರ್ಚಿಸಿದ್ದೇವೆ. ನಾವು ಇವತ್ತು ಅಖಿಲ ಭಾರತ ಮಟ್ಟದಲ್ಲಿ, ಸಂಘಟನೆಯ ಎಲ್ಲ ಹಂತಗಳಲ್ಲಿ ಚರ್ಚೆಗಳನ್ನು ಮಾಡಿ ಮಾರ್ಚ್ 23 ರಿಂದ 26 ವರಗೆ ಕೇರಳದ ಕೊಝಿಕೋಡ್‌ನಲ್ಲಿ ನಡೆದ ಸಿ.ಐ.ಟಿ.ಯು ಜನರಲ್ ಕೌನ್ಸಿಲ್ ಸಭೆಯಲ್ಲಿ ದಸ್ತಾವೇಜನ್ನು ಸಮಕಾಲೀನಗೊಳಿಸದ್ದೇವೆ. ಅದನ್ನು ನಮ್ಮ ಕೆಳಮಟ್ಟದ ಕಾರ್ಯಕರ್ತರಿಗೆ ಅರ್ಥಮಾಡಿಸುವುದಕ್ಕೆ ಈ ರಾಜ್ಯಮಟ್ಟದ ಕಾರ್ಯಾಗಾರವನ್ನು ನಡೆಸ್ತಾ ಇದ್ದೀವಿ.

ಜನಶಕ್ತಿ : ನವ ಉದಾರಿಕರಣ ನೀತಿಗಳ ವಿರುದ್ಧ ಸಿ.ಐ.ಟಿ.ಯು ಯಾವ ಕಾರ್ಯಕ್ರಮಗಳನ್ನು ರೂಪಿಸ್ತಾ ಇದೆ?

ವರಲಕ್ಷ್ಮಿ : ಕಾರ್ಯಾಗಾರದ ನಂತರದಲ್ಲಿ ಸಿ.ಐ.ಟಿ.ಯು ಹಲವು ತರಹದ ಹೊರಾಟಗಳಿಗೆ ಕರೆ ಕೊಟ್ಟಿದೆ. ನವ ಉದಾರಿಕರಣ ನೀತಿಗಳನ್ನು ಬಹಳ ತೀವ್ರವಾಗಿ ಜಾರಿಮಾಡಲು ತುದಿಗಾಲಲ್ಲಿ ನಿಂತಿರುವ ಆರ್‌ಎಸ್.ಎಸ್ ಪ್ರೇರಿತವಾದ ನರೇಂದ್ರ ಮೋದಿ ಬಿ.ಜೆ.ಪಿ ಸರ್ಕಾರ ಈ ನೀತಿಗಳಿಗೆ ಕಡಿವಾಣ ಹಾಕಬೇಕು. ಕಾರ್ಮಿಕರ ಹಲವು ಬೇಡಿಕೆಗಳನ್ನ ಈಡೇರಿಸಬೇಕು. ಹಲವು ರೀತಿಯ ಹೊರಾಟ ಮತ್ತು ಪ್ರಚಾರಾಂದೋಲನ ಕಾರ್ಯಕ್ರಮಗಳು, ಅದರಲ್ಲಿ ಬಹಳ ಪ್ರಮುಖವಾಗಿ ಜಿಲ್ಲಾ ಮಟ್ಟದ ಜಾಥಾಗಳನ್ನ ಮಾಡಬೇಕು. ಈ ಜಾಥಾ ಭಾಗವಾಗಿ ಪ್ರತಿ ಗ್ರಾಮಪಂಚಾಯಿತಿ ಮತ್ತು ವಾರ್ಡ್ ಮಟ್ಟದಲ್ಲಿ ಬಹಿರಂಗ ಸಭೆಗಳನ್ನು ನಡೆಸಬೇಕು ಅಂತ ತೀರ್ಮಾನಿಸಿದ್ದೇವೆ. ಇದರಿಂದ ಗ್ರಾಮ ಮಟ್ಟದ ಕಾರ್ಮಿಕರನ್ನು ತಲುಪಲಿಕ್ಕೆ ಸಾಧ್ಯವಾಗುತ್ತದೆ. ಅವರಿಗೆ ಈ ಕಾರ್ಮಿಕ–ವಿರೋಧಿ ನವ–ಉದಾರಿಕರಣದ ನೀತಿಗಳನ್ನ ಅರ್ಥಮಾಡಿಸಲಿಕ್ಕೆ ಸಾಧ್ಯವಾಗುತ್ತದೆ.



ಸಿಐಟಿಯು ರಾಜ್ಯ ಸಮಿತಿ ಕಳೆದ ತಿಂಗಳು ಸಭೆ ಸೇರಿ ಸಂಘಟನೆಯುನ್ನು ಬಲಪಡಿಸಲು ರಾಜ್ಯ ಮತು ಜಿಲ್ಲಾ ಕಾರ್ಯಾಗಾರಗಳನ್ನು ಸಂಘಟಿಸಲು ನಿರ್ಧರಿಸಿತು. ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಯುಲ್ಲಿ ಅಂತಿಮಗೊಳಿಸಲಾದ ಸಮಕಾಲಿನಗೊಳಿಸಿ ಸಂಘಟನಾ ದಸ್ತಾವೇಜಿನ ಸಮರ್ಪಕ ಜಾರಿಗಾಗಿ ಸಿದ್ಧತೆಗಳನ್ನು ಮಾಡಲು ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ. ರಾಜ್ಯ ಮಟ್ಟದ ಕಾರ್ಯಾಗಾರ ದಿನಾಂಕ 13, 14 ಮತ್ತು 15 ಜೂನ್, 2018 ರಲ್ಲಿ ಬೆಂಗಳೂರಿನಲ್ಲಿ ನಡೆದಿದೆ. ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಿಯುಟಿಯು ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ ಅವರೊಡನೆ ಜನಶಕ್ತಿಯ ಪ್ರಶಾಂತ ಹಟ್ಟಿ ಅವರು ನಡೆಸಿದ ಸಂದರ್ಶನ ಇಲ್ಲಿದೆ.

ಆಗಸ್ಟ್ 9 ಕ್ಕೆ ಕ್ವಿಟ್ ಇಂಡಿಯಾ ಚಳುವಳಿಯ ನೆನಪಿನಾರ್ಥ ಕರ್ನಾಟಕ ಪ್ರಾಂತ ರೈತ ಸಂಘ ಅಖಿಲ ಭಾರತ ಮಟ್ಟದಲ್ಲಿ ಈ ಉದಾರೀಕರಣದ ಧೋರಣೆಗಳನ್ನು ವಿರೋಧಿಸಿ ಜೈಲ್ ಭರೊ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಸಿ.ಯು.ಟಿ.ಯು ಸಹ ಬೆಂಬಲವನ್ನು ಸೂಚಿಸಿ ಕಾರ್ಮಿಕರು ಅದರಲ್ಲಿ ಭಾಗವಹಿಸಲಿದ್ದೇವೆ.

ಆಗಸ್ಟ್ 14 ರಂದು ಅಂದರೆ ಸ್ವಾತಂತ್ರ್ಯ ದಿನದ ಮುನ್ನಾದಿನ ಅಹೋರಾತ್ರಿ ಧರಣಿ ನಡೆಸಲಿದ್ದೇವೆ.

ಜನಶಕ್ತಿ : ಸ್ವಾತಂತ್ರ್ಯ ದಿನದಂದು ರಂದು ಅಹೋರಾತ್ರಿ ಧರಣಿ ನೆಡೆಸುವುದು ಸರಿನಾ?

ವರಲಕ್ಷ್ಮಿ : ಹೌದು. ಪ್ರತಿಯೊಬ್ಬನ ಬದುಕು ಕೂಡಾ ಘನತೆಯ ಬದುಕಾಗಿ ರೂಪುಗೊಳ್ಳಬೇಕು ಎಂಬ ಕಣ್ಣೋಟದಿಂದ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ನಡೆಸಲಾಗಿತ್ತು. ಆದರೆ ಇವತ್ತು ಘನತೆಯ ಬದುಕಿಗೆ, ಅಭಿವ್ಯಕ್ತಿ ಸ್ವಾತ್ಯಂತ್ರ್ಯಕ್ಕೆ, ವ್ಯಕಿ ಸ್ವಾತಂತ್ರ್ಯಕ್ಕೆ, ಮತ್ತು ದೇಶದ ಏಕತೆಗೆ ಇವತ್ತು ದಕ್ಕೆ ಬಂದಿರುವ ಹಿನ್ನೆಲೆಯೊಳಗಡೆ ನಾವು ಪ್ರತಿ ವರ್ಷ ಆಗಸ್ಟ 14 ರಂದು ಸಾಮೂಹಿಕ ಸತ್ಯಾಗ್ರಹವನ್ನು ನಾವು ನಡೆಸಿಕೊಂಡು ಬರ್ತಾ ಇದ್ದೇವೆ. ಅಂದರೆ ಸ್ವಾತ್ಯಂತ್ರ್ಯ ಸಂಗ್ರಾಮದ ಆಶಯಗಳನ್ನು ಎತ್ತಿ ಹಿಡಿಯಲಿಕ್ಕೆ ಈ ಸಾಮೂಹಿಕ ಸತ್ಯಾಗ್ರಹವನ್ನು ಎಲ್ಲ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ನೆಡೆಸಿಕೊಂಡು ಬರುತ್ತಾ ಇದ್ದೇವೆ.

ಜನಶಕ್ತಿ : ಸೆಪ್ಟೆಂಬರ್ 9 ರ ಪಾರ್ಲಿಮೆಂಟ್ ಚಲೋ ಯಾವ ಬೇಡಿಕೆಗಳಿಗಾಗಿ ನಡೆಸಲು ತೀರ್ಮಾನಿಸಿದ್ದೀರಿ? ಕರ್ನಾಟಕದಿಂದ ಎಷ್ಟು ಜನ ಭಾಗವಹಿಸಲಿದ್ದೀರಿ?

ವರಲಕ್ಷ್ಮಿ : ಜೊತೆಗೆ ಸೆಪ್ಟೆಂಬರ್ 5 ಕ್ಕೆ ಪಾರ್ಲಿಮೆಂಟ್ ಎದುರು ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ನಡೆಸಬೇಕು ಅಂತ ತೀರ್ಮಾನಿಸಿರುವ ಉದ್ದೇಶ, ಈ ಉದಾರೀಕರಣ ನೀತಿಗಳನ್ನು ಕೇಂದ್ರ ಸರ್ಕಾರ ಬದಲಾವಣೆ ಮಾಡಿಕೊಳ್ಳಬೇಕ್ಕು ಅಂತ ಹೇಳುವ ಸಲುವಾಗಿ ನಾವು ಪಾರ್ಲಿಮೆಂಟ್ ಎದುರು ದೊಡ್ಡ ರೀತಿಯಲ್ಲಿ ಪ್ರತಿಭಟನೆಯನ್ನು ಮಾಡಲಿದ್ದೇವೆ ಕರ್ನಾಟಕದಿಂದಲೂ ಸಾವಿರ ಜನ ಈ ಹೋರಾಟದಲ್ಲಿ ಭಾಗವಹಿಸಲಿದ್ದಾರೆ. ಸಿ.ಐ.ಟಿ.ಯು ರೈತರು ಕೃಷಿಕೂಲಿಕಾರ ಸಂಘಟನೆಗಳು ಪಾರ್ಲಿಮೆಂಟ್ ಚಲೋ ಕಾರ್ಯಕ್ರಮದಲ್ಲಿ ಪಾಲ್ಗೊಳುತ್ತಿವೆ.

ಜನಶಕ್ತಿ : ರೈತರು ಮತ್ತು ಕಾರ್ಮಿಕರ ಬೇಡಿಕೆಗಳು ವಿಭಿನ್ನವಾಗಿದ್ದು ಅವರನ್ನು ಜತೆಗೆ ಹೇಗೆ ಸಂಘಟಿಸುತ್ತೀರಾ?

ವರಲಕ್ಷ್ಮಿ : ಅನ್ನ ಬೆಳೆಯುವವನು ರೈತನಾದರೆ ಸಂಪತ್ತನ್ನು ಸೃಷ್ಟಿ ಮಾಡುವವನು ಕಾರ್ಮಿಕ ಮತ್ತು ಸೇವೆಯನ್ನು ನೀಡುವಂತವನು ನೌಕರ ಈ ಮೂರು ವರ್ಗಗಳು ಕೂಡಾ ಬೇರೆ ಬೇರೆ ಅಂತ ವ್ಯಾಖ್ಯಾನ ಮಾಡೊಕೆ ಬರುವುದಿಲ್ಲ. ಇವತ್ತು ಉದ್ಯೋಗ, ನಿರುದ್ಯೋಗ ಯಾವ ಹಿನ್ನೆಲೆಯಲ್ಲಿ ಬರುತ್ತದೆ? ಕೃಷಿ ಒಂದು ಬಿಕ್ಕಟ್ಟಿನಲ್ಲಿ ಇರುವಂತಹ ಸಂದರ್ಭದಲ್ಲಿ ನಿರುದ್ಯೋಗ ಸೃಷ್ಟಿಯಾಗುತ್ತದೆ, ರೈತ ಕೃಷಿ ಮಾಡಲಿಲ್ಲ ಅಂತ ಅಂದ್ರೆ ಕಾರ್ಮಿಕ ಹೊಟ್ಟೆ ತುಂಬಿಸಿಕೋಳ್ಳೊಕೆ ಆಗಲ್ಲ, ಹಾಗಾಗಿ ರೈತ ಕಾರ್ಮಿಕರ ಐಕ್ಯತೆ ಚಿರಾಯವಾಗಲಿ ಅನ್ನುವುದೇ ನಮ್ಮ ಆಶಯವಾಗಿದೆ. ಇವತ್ತು ರೈತರ ಶತ್ರು ಭೂಮಾಲಕ. ಕಾರ್ಮಿಕರ ಶತ್ರು ಬಂಡವಾಳಗಾರ. ಈ ಭೂಮಾಲಕ ಮತ್ತು ಬಂಡವಾಳಗಾರ ಇಬ್ಬರು ಕೂಡಾ ಶೋಷಣೆ ಮಾಡುವ ಹಿನ್ನೆಲೆ ಉಳ್ಳವರಾಗಿದ್ದಾರೆ. ಶೋಷಣೆ ಮಾಡವ ಈ ಇಬ್ಬರು ಒಂದಾಗಿದ್ದಾರೆ ಹಾಗಾಗಿ ಶೋಷಿತರು ಒಂದಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಈ ನವ–ಉದಾರಿಕರಣ ನೀತಿಗಳು ಕೃಷಿ ಬಿಕ್ಕಟ್ಟನ್ನು ಸೃಷ್ಟಿಸಿ ರೈತರ ಆತ್ಮಹತ್ಯೆಗೆ ಎಡೆಮಾಡಿಕೊಡುತ್ತಿವೆ. ನವಉದಾರಿಕರಣದ ನೀತಿಗಳು ರೈತ ಮತ್ತು ಕಾರ್ಮಿಕರ ಮೇಲೆ ಕೆಟ್ಟ ಪರಿಣಾಮಗಳನ್ನೇ ಬಿರುತ್ತಿವೆ. ಹಾಗಾಗಿ ರೈತರು ಮತ್ತು ಕಾರ್ಮಿಕರು ಸೇರಿ ಹೋರಾಟವನ್ನು ಮಾಡುತ್ತಿದ್ದೇವೆ.

ಜನಶಕ್ತಿ : ರೈತರು ಮತ್ತು ಕಾರ್ಮಿಕರು ಸೇರಿಕೊಂಡು ಪ್ರತಿಭಟಣೆ ಮಾಡುತ್ತಿರುವುದು ಇದೇ ಮೊದಲ ಬಾರಿನಾ?

ವರಲಕ್ಷ್ಮಿ : ಇದೇ ಮೊದಲೇನಲ್ಲ. ಹಿಂದೆ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಒಟ್ಟಿಗೆ ಮಾಡಿದ್ದೇವೆ. 2014 ರಲ್ಲಿ ಮೋದಿ ಸರ್ಕಾರ ಭೂಮಿ ವಶಪಡಿಸಿಕೊಳ್ಳುವುದಕ್ಕೆ ಸುಗ್ರಿವಾಜ್ಞೆಯನ್ನು ತಂದರು. ಇದನ್ನು ವಿರೋಧಿಸಿ ಜಂಟಿಯಾಗಿ ಹೋರಾಟಗಳನ್ನು ಮಾಡಿದ್ದೇವೆ. ಇನ್ನು ಮನಮೋಹನ್ ಸಿಂಗ್ ಸರ್ಕಾರದಲ್ಲಿ ಸಹ ಜಂಟಿ ಹೋರಾಟಗಳನ್ನು ಮಾಡಿದ್ದೇವೆ, ಬೆಲೆಯೇರಿಕೆ, ವಸತಿಯ ಪ್ರಶ್ನೆಗಳು, ಭೂಮಿಯ ಪ್ರಶ್ನೆಗಳು ಬಂದಾಗ ಜಂಟಿಯಾಗಿ ಧ್ವನಿಯನ್ನು ಎತ್ತಿದ್ದೇವೆ. ಯಾಕೆಂದರೆ ಕಾರ್ಮಿಕರಿಗೂ ವಸತಿ ಬೇಕು, ಭೂಮಿ ಬೇಕು. ಇದೆಲ್ಲ ಜನರನ್ನು



ಬಾಧಿಸುತ್ತಿದೆ. ಹಾಗಾಗಿ ಈ ರೀತಿಯ ಸಾಮಾನ್ಯ ವಿಷಯಗಳ ಮೇಲೆ ಜಂಟಿಯಾಗಿ ಹೋರಾಟಗಳನ್ನು ಮಾಡಿಕೊಂಡು ಬಂದಿದ್ದೇವೆ. ಮುಂದೇನೂ ಮಾಡುತ್ತೇವೆ.

ಜನಶಕ್ತಿ : ರಾಜ್ಯ ಸರ್ಕಾರದ ಕಾರ್ಮಿಕ ನೀತಿಗಳ ವಿರುದ್ಧ ಯಾವ ರೀತಿಯಾದ ಹೋರಾಟಗಳನ್ನು ಮಾಡುತ್ತಿದ್ದೀರಿ?

ವರಲಕ್ಷ್ಮಿ : ನಾವು ಹಲವು ರೀತಿಯ ಹೋರಾಟಗಳನ್ನು ನಡೆಸಿದ್ದೇವೆ. ಕರ್ನಾಟಕದಲ್ಲಿ ಕಾರ್ಮಿಕರ ಹೋರಾಟ ಅಂತ ಗುರುತಿಸುವುದಾರೆ ಮೊದಲ ಸ್ಥಾನದಲ್ಲಿರುವುದು ಸಿ.ಐ.ಟಿ.ಯು ಸಂಘಟನೆಯಾಗಿದೆ. ರಾಜ್ಯದಲ್ಲಿಯೂ ಸಹ ಕನಿಷ್ಠ ಕೂಲಿಯ ಪ್ರಶ್ನೆ ಗುತ್ತಿಗೆ ಕಾರ್ಮಿಕರ ಪ್ರಶ್ನೆ ಇದೆ, ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಮಿಕರ ಸಮ್ಮಸ್ಯೆಗಳಿವೆ. ಅದೇ ರೀತಿನಲ್ಲಿ ಮುನ್ಸಿಪಲ್, ಗ್ರಾಮ ಪಂಚಾಯಿತಿ ಕೆಲಸಗಾರರನ್ನು, ಸರಿಯಾದ ಸಂಬಳ ನೀಡದೆಯೇ ದುಡಿಸಿಕೊಳ್ಳುವಂತಹ ಪ್ರಶ್ನೆ ಇದೆ. ಕಟ್ಟಡ ಕಾರ್ಮಿಕರಿಗೆ ಸಾಮಾಜಿಕ ಸೌಲಭ್ಯಗಳ ಭಾಗವಾಗಿ ಸವಲತ್ತುಗಳು ಇದ್ದರೂ ಕೂಡ ಆ ಸವಲತ್ತುಗಳು ಅವರಿಗೆ ದೊರಕುತಿಲ್ಲ. ಹಮಾಲಿ ಕಾರ್ಮಿಕರಿಗೆ ಯಾವ ಭದ್ರತೆನೂ ಇಲ್ಲದೆ ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಇನ್ನು ಕಾರ್ಖಾನೆಗಳಲ್ಲಿ ಸಂಘಟನೆ ಕಟ್ಟಿಕೊಂಡ್ರೆ ಕಾರ್ಖಾನೆಗಳನ್ನೇ ಮುಚ್ಚುವ ಪ್ರಶ್ನೆ ಇದೆ. ಅದಕ್ಕಾಗಿ ಬಹಳ ವರ್ಷಗಳಿಂದ ಹೋರಾಟಗಳನ್ನು ಮಾಡ್ತಿದೀವಿ. ಹೇಗೆ ಅಖಿಲ ಭಾರತ ಮಟ್ಟದಲ್ಲಿ ಇಂಡಿಯನ್ ಲೇಬರ್ ಕಾನ್ಫ್ರೆನ್ಸ್ ಅಂತ ಇದೆ ಹಾಗೆ ಕರ್ನಾಟಕ ಲೇಬರ್ ಕಾನ್ಫ್ರೆನ್ಸ್ ಸ್ಥಾಪಿಸಬೇಕು ಅಂತ ಒತ್ತಾಯ ಮಾಡ್ತಾ ಇದೀವಿ. ಗುತ್ತಿಗೆ ಕಾರ್ಮಿಕರಿಗೆ ತಮಿಳುನಾಡು, ಅಸ್ಸಾಮ್ ಮಾದರಿ ಕಾನೂನುಗಳನ್ನು ಕರ್ನಾಟಕದಲ್ಲೂ ಜಾರಿ ಗೊಳಿಸಬೇಕು. ಈ ಕಾನೂನುಗಳಲ್ಲಿ 250 ದಿನ ಕೆಲಸಮಾಡುವ ಕಾರ್ಮಿಕರನ್ನು ಖಾಯಂ ಕಾರ್ಮಿಕರನ್ನಾಗಿ ಮಾಡಿಕೊಳ್ಳಬೇಕು ಎನ್ನುವುದನ್ನು ಹೇಳುತ್ತದೆ.

ಗುತ್ತಿಗೆ ಕಾರ್ಮಿಕರಲ್ಲಿಯೂ ಸಹ ಮೂರು ವಿಭಾಗಗಳನ್ನು ನಾವು ನೋಡಬಹುದು. ಖಾಸಗಿ ವಲಯ ಕಾರ್ಖಾನೆಗಳಲ್ಲಿ, ಮಲ್ಟಿನ್ಯಾಶನಲ್ ಕಂಪೆನಿಗಳಲ್ಲಿ, ಸರಕಾರಿ ವಲಯದ ಬಿ.ಎಸ್.ಎನ್.ಎಲ್., ಬ್ಯಾಂಕ್, ಎಲ್.ಐ.ಸಿ, ರೈಲ್ವೆ, ಇಲಾಖೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು ನಾವು ನೋಡಬಹುದು. ಇನ್ನು ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಇದನ್ನೇ ನಾವು ನೋಡಬಹುದು. ಈ ರೀತಿಯ ಶೋಷಣೆ ನಡಿತಾ ಇದೆ. ಇವರನೆಲ್ಲ ಸಂಘಟಿಸಬೇಕು. ಇವರನೆಲ್ಲ ಖಾಯಂ ಮಾಡಿಕೊಳ್ಳಬೇಕು ಅನ್ನುವ ಬೇಡಿಕೆ ಇದೆ. ಸಾರಿಗೆ, ಆಟೋ, ಇವರಿಗೆಲ್ಲ ಶೋಷಣೆಗೆ ಒಳಪಡಿಸ್ತಾ ಇದ್ದಾರೆ. ಇವೆಲ್ಲವು ಸಹ ಕಾರ್ಮಿಕ ನೀತಿ ಧೋರಣೆಗಳ ಪರಿಣಾಮವೇ. ಇವರನ್ನೆಲ್ಲ ಸಂಘಟಿಸುವ ಕೆಲಸವನ್ನು ಮಾಡುತ್ತಿದ್ದೇವೆ.

ಪ್ರಜಾಪ್ರಭುತ್ವ ಸಂವಿಧಾನದ ಬದಲು ಮರಳಿ ಅಸಮಾನತೆಯ ಮನುಸ್ಮೃತಿಯತ್ತ




ಆರು ತಿಂಗಳ ಹಿಂದೆ ಮೋದಿ ಸಂಪುಟದಲ್ಲಿನ ಕರ್ನಾಟಕದ ಒಬ್ಬ ಮಂತ್ರಿಗಳು ತಮ್ಮ ಸರಕಾರ ಬಂದಿರುವುದು ಸಂವಿಧಾನವನ್ನು ಬದಲಿಸಲು ಎಂದು ಸಾರಿದರು. ಈ ಬಗ್ಗೆ ಸಂಸತ್ತಿನಲ್ಲಿ ಗಲಭೆ ಉಂಟಾದಾಗ ಮೋದಿ ಸರಕಾರದ ವಕ್ತಾರರು ಇದು ಸರಕಾರದ ಅಭಿಪ್ರಾಯವಲ್ಲ ಎಂದರು. ಆದರೆ ಸಂಬಂಧಪಟ್ಟ ಮಂತ್ರಿ, ಅನಂತಕುಮಾರ ಹೆಗ್ಡೆ ಈ ಬಗ್ಗೆ ಸಂಸತ್ತಿನಲ್ಲಿ ಸ್ಪಷ್ಟೀಕರಣ ನೀಡಬೇಕೆಂಬ ಅಗ್ರಹವನ್ನು ಸರಕಾರವೂ ಸ್ವೀಕರಿಸಲಿಲ್ಲ.

ಅದರಲ್ಲಿ ಆಶ್ವರ್ಯವೇನೂ ಇಲ್ಲ. ಏಕೆಂದರೆ ಈ ಮಂತ್ರಿ ಈ ಪಕ್ಷದ ದೀರ್ಘಕಾಲದ ನಿಲುವನ್ನೇ ತಮ್ಮದೇ ಧಾಟಿಯಲ್ಲಿ ಹೇಳಿದ್ದರು. ಬಿಜೆಪಿ ಮತ್ತು ಅದಕ್ಕಿಂತ ಮುಖ್ಯವಾಗಿ ಅದರ ಗುರು–ಮಾರ್ಗದರ್ಶಕ ಆರೆಸ್ಸೆಸ್ ಆರಂಭದಿಂದಲೂ ಸ್ವತಂತ್ರ ಭಾರತ ಅಂಗೀಕರಿಸಿದ ಗಣತಂತ್ರ ಸಂವಿಧಾನವನ್ನು ಗೇಲಿ ಮಾಡುತ್ತಲೇ ಬಂದಿದೆ. 1950ರಲ್ಲಿ ಅದು ನಮ್ಮ ದೇಶ 'ಮನುಸ್ಮೃತಿ'ಯನ್ನು ಅನುಸರಿಸಬೇಕು ಎಂದು ಬಯಸಿತ್ತು. 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಬಿಜೆಪಿ–ಸಂಘ ಪರಿವಾರ ಈ ಸಂವಿಧಾನದ ಮೇಲೆ ಎಲ್ಲೆಡೆಗಳಿಂದಲೂ ದಾಳಿ ನಡೆಸುತ್ತಿದ್ದಾರೆ..

ಈ ದಾಳಿ ಮುಖ್ಯವಾಗಿ ಭಾರತೀಯ ಸಂವಿಧಾನದ ಜಾತ್ಯತೀತ ಸ್ವರೂಪದ ಮೇಲೆಯೇ.. ಜಾತ್ಯತೀತತೆ ಇವರೆಲ್ಲರಿಗೆ ಒಂದು ಹೊಲಸು ಪದ, ಅದನ್ನು ಸಂವಿಧಾನದಿಂದ ತೆಗೆಯುವುದು ಇವರ ಮುಖ್ಯ ಗುರಿಗಳಲ್ಲಿ ಒಂದು. ಮಂತ್ರಿ ಹೆಗ್ಡೆಯ ಘೋಷಣೆ ಇದರದ್ದೇ ಒಂದು ಭಾಗವಾಗಿತ್ತು. ಆತ ಜಾತ್ಯತೀತತೆ ಮತ್ತು ಅದಕ್ಕೆ ಬದ್ಧವಾಗಿರುವವರ ಬಗ್ಗೆ ಆಡಿದ ತನ್ನ ಚಾರಿತ್ರ್ಯ–ಸಹಜ ಮಾತುಗಳಲ್ಲಿ ಹೊರಹಾಕಿದ್ದು ಅದೇ ದ್ವೇಷವನ್ನೇ ಎಂಬುದು ಗಮನಾರ್ಹ.

ಪ್ರಧಾನ ಮಂತ್ರಿಗಳಿಂದ ಹಿಡಿದು ಕೆಳಗಿನ ವರೆಗೆ ಕಾರ್ಯಾಂಗದಲ್ಲಿ, ಅಂದರೆ ಸರಕಾರದಲ್ಲಿ 'ಹಿಂದೂರಾಷ್ಟ್ರ' ರಚನೆಗೆ ಬದ್ಧವಾದವರನ್ನು ತುಂಬಿಸಿದ ನಂತರ ಎಲ್ಲೆಡೆಗಳಲ್ಲಿ ಹಲವಾರು ರಂಗಗಳಲ್ಲಿ ಧಾರ್ಮಿಕ ಮೂಢನಂಬಿಕೆಗಳು ಮತ್ತು ಹಿಂದುತ್ವ ಮತಾಂಧತೆಯನ್ನು ಪೋಷಿಸುವ, ಹರಡುವ ಕೆಲಸ ಭರದಿಂದ ಸಾಗಿದೆ.

ಜಾತ್ಯತೀತತೆಯನ್ನು ಸಮಾಧಿ ಮಾಡುವ, ಸಾಮಾಜಿಕ ನ್ಯಾಯದ ಆಶಯಗಳನ್ನು, ಒಟ್ಟಿನಲ್ಲಿ ಸಂವಿಧಾನವನ್ನು ನಿರಾಕರಿಸುವ, ದುರ್ಬಲಗೊಳಿಸುವ ಮತ್ತು ಕಳಚಿ ಹಾಕುವ ಪ್ರಯತ್ನಗಳು ಸಾಕಷ್ಟು ಸದ್ದು–ಗದ್ದಲಗಳೊಂದಿಗೇ ನಡೆಯುತ್ತಿವೆ.



(ಆಧಾರ: ಮೋದಿ ಸರಕಾರದ ದುರಾಡಳಿತದ ನಾಲ್ಕು ವರ್ಷಗಳು–ಏಕೆ ಕೊನೆಗೊಳ್ಳಬೇಕು' ಮಾಲೆಯ ಎರಡನೇ ಕಿರುಪುಸ್ತಕ)

'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎಂಬೊಂದು ಮಹಾಬೊಗಳೆ

ಎಲ್ಲ ಸಮುದಾಯಗಳೊಂದಿಗೆ ಎಲ್ಲರ ಅಭಿವೃದ್ಧಿ ಎಂಬ ಮಂತ್ರೋಚ್ಚಾರ ಮಾಡುತ್ತಲೇ ಈ ಬಾಯಿಗಳು

* ಬೆಂಕಿ ಹಚ್ಚುವ, ಸಮುದಾಯಗಳನ್ನು ವಿಭಜಿಸುವ, ಧ್ರುವೀಕರಿಸುವ ಮಾತುಗಳನ್ನೇ ಹೇಳುತ್ತ ಬಂದಿವೆ. ಚುನಾವಣೆಗಳ ಸಮಯದಲ್ಲಂತೂ ಪ್ರಧಾನ ಬಾಯಿಯಿಂದಲೇ ಇಂತಹ ಮಾತುಗಳು ಈ ನಾಲ್ಕು ವರ್ಷಗಳಲ್ಲಿ ಹೊರಹೊಮ್ಮಿವೆ.
* ಗೋಹತ್ಯೆ, ಗೋಮಾಂಸ ಭಕ್ಷಣೆ, ಲವ್ ಜಿಹಾದ್, ಮತಾಂತರ, ಜನಸಂಖ್ಯಾ ಹೆಚ್ಚಳ, ಪಾಕಿಸ್ತಾನಕ್ಕೆ ವಿಧೇಯತೆ, ಅಂತರ್‍ರಾಷ್ಟ್ರೀಯ ಜಿಹಾದಿಗಳೊಂದಿಗೆ ಸಂಬಂಧ ಇವೇ ಮೊದಲಾದವುಗಳು ಮುಸ್ಲಿಂ ಮತ್ತು ಕ್ರೈಸ್ತ ಅಲ್ಪಸಂಖ್ಯಾತ ಸಮುದಾಯಗಳ ವಿರುದ್ಧ ಸುಳ್ಳುಗಳ, ದ್ವೇಷ ಪ್ರಚಾರದ, ಸಮಾಜವನ್ನು ವಿಭಜಿಸುವ, ಕೋಮುಧ್ರುವೀಕರಣದ ವಿಷಯಗಳು.
* ಇವೆಲ್ಲ ವಿಷಯಗಳ ಮೇಲೆ ಅರೆ ಸತ್ಯಗಳು, ಶುದ್ಧ ಸುಳ್ಳುಗಳ ಜೊತೆಗೆ ಧರ್ಮರಕ್ಷಣೆಯ ಹೆಸರಲ್ಲಿ ಕ್ರಿಮಿನಲ್ ಕೃತ್ಯಗಳಲ್ಲಿ ತೊಡಗಿರುವವರಿಗೆ ಕಾನೂನು ಕ್ರಮಗಳಿಂದ ರಕ್ಷಣೆ ಒದಗಿಸಲಾಗುತ್ತಿದೆ.
* ಭಯೋತ್ಪಾದನೆಯ ವಿರುದ್ಧ ಕೆಂಡ ಕಾರುತ್ತಲೇ ಮಕ್ಕಾ ಮಸೀದಿ, ಮಾಲೆಗಾಂವ್ ಇತ್ಯಾದಿ ಸ್ಫೋಟಗಳಲ್ಲಿ, 2002ರ ಗುಜರಾತ್ ಹತ್ಯಾಕಾಂಡದಲ್ಲಿ ಅಪಾರ ಪ್ರಾಣ ಹಾನಿಗಳಿಗೆ ಕಾರಣರಾದವರನ್ನು ಖುಲಾಸೆ ಮಾಡಲಾಗಿದೆ.

ಕೆಲವು ಅಂಕಿ–ಅಂಶಗಳನ್ನು ನೋಡಿ–

ದ್ವೇಷದ ಬೆಂಕಿ ಹಚ್ಚುವ ಹೇಳಿಕೆಗಳು

ಕಳೆದ ನಾಲ್ಕು ವರ್ಷಗಳಲ್ಲಿ ರಾಜಕಾರಣಿಗಳಿಂದ ದ್ವೇಷಪೂರ್ಣ ಹೇಳಿಕೆಗಳ ಪ್ರಮಾಣದಲ್ಲಿ 490%, ಅಂದರೆ ಸುಮಾರು 5 ಪಟ್ಟು ಹೆಚ್ಚಳವಾಗಿದೆ ಎಂದು ಎನ್‌ಡಿಟಿವಿ ಪತ್ರಕರ್ತರು ಕಲೆ ಹಾಕಿದ ಮಾಹಿತಿಗಳು ಹೇಳುತ್ತವೆ (ಎನ್‌ಡಿಟಿವಿ, ಶ್ರೀನಿವಾಸನ್ ಜೈನ್ ಮತ್ತಿತರರು, ಎಪ್ರಿಲ್ 19, 2018).

* 2014–18ರ ಅವಧಿಯಲ್ಲಿ ಒಟ್ಟು 44 ರಾಜಕಾರಣಿಗಳ ಬಾಯಿಗಳಿಂದ 124 ದ್ವೇಷಪೂರಿತ ಹೇಳಿಕೆಗಳು ಮಾಧ್ಯಮಗಳಲ್ಲಿ ವರದಿಯಾಗಿವೆ. ಇದರಲ್ಲಿ 90% ಬಿಜೆಪಿ ರಾಜಕಾರಣಿಗಳ ಬಾಯಿಗಳಿಂದ ಉದುರಿದವುಗಳು.



* 2009–14ರಲ್ಲಿ ವರದಿಯಾದ ಇಂತಹ ಹೇಳಿಕೆಗಳ ಸಂಖ್ಯೆ 21, ಅವು 21 ರಾಜಕಾರಣಿಗಳಿಂದ ಬಂದಿವೆ. ಇದರಲ್ಲಿ ಆಗಿನ ಪ್ರಮುಖ ಆಳುವ ಪಕ್ಷವಾದ ಕಾಂಗ್ರೆಸ್ ರಾಜಕಾರಣಿಗಳ ಪ್ರಮಾಣ 14%. ಆಗಲೂ ಬಿಜೆಪಿ ರಾಜಕಾರಣಿಗಳದ್ದೇ ಸಿಂಹಪಾಲು, ಅಂದರೆ 30%
* ಈ ದ್ವೇಷ ಹೇಳಿಕೆಗಳನ್ನು ನೀಡಿದವರಲ್ಲಿ ಕೇವಲ 6 ರಾಜಕಾರಣಿಗಳನ್ನು ಸಂಬಂಧಪಟ್ಟ ಪಕ್ಷಗಳು ತರಾಟೆಗೆ ತಗೊಂಡವು, ಅಥವ ಅವರು ಸಾರ್ವಜನಿಕ ಕ್ಷಮೆ ಕೋರಿದರು. ಉಳಿದ 95% ರಾಜಕಾರಣಿಗಳು ರಾಜಾರೋಷವಾಗಿ ಮುಂದುವರೆದಿದ್ದಾರೆ. 11 ಕೇಸುಗಳಾಗಿವೆ,

ಪುಟ 10 ನೋಡಿ

ಸಂವಿಧಾನಿಕ ಆಳ್ವಿಕೆಗೆ ತಿಲಾಂಜಲಿ ಎಲ್ಲವೂ ಆರೆಸ್ಸೆಸ್‌ಮಯ

ಮೇ 20, 2014ರಂದು ಸಂಸದ್ ಭವನವನ್ನು ಮೊದಲ ಬಾರಿಗೆ ಪ್ರವೇಶಿಸುವ ಮೊದಲು ಪ್ರಧಾನ ಮಂತ್ರಿಗಳು ಭವನದ ಮೆಟ್ಟಲಲ್ಲಿ ತಲೆಯಿಟ್ಟು 'ಪ್ರಜಾಪ್ರಭುತ್ವದ ದೇವಾಲಯ'ವನ್ನು ಪ್ರವೇಶಿಸುತ್ತಿದ್ದೇನೆ ಎಂದು ಉದ್ಗರಿಸಿದರು. ಆದರೆ ಅದು ಕೂಡ ತದ್ವಿರುದ್ಧವಾದ ಆಚರಣೆಯನ್ನು ಮರೆಮಾಚುವ ಕ್ರಿಯೆ ಎಂಬ ಬಗ್ಗೆ ಈಗ ಪ್ರಜ್ಞಾಶೀಲರಿಗಾರಿಗೂ ಸಂದೇಹ ಉಳಿದಿಲ್ಲ–ಆಗ ಅವರನ್ನು ಸ್ವಾಗತಿಸಿದ ಹಲವರಿಗೂ ಕೂಡ.

ದೇಶ ಮೊದಲು, ಉತ್ತಮ ಆಳ್ವಿಕೆ, ಪಾರದರ್ಶಕತೆ, ಚೈತನ್ಯಶೀಲ ಭಾಗವಹಿಸುವಿಕೆಯ ಪ್ರಜಾಪ್ರಭುತ್ವ, ಇತ್ಯಾದಿ ಇತ್ಯಾದಿ ಮಾತಿನ ಮಂಟಪಗಳ ನಡುವೆ ಕಳೆದ ನಾಲ್ಕು ವರ್ಷಗಳಲ್ಲಿ ಕಂಡಿರುವುದು ಉತ್ತಮ ಆಳ್ವಿಕೆಯ ಸಂಸದೀಯ ನಡವಳಿಕೆಗಳನ್ನೆಲ್ಲ ಗಾಳಿಗೆ ತೂರಿ, ಸಂವಿಧಾನವನ್ನು ನಿರ್ಲಕ್ಷಿಸಿ ಅಧಿಕಾರಕ್ಕೆ ಅಂಟಿಕೊಳ್ಳುವ ಅದನ್ನು ದುರುಪಯೋಗ ಪಡಿಸಿಕೊಳ್ಳುವ ಅದರ ದುಷ್ಟ ಆಶಯಗಳನ್ನು.

ಈ ಪ್ರಕ್ರಿಯೆಯಲ್ಲಿ ಈ ಆಳ್ವಿಕೆ ಕಾರ್ಯಾಂಗ, ನ್ಯಾಯಾಂಗ, ರಿಝರ್ವ್ ಬ್ಯಾಂಕ್, ಚುನಾವಣಾ ಆಯೋಗ, ಕೇಂದ್ರೀಯ ವಿಚಕ್ಷಣಾ ಆಯೋಗ ಮತ್ತಿತರ



ಸಂವಿಧಾನಿಕ ಸಂಸ್ಥೆಗಳಲ್ಲೆಲ್ಲ ಆರೆಸ್ಸೆಸ್ ಮಂದಿಗಳನ್ನು ತುಂಬಿಸಿದೆ. ಇದರ ಇನ್ನೊಂದು ಮುಖವೆಂದರೆ, ಇಂತಹ ಸಂವಿದಾನ–ವಿರೋಧಿ ನಡವಳಿಕೆಗಳನ್ನು ವಿರೋಧಿಸುವವರಿಗೆ 'ರಾಷ್ಟ್ರ–ವಿರೋಧಿಗಳು' ಎಂಬ ಹಣೆ ಪಟ್ಟಿ ಹಚ್ಚುವುದು.

ಸಂಸತ್ತಿನ ಅವಗಣನೆ:

* ಈ ವರ್ಷ ಲೋಕಸಭೆಯಲ್ಲಿ ಚರ್ಚೆಯೇ ಇಲ್ಲದೆ ಬಜೆಟನ್ನು ಪಾಸು ಮಾಡಿಕೊಳ್ಳಲಾಗಿದೆ. ಅಂದರೆ ಜನತೆಯ ಹಣವನ್ನು ಹೇಗೆ ಬಳಸಬೇಕು ಎಂಬ ಬಗ್ಗೆ ಜನತೆಯ ಪ್ರತಿನಿಧಿಗಳು ಚರ್ಚಿಸಲು ಅವಕಾಶವನ್ನೇ ಈ 'ಪ್ರಜಾಪ್ರಭುತ್ವದ ದೇವಾಲಯ'ದಲ್ಲಿ ನಿರಾಕರಿಸಲಾಗಿದೆ.
* ನಿಯಮಾನುಸಾರ ಮಂಡಿಸಿದ ಅವಿಶ್ವಾಸ ಠರಾವಿನ ಮೇಲೆ ಚರ್ಚೆಗೆ ಅವಕಾಶ ನೀಡದೆಯೇ ಲೋಕ ಸಭಾಧ್ಯಕ್ಷರಿಂದ ಸಂಸತ್ತಿನ ಅಧಿವೇಶನದ

ಪುಟ 10 ನೋಡಿ

ಒಕ್ಕೂಟ ತತ್ವದ ಮೇಲೆ ಪ್ರಹಾರ–ರಾಜ್ಯಗಳ ಅಧಿಕಾರ ವ್ಯಾಪ್ತಿ ಮೊಟಕು

ವೈವಿಧ್ಯತೆಗಳ ನಡುವೆ ಐಕ್ಯತೆಯನ್ನು ಹಾಗೂ ಸಂಪನ್ಮೂಲಗಳ ಸಂಗ್ರಹಣೆ ಮತ್ತು ವಿತರಣೆಯಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುವುದು ಒಕ್ಕೂಟ ತತ್ವದ ಜೀವಾಳ. ಹಣಕಾಸು ಸಂಪನ್ಮೂಲಗಳ ವಿನಿಯೋಗವನ್ನು ಅದರ ಫಲಾನುಭವಿಗಳಿಗೆ ಹತ್ತಿರದಲ್ಲಿರುವ ಹಂತದ ಸರಕಾರ ಚೆನ್ನಾಗಿ ಮಾಡಬಲ್ಲದು ಮತ್ತು ಅದರ ಸಂಗ್ರಹಣೆಯನ್ನು ತೆರಿಗೆದಾರರಿಂದ ಅತಿ ದೂರದಲ್ಲಿರುವ ಹಂತದ ಸರಕಾರ ಚೆನ್ನಾಗಿ ಮಾಡಬಲ್ಲದು ಎಂಬ ವಿಚಾರದ ಆಧಾರದಲ್ಲಿ ಎಲ್ಲ ಒಕ್ಕೂಟ ವ್ಯವಸ್ಥೆಗಳಲ್ಲಿ ತೆರಿಗೆ ಹಾಕುವ ವ್ಯವಸ್ಥೆ ಕೇಂದ್ರ ಸರಕಾರದಲ್ಲಿದ್ದರೆ, ಅದರ ವಿನಿಯೋಗದ ಹೊಣೆಗಾರಿಕೆ ರಾಜ್ಯ ಸರಕಾರಗಳದ್ದಾಗಿರುತ್ತದೆ. ಇದರಿಂದಾಗಿ ಈ ಸಂಗ್ರಹಣೆ ಮತ್ತು ವಿನಿಯೋಗದಲ್ಲಿ ಉಂಟಾಗಬಹುದಾದ ಅಸಮತೋಲಗಳನ್ನು ತಪ್ಪಿಸಲು, ಕೇಂದ್ರದಿಂದ ರಾಜ್ಯಗಳಿಗೆ ಸಂಪನ್ಮೂಲಗಳ ವರ್ಗಾವಣೆಗೆ ಒಂದು ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ಭಾರತದ ಸಂವಿಧಾನ ತನ್ನ 280ನೇ ಕಲಮಿನ ಅಡಿಯಲ್ಲಿ ಐದು ವರ್ಷಗಳಿಗೊಮ್ಮೆ ನೇಮಿಸುವ ಹಣಕಾಸು ಆಯೋಗ ಅಂತಹ ಒಂದು ವ್ಯವಸ್ಥೆ. ಇದು ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ, ಮತ್ತು ವಿವಿಧ ರಾಜ್ಯ ಸರಕಾರಗಳ ನಡುವೆ ಸಂಪನ್ಮೂಲಗಳ ವಿತರಣೆಯನ್ನು ನಿರ್ಧರಿಸಬೇಕು.

ಅಂದರೆ ರಾಜ್ಯಗಳಿಗೆ ಹಣಕಾಸು ಸಂಪನ್ಮೂಲಗಳ ಲಭ್ಯತೆ ಕೇಂದ್ರದ ಉದಾರತೆಯೇನಲ್ಲ ಅದು ರಾಜ್ಯಗಳ ಹಕ್ಕು. ಆದ್ದರಿಂದ ಹಣಕಾಸು ಅಯೋಗಗಳ ನೇಮಕ ಮತ್ತು ಅವಕ್ಕೆ ವಿಧಿಸುವ ಪರಿಶೀಲನೆಯ ಅಂಶಗಳನ್ನು ಕೇಂದ್ರ ಸರಕಾರ ಮಾತ್ರವೇ ನಿರ್ಧರಿಸುವ ಕ್ರಮ ಒಕ್ಕೂಟ ತತ್ವಕ್ಕೆ ವಿರುದ್ಧವಾಗಿರುವ ಸಂಗತಿ.

1990ರ ದಶಕದಲ್ಲಿ ನವ–ಉದಾರೀಕರಣದ ಧೋರಣೆಗಳು ಆರಂಭವಾದಂದಿನಿಂದ ಇದನ್ನು ಕೇಂದ್ರದಲ್ಲಿನ ಸರಕಾರದ ನವ–ಉದಾರೀಕರಣ ನೀತಿಗಳ ಹೇರಿಕೆಗೆ ಬಳಸಿಕೊಳ್ಳಲಾಗುತ್ತಿದೆ.

ರಾಜ್ಯಗಳ ಹಣಕಾಸು ಅವಕಾಶಗಳು ಮತ್ತಷ್ಟು ಮೊಟಕು

ಮೋದಿ ಸರಕಾರಕ್ಕೆ 15ನೇ ಹಣಕಾಸು ಆಯೋಗ ಈ ಪ್ರಕ್ರಿಯೆಯನ್ನು ಇನ್ನಷ್ಟು ಕಠಿಣಗೊಳಿಸಿ, ರಾಜ್ಯಗಳ ಹಣಕಾಸು ಅವಕಾಶಗಳನ್ನು ಮತ್ತಷ್ಟು ಮೊಟಕುಗೊಳಿಸುವ ಒಂದು ಸಾಧನವಾಗಿರುವಂತೆ ಕಾಣುತ್ತದೆ.

ಪುಟ 10 ನೋಡಿ

'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎಂಬೊಂದು ಮಹಾಬೊಗಳೆ



ಪುಟ 9 ರಿಂದ

ಆದರೆ ಆ ಕೇಸುಗಳಲ್ಲಿ ಪ್ರಗತಿ ಕಂಡಿಲ್ಲ. ಕನಿಷ್ಠ ಇಬ್ಬರು ಈ ಹೇಳಿಕೆಗಳಿಂದ 'ಪ್ರಮೋಶನ್' ಪಡೆದಿದ್ದಾರೆ, ಅವರಲ್ಲಿ ಒಬ್ಬರು ಉತ್ತರಪ್ರದೇಶದ ಮುಖ್ಯಮಂತ್ರಿಗಳಾದರು, ಇನ್ನೊಬ್ಬರು ಕರ್ನಾಟಕದವರು ಕೇಂದ್ರ ಮಂತ್ರಿಗಳಾದರು, ಮತ್ತು ತಮ್ಮ ಚಾಳಿಯನ್ನು ಮುಂದುವರೆಸಿದ್ದಾರೆ.

* ಈ ದ್ವೇಷ ಹೇಳಿಕೆಗಳ ಪ್ರಮುಖ ವಿಷಯಗಳು 'ಗೋರಕ್ಷಣೆ' ಮತ್ತು ಅಲ್ಪಸಂಖ್ಯಾತರ ದೂಷಣೆ

ಕೋಮುವಾದಿ ಹಿಂಸಾಚಾರ:

* ಅಧಿಕೃತ ಮಾಹಿತಿಗಳು 2017ರ ವರೆಗೆ ಮಾತ್ರ ಲಭ್ಯ ಇವೆ. ಆ ಮೂರು ವರ್ಷಗಳಲ್ಲಿ 3000 ಪ್ರಕರಣಗಳು ದಾಖಲಾಗಿದ್ದು, ಸುಮಾರು 400 ಮಂದಿ ಬಲಿಯಾಗಿದ್ದಾರೆ, 9000 ದಷ್ಟು ಮಂದಿ ಗಾಯಗೊಂಡಿದ್ದಾರೆ.
* ಕೋಮುಗಲಭೆಗಳನ್ನು ಪ್ರಚೋದಿಸಿದ ಪ್ರಕರಣಗಳ ಸಂಖ್ಯೆ 2014ರಲ್ಲಿ 366 ಇತ್ತು, 2017ರಲ್ಲಿ ಅದು 475ಕ್ಕೇರಿತು, ಅಂದರೆ ವರ್ಷ-ವರ್ಷ ಏರುತ್ತ ಬರುತ್ತಿದೆ, ಮೂರು ವರ್ಷಗಳಲ್ಲಿ 41% ಏರಿಕೆ!
* 2018ರ ಮೊದಲ 4 ತಿಂಗಳಲ್ಲೇ ಬಿಹಾರದ 13 ಜಿಲ್ಲೆಗಳು, ರಾಜಸ್ತಾನದ 3 ಜಿಲ್ಲೆಗಳು ಮತ್ತು ಪಶ್ಚಿಮ ಬಂಗಾಲದ 3 ಜಿಲ್ಲೆಗಳು ಹತ್ತಿ ಉರಿದವು- ಅದಕ್ಕೆ ಮೂಲ ಕಾರಣ ನೇರವಾಗಿ ಸಂಘಪರಿವಾರದ ಪ್ರಚೋದನೆ, ಉದಾ: ರಾಮನವಮಿ ಸಂದರ್ಭದಲ್ಲಿ ಸಶಸ್ತ್ರ ಮೆರವಣಿಗೆಗಳು!

ಗೋವಿನ ಹೆಸರಲ್ಲಿ ಹತ್ಯೆ:

ಗೋಹತ್ಯೆಯ, ಗೋಮಾಂಸ ಭಕ್ಷಣೆಯ ಸುಳ್ಳು ಸುದ್ದಿಗಳನ್ನು ಹರಡಿಸಿ ಗಲಭೆಗಳನ್ನು ಸೃಷ್ಟಿಸುವುದು ಮೋದಿ ಆಳ್ವಿಕೆಯ ವಿಶೇಷ ಲಕ್ಷಣ. ಗೋರಕ್ಷಣೆಯ ಹೆಸರಲ್ಲಿ ಮತ್ತು ಗೋಹತ್ಯೆಯನ್ನು ವಿರೋಧಿಸುವ ಹೆಸರಲ್ಲಿ ಜನಜಂಗುಳಿ ಹಲ್ಲೆ ನಡೆಸಿ ಕೊಚ್ಚಿ ಹಾಕುವ ಪ್ರಯತ್ನದ 78 ಪ್ರಕರಣಗಳು ದಾಖಲಾಗಿವೆ. ಇವು ಬಹುಮಟ್ಟಿಗೆ ಸಂಘ ಪರಿವಾರದ ಸಂಘಟನೆಗಳ ನೇತೃತ್ವದಲ್ಲಿ ನಡೆದಿವೆ.

* ಇದರಲ್ಲಿ 29 ಜೀವಗಳು ಹೋಗಿವೆ, 273 ಮಂದಿ ಗಾಯಗೊಂಡಿದ್ದಾರೆ, ಅವರಲ್ಲಿ 148 ಗಂಭೀರವಾಗಿ ಗಾಯಗೊಂಡಿದ್ದಾರೆ.
* ಬಲಿಯಾದವರಲ್ಲಿ 70 ಶೇಕಡಾದಷ್ಟು ಮಂದಿ ಮುಸ್ಲಿಮರು, ಉಳಿದವರಲ್ಲಿ ಹೆಚ್ಚಿನವರು ದಲಿತರು.

ಕೋಮುವಾದಿ ಅಸ್ತ್ರವಾಗಿ ಮಹಿಳೆಯರ ಮೇಲೆ ಅತ್ಯಾಚಾರ:

* 16 ವರ್ಷಗಳ ಹಿಂದೆ ಗುಜರಾತಿನ ಹಿಂಸಾಚಾರದಲ್ಲಿ ಕಂಡುಬಂದ ಮಹಿಳೆಯರ ಮಾನಭಂಗ ಮತ್ತು ಇತರ ಲೈಂಗಿಕ ಕಿರುಕುಳಗಳ ಕೋಮುವಾದಿ ಪುನರಾವರ್ತನೆಯ ಲಕ್ಷಣ ಈ ವರ್ಷದ ಆರಂಭದಲ್ಲಿ ಜಮ್ಮುವಿನ ಬಳಿ 8 ವರ್ಷದ ಬಾಲಕಿಯೊಬ್ಬಳ ಭೀಕರ ಹತ್ಯೆಯಲ್ಲಿ ಕಾಣ ಬಂದಿದೆ. ಸಂಘಪರಿವಾರದ ಮಂದಿ ಬಹಿರಂಗವಾಗಿಯೇ ಅತ್ಯಾಚಾರಿಗಳ ಪರ ವಹಿಸಿದ್ದಾರೆ.

ಕ್ರೈಸ್ತರ ಮೇಲೂ ಹಲ್ಲೆಗಳು

* ದೇಶದ ಇನ್ನೊಂದು ಅಲ್ಪಸಂಖ್ಯಾತ ಸಮುದಾಯವಾದ ಕ್ರೈಸ್ತ ಧರ್ಮೀಯರ ಮೇಲೂ ಕಳೆದ ನಾಲ್ಕು ವರ್ಷಗಳಲ್ಲಿ ಸುಮಾರು 700 ಹಲ್ಲೆಗಳು ಚರ್ಚುಗಳ ಮೇಲೆ, ಪಾದ್ರಿಗಳ ಮೇಲೆ, ಕ್ರಿಸ್‌ಮಸ್ ಮತ್ತು ಈಸ್ಟರ್ ಆಚರಣೆಗಳ ಸಂದರ್ಭದಲ್ಲಿ ನಡೆದಿವೆ.

ವಿಚಾರವಾದಿಗಳ ಕೊಲೆಗಳು:

ವೈಚಾರಿಕ ಮತ್ತು ಪ್ರಗತಿಪರ ದನಿಗಳನ್ನು ಅಡಗಿಸುವ ಪ್ರಯತ್ನ ಈ ನಾಲ್ಕು ವರ್ಷಗಳ ಮತ್ತೊಂದು ಕರಾಳ ದಾಖಲೆ.

ಬಜೆಟ್ ನೀಡಿಕೆಗಳಲ್ಲೂ ಪಕ್ಷಪಾತ:

* ದೇಶದ ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರ ಪ್ರಮಾಣ 21%, ಆದರೆ ಬಜೆಟ್ ನೀಡಿಕೆಯಲ್ಲಿ ಅಲ್ಪಸಂಖ್ಯಾತ ವ್ಯವಹಾರಗಳ ಇಲಾಖೆಗೆ ಬಜೆಟ್ ಖರ್ಚು ಒಟ್ಟು ಖರ್ಚಿನ 0.19%.
* ಈ ಅಲ್ಪ ನೀಡಿಕೆಯಲ್ಲೂ ನಿಜವಾಗಿ ಮಾಡಿದ ಖರ್ಚಿನ ಪ್ರಮಾಣ ಕೂಡ ಇಳಿಯುತ್ತ ಬಂದಿದೆ. ಒಂದೇ ವರ್ಷದಲ್ಲಿ 97% ದಿಂದ 74%ಕ್ಕೆ ಇಳಿದಿದೆ.
* ಸಾರ್ವಜನಿಕ ವಲಯದಿಂದ ಸಾಲನೀಡಿಕೆಗಳಲಿ 16% ಹೆಚ್ಚಳವಾಗಿದ್ದರೂ, ಇದರಲ್ಲಿ ಅಲ್ಪಸಂಖ್ಯಾತರಲ್ಲಿ 72%ದಷ್ಟಿರುವ ಮುಸ್ಲಿಮ್ ಸಮುದಾಯಕ್ಕೆ ಸಿಕ್ಕಿರುವುದು 45% ಮಾತ್ರ.

ಇಷ್ಟೊಂದು ಅಲ್ಪಸಂಖ್ಯಾತ-ವಿರೋಧಿ ಮತ್ತು ಪಕ್ಷಪಾತಿ ಸರಕಾರವನ್ನು ಈ ದೇಶ ಹಿಂದೆಂದೂ ಕಂಡಿರಲಿಲ್ಲ. ಅದನ್ನು ಮರೆಮಾಚಲೆಂದೇ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಹುಸಿ ಘೋಷಣೆ ಪೋಣಿಸಿದಂತಿದೆ.

ಸಂವಿಧಾನಿಕ ಆಳ್ವಿಕೆಗೆ ತಿಲಾಂಜಲಿ.....

ಪುಟ 9 ರಿಂದ

ಮುಂದೂಡಿಕೆ.

* ರಾಜ್ಯಸಭೆಯ ಅಧ್ಯಕ್ಷರು ತಮ್ಮ ಅಧಿಕಾರವನ್ನು ಮೀರಿ ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರ ವಿರುದ್ಧ ಮಹಾಭಿಯೋಗದ ಠರಾವನ್ನು ತಳ್ಳಿ ಹಾಕಿದರು.
* ಪ್ರಮುಖ ವಿಷಯಗಳ ಮೇಲೆ ಸಂಸತ್ತಿನಲ್ಲಿ, ಅದರಲ್ಲೂ ರಾಜ್ಯಸಭೆಯಲ್ಲಿ ಚರ್ಚೆಯನ್ನು ತಪ್ಪಿಸಲು ಸುಗ್ರೀವಾಜ್ಞೆಗಳ, ಹಣ ಮಸೂದೆಗಳ ಅಪ್ರಾಮಾಣಿಕ ಅಹಂಕಾರದ ದಾರಿಯನ್ನು ಅನುಸರಿಸಲಾಗುತ್ತಿದೆ.

ರಾಜ್ಯಪಾಲ ಹುದ್ದೆಯ ದುರ್ಬಳಕೆ

ಸುಮಾರಾಗಿ ಎಲ್ಲ ರಾಜ್ಯಪಾಲರ ಹುದ್ದೆಗಳಿಗೆ ಆರೆಸ್ಸೆಸ್ ಮಂದಿಗಳನ್ನು ಅಥವ ಅಂತಹ ಒಲವಿರುವವರನ್ನೇ ನೇಮಿಸಿ ಅವರನ್ನು ಪ್ರಜಾಪ್ರಭುತ್ವವನ್ನು ತುಳಿಯುವ ಸಾಧನಗಳಾಗಿ ಬಳಸಿಕೊಳ್ಳಲಾಗುತ್ತಿದೆ.

* ಜನಾದೇಶಗಳನ್ನು ಹುಸಿಗೊಳಿಸಿ ರಾಜ್ಯಗಳಲ್ಲಿ ಅಧಿಕಾರವನ್ನು ಕಸಿದುಕೊಳ್ಳಲು ಈ ರಾಜ್ಯಪಾಲರುಗಳು ನೆರವಾಗುತ್ತಿದ್ದಾರೆ. ಕರ್ನಾಟಕದ ರಾಜ್ಯಪಾಲರ ವರ್ತನೆ, ಕುದುರೆ ವ್ಯಾಪಾರಕ್ಕೆ ಅವಕಾಶ, ನಂತರ ಮುಖಭಂಗ ಇದಕ್ಕೆ ಇತ್ತೀಚಿನ ಉದಾಹರಣೆ.

ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಭಂಗ

* ನ್ಯಾಯಾಂಗದಲ್ಲಿಯೂ ಜೀಹುಜೂರಿಕೆ ತರುವ ಪ್ರಯತ್ನದಿಂದಾಗಿ, ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ನಾಲ್ವರು ಸುಪ್ರಿಂ ಕೋರ್ಟ್ ನ್ಯಾಯಾಧೀಶರು ಒಂದು ಪತ್ರಿಕಾ ಸಮ್ಮೇಳನ ನಡೆಸಿ ನ್ಯಾಯಾಂಗದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಬೇಕೆಂದು ಜನಗಳಿಗೆ ಮನವಿ ಮಾಡುವಂತಹ ಸ್ಥಿತಿ ಸೃಷ್ಟಿಯಾಯಿತು.
* ಸುಪ್ರಿಂ ಕೋರ್ಟಿನ ಕೊಲೆಜಿಯಂನ ಶಿಫಾರಸನ್ನು ಧಿಕ್ಕರಿಸಿ ನ್ಯಾಯಾಧೀಶರ ನೇಮಕದಲ್ಲಿ ಹಸ್ತಕ್ಷೇಪ ನಡೆಸುವ ಪ್ರಯತ್ನ ನಡೆಯುತ್ತಿದೆ.

ಸಂವಿಧಾನಿಕ ಸಂಸ್ಥೆಗಳಲ್ಲೂ ಹಸ್ತಕ್ಷೇಪ

ಮೇಲೆ ಹೇಳಿದಂತೆ ರಿಝರ್ವ್ ಬ್ಯಾಂಕ್, ಚುನಾವಣಾ ಆಯೋಗ, ಕೇಂದ್ರೀಯ ವಿಚಕ್ಷಣಾ ಆಯೋಗ ಮತ್ತಿತರ ಸಂವಿಧಾನಿಕ ಸಂಸ್ಥೆಗಳ ಸ್ವಾಯತ್ತತೆಯನ್ನು ಉಲ್ಲಂಘಿಸಿ ಸತತವಾಗಿ ಸರಕಾರೀ ಹಸ್ತಕ್ಷೇಪ ನಡೆಯುತ್ತಿದೆ.

* ನೋಟುರದ್ಧತಿಯಂತಹ ಬೃಹತ್ ಕಾರ್ಯಾಚರಣೆಗೆ ಸಿದ್ಧವಾಗಲು ರಿಝರ್ವ್ ಬ್ಯಾಂಕಿಗೆ ಕೇವಲ 24 ಗಂಟೆಗಳನ್ನು ಕೊಟ್ಟು ಅದರ ಪ್ರತಿಷ್ಠೆಗೆ ಕಳಂಕ ಬರುವಂತಾಗಿದೆ.
* ಗುಜರಾತ್ ವಿಧಾನ ಸಭಾ ಚುನಾವಣೆಗಳ ದಿನಾಂಕವನ್ನು ಪ್ರಕಟಿಸುವಲ್ಲಿ ಪ್ರಧಾನ ಮಂತ್ರಿಗಳ ನಿರೀಕ್ಷೆಯಂತೆ ನಡೆದ ಚುನಾವಣ ಆಯೋಗದ ವರ್ತನೆ

ಉನ್ನತ ಶೈಕ್ಷಣಿಕ ಸಂಸ್ಥೆಗಳು ಆರೆಸ್ಸೆಸ್ ವಶಕ್ಕೆ

* ದೇಶದ ಪ್ರತಿಯೊಂದು ಪ್ರತಿಷ್ಠಿತ ವಿಶ್ವವಿದ್ಯಾಲಯ, ಫಿಲ್ಮ್ ಮತ್ತು ಟೆಲಿವಿಶನ್ ಇನ್‌ಸ್ಟಿಟ್ಯೂಟ್, ಇತಿಹಾಸ ಸಂಶೋಧನಾ ಮಂಡಳಿ, ಸಮಾಜ ವಿಜ್ಞಾನಗಳ ಸಂಶೋಧನಾ ಸಂಸ್ಥೆ ಮುಂತಾದ ಬಹಳಷ್ಟು ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳು ವನ್ನು ನಡೆಸುವ ಯೋಗ್ಯತೆಯೇ ಇಲ್ಲದವರ ವಶಕ್ಕೆ.
* ಇಂತಹ ನೇಮಕಗಳಿಂದಾಗಿ ಈ ಸಂಸ್ಥೆಗಳ ಆಂತರಿಕ ಪ್ರಜಾಪ್ರಭುತ್ವಕ್ಕೂ ವಿಘ್ನ. ಇದಕ್ಕೆ ಪ್ರತಿರೋಧವಾಗಿ ದಿಲ್ಲಿ ವಿವಿ, ಅಲಿಘಡ್ ವಿವಿ, ಹೈದರಾಬಾದ್ ಕೇಂದ್ರೀಯ ವಿವಿ, ಅಲಹಾಬಾದ್ ವಿವಿ ಮತ್ತು ಎಫ್ಟಿಐಐನಲ್ಲಿ ವಿದ್ಯಾರ್ಥಿಗಳ ಪ್ರತಿರೋಧವನ್ನು ದಮನ ಮಾಡುವ ಪ್ರಯತ್ನ.

ಒಕ್ಕೂಟ ತತ್ವದ ಮೇಲೆ ಪ್ರಹಾರ.......

ಪುಟ 9 ರಿಂದ

ರಾಜ್ಯಗಳಿಗೆ ರೆವಿನ್ಯೂ ಕೊರತೆ ಅನುದಾನ ಎಂಬುದನ್ನು ರದ್ದು ಮಾಡಬೇಕು ಎಂಬ ವಿಚಾರವನ್ನು ಹಾಗೂ "ಜನಮರುಳು ಕ್ರಮಗಳ ಹತೋಟಿ" ಬಗ್ಗೆ ಪರಿಶೀಲಿಸಬೇಕು ಎಂದು ಮೋದಿ ಸರಕಾರ 15ನೇ ಹಣಕಾಸು ಆಯೋಗಕ್ಕೆ ವಿಧಿಸಿದೆ. ಇವು ಚುನಾಯಿತ ರಾಜ್ಯ ಸರಕಾರಗಳು ತಾವು ಜನತೆಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸಲು ಸಾಧ್ಯವಾಗದಂತೆ ಮಾಡುವ ಕ್ರಮಗಳು. ಇವು ರಾಜ್ಯಗಳ ಮೇಲೆ ಕೇಂದ್ರದ ಧೋರಣೆಗಳ ಹೇರಿಕೆಗೆ ಅವಕಾಶ ಮಾಡಿಕೊಳ್ಳುವ ಮತ್ತು ಕಲ್ಯಾಣ ಪೆನ್ಶನ್‌ಗಳಿಂದ ಹಿಡಿದು ಆಹಾರ ಸಬ್ಸಿಡಿಗಳನ್ನು ಒದಗಿಸುವ ರಾಜ್ಯ ಸರಕಾರಗಳ ಕ್ರಮಗಳನ್ನು 'ಜನಮರುಳು' ಕ್ರಮಗಳೆಂದು ಪರಿಗಣಿಸಿ ಅವನ್ನು ಮೊಟಕು ಮಾಡುವ ವರೆಗೂ ಹೋಗಬಹುದು.

ಸಹಕಾರಿ ಒಕ್ಕೂಟತತ್ವ – ಮತ್ತೊಂದು ಬೊಗಳೆ

ಪ್ರಧಾನಿಗಳು ಒಕ್ಕೂಟ ತತ್ವಕ್ಕೆ ತನ್ನ ಕೊಡುಗೆ ಎಂಬಂತೆ ಸಹಕಾರಿ ಒಕ್ಕೂಟ ತತ್ವ ಎಂಬ ಬಗ್ಗೆ ಮಾತಾಡಲಾರಂಭಿಸಿದರು. 'ಸಹಕಾರಿ ಒಕ್ಕೂಟತತ್ವ' ಎಂಬುದರಲ್ಲಿ ಒಂದು ಒಮ್ಮತದ ನಿಲುವು ರೂಪಿಸುವುದಕ್ಕೆ, ಜನಗಳಿಗೆ ಹೆಚ್ಚು ಹತ್ತಿರವಿರುವ ರಾಜ್ಯ ಮತ್ತು ಪಂಚಾಯತು ಮುಂತಾದ ಸ್ಥಳೀಯ ಸರಕಾರಗಳಿಗೆ ಪ್ರಾಥಮಿಕ ಪಾತ್ರ ಇರಬೇಕು.

ಆದರೆ ಇವೆಲ್ಲ 15ನೇ ಹಣಕಾಸು ಆಯೋಗದ ಪರಾಮರ್ಶೆಗೆ ವಿಧಿಸಿರುವ ಅಂಶಗಳಲ್ಲಿ ಆವಿಯಾಗಿ ಹೋಗಿರುವಂತೆ ಕಾಣುತ್ತದೆ. ರಾಜ್ಯಗಳು ಒಕ್ಕೂಟ ರಚನೆಯಲ್ಲಿ ತಮ್ಮ ಸ್ಥಾನಮಾನಗಳನ್ನು ಉಳಿಸಿಕೊಳ್ಳಲು ಹೋರಾಡುವಂತಹ ಪರಿಸ್ಥಿತಿಯನ್ನು ಸೃಷ್ಟಿಸಲಾಗಿದೆ.

ಜಮ್ಮು-ಕಾಶ್ಮೀರದಲ್ಲಿ ಗಂಭೀರ ಪರಿಸ್ಥಿತಿ ಮೋದಿ ಸರಕಾರದ ಅತಿ ದೊಡ್ಡ ವಿಫಲತೆ

ಪ್ರಧಾನಿಗಳ 'ಮಿಂಚಿನ ಪ್ರಹಾರ'ದ ಕ್ರಮದಿಂದಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ನೆಲೆಸುವಂತಾಗುತ್ತದೆ ಎಂಬ ನಿರೀಕ್ಷೆಗಳೆಲ್ಲ ಹುಸಿಯಾಗಿವೆ.



ಜಮ್ಮು ಮತ್ತು ಕಾಶ್ಮೀರದಲ್ಲಿನ ಪರಿಸ್ಥಿತಿ ಇನ್ನಷ್ಟು ಹದಗೆಟ್ಟು ಅದು ಈ ಸರಕಾರದ ಅತಿ ದೊಡ್ಡ ವಿಫಲತೆಗಳ ಪಟ್ಟಿಯನ್ನು ಸೇರಿದೆ.

* ಮೊದಲನೆಯದಾಗಿ, ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370 ನೇ ಕಲಮನ್ನು ರದ್ದು ಮಾಡುವ ತನ್ನ ಅಜೆಂಡಾವನ್ನು ಬಿಜೆಪಿ ಬಿಟ್ಟಿಲ್ಲ, ಮಾತ್ರವಲ್ಲ, ಅದರಿಂದ ಹೊಮ್ಮುವ ಕಲಮು 35ಎ ಗೆ ಕಾನೂನಿನ ಸವಾಲು ಹಾಕುವವರಿಗೆ ಉತ್ತೇಜನ ನೀಡಿರುವುದು ಅದು ಈ ರಾಜ್ಯದ ಅಳಿದುಳಿದ ಸ್ವಾಯತ್ತತೆಯನ್ನು ಕೂಡ ಧ್ವಂಸ ಮಾಡಲು ಸಿದ್ಧವಾಗಿದೆ ಎಂಬುದನ್ನು ಪ್ರದರ್ಶಿಸಿದೆ. ಈ ಮೂಲಕ ಭಾರತದ ಬಗ್ಗೆ ಕಾಶ್ಮೀರಿಗಳಲ್ಲಿ ವಿಶ್ವಾಸವನ್ನು ಮೂಡಿಸುವುದನ್ನು ಇನ್ನಷ್ಟು ಕಷ್ಟಕರಗೊಳಿಸಿದೆ.
* ಎರಡನೆಯದಾಗಿ, ಇದನ್ನು ರಾಜಕೀಯ ಪ್ರಶ್ನೆಯಾಗಿ ನೋಡದೆ, ಕೇವಲ ಭದ್ರತೆಯ ಪ್ರಶ್ನೆಯಾಗಿ ನೋಡುವ ಚಾಳಿಯನ್ನು ಬಿಡದೆ, ದಮನ ಕ್ರಮಗಳಿಗೇ ಹೆಚ್ಚಿನ ಒತ್ತು ನೀಡಿರುವುದು ಭಾರತದ ಬಗ್ಗೆ ಕಾಶ್ಮೀರಿಗಳ ಪರಕೀಯ ಭಾವವನ್ನು ಇನ್ನಷ್ಟು ಗಟ್ಟಿಗೊಳಿಸಿದೆ.
* ಮೂರನೆಯದಾಗಿ, ಜೂನ್ 2010ರಿಂದ ಮೇ 2014ರ ವರೆಗಿನ ಯುಪಿಎ-2 ಸರಕಾರದ ಆಳ್ವಿಕೆಯಲ್ಲಿ ಮತ್ತು ಜೂನ್ 2014ರಿಂದ ಮೇ 2018ರ ಮೋದಿ ಆಳ್ವಿಕೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಹಿಂಸಾಚಾರಗಳಲ್ಲಿ ಸಂಭವಿಸಿರುವ ಸಾವುಗಳ ಈ ಅಂಕಿ-ಅಂಶಗಳನ್ನು ನೋಡಿ:

	ಯುಪಿಎ-2	ಮೋದಿ	%ಹೆಚ್ಚಳ
ನಾಗರಿಕರು	98	148	51
ಭದ್ರತಾ ಪಡೆಗಳವರು	154	279	81
ಭಯೋತ್ಪಾದಕರು	492	642	30
ಒಟ್ಟು	744	1069	44

ಭಯೋತ್ಪಾದಕರಿಗಿಂತ ನಾಗರಿಕರು ಮತ್ತು ನಮ್ಮ ಭದ್ರತಾ ಸಿಬ್ಬಂದಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗಿದ್ದಾರೆ.

ಅಂದರೆ, ಮೋದಿ ಸರಕಾರ ಭಯೋತ್ಪಾದನೆಯನ್ನು ತಡೆಯುವಲ್ಲಿ ವಿಫಲವಾಗಿದೆ ಮಾತ್ರವಲ್ಲ, ಅದರ ಧೋರಣೆಗಳಿಂದಾಗಿ ಹಿಂಸಾಚಾರ ಹೆಚ್ಚುವಂತಾಗಿದೆ.

* ನಾಲ್ಕನೆಯದಾಗಿ, ಜಮ್ಮು-ಕಾಶ್ಮೀರ ಪ್ರಶ್ನೆಗೆ ರಾಜಕೀಯ ಪರಿಹಾರದ ಪ್ರಯತ್ನದ ಬದಲು, ಈ ಸರಕಾರ ಅದನ್ನು ದೇಶದ ಇತರೆಡೆಗಳಲ್ಲಿ ಸಂಕುಚಿತ ದೇಶಭಕ್ತಿಯನ್ನು ಉದ್ರೇಕಿಸಿ, ಕಾಶ್ಮೀರ ಕಣಿವೆಯಲ್ಲಿ ಕೇಂದ್ರ ಮತ್ತು ರಾಜ್ಯಸರಕಾರದ ದಮನದ ಕ್ರಮಗಳನ್ನು ವಿರೋಧಿಸುವವರಿಗೆಲ್ಲ ರಾಷ್ಟ್ರ-ವಿರೋಧಿಗಳೆಂಬ ಹಣೆ ಪಟ್ಟಿ ಹಚ್ಚಿ ಅದರ ರಾಜಕೀಯ/ಚುನಾವಣಾ ಲಾಭಗಳನ್ನು ಗಿಟ್ಟಿಸಲು ಬಳಸಿಕೊಳ್ಳುತ್ತಿದೆ.

ಇದರ ಜತೆಗೆ ಕಟುವಾದಲ್ಲಿ ಬಾಲಕಿಯ ಮೇಲಿನ ಭೀಕರ ಅತ್ಯಾಚಾರದ ಪ್ರಕರಣದಲ್ಲಿ ಬಿಜೆಪಿಯ ನಿಲುವು ಜಮ್ಮು ಮತ್ತು ಕಾಶ್ಮೀರ ಪ್ರದೇಶಗಳಲ್ಲಿ ಕೋಮು ಧ್ರುವೀಕರಣವನ್ನು ಹೆಚ್ಚಿಸಿದೆ.

ಮೋದಿ ಸರಕಾರದ ಈ ವಿಫಲತೆಯ ದುಷ್ಪರಿಣಾಮಗಳನ್ನು ಎದುರಿಸಬೇಕಾದವರು ಎಂದಿನಂತೆ ಇಲ್ಲಿನ ಜನಸಾಮಾನ್ಯರು, ಸಾಮಾನ್ಯ ದುಡಿಮೆಗಾರರು. ನಿಲ್ಲದ ಹಿಂಸಾಚಾರ ಮತ್ತು ಅವರ ಜೀವನಾಧಾರದ ಪ್ರಶ್ನೆಗಳ ಬಗ್ಗೆ ಪಿಡಿಪಿ-ಬಿಜೆಪಿ ಸರಕಾರದ ನಿಷ್ಕ್ರಿಯತೆ ಅವರ ಬದುಕುಗಳನ್ನು ಮೂರಾಬಟ್ಟೆ ಮಾಡಿದೆ.

ಕಣಿವೆಯ ಮುಖ್ಯ ಜೀವನಾಧಾರವಾದ ಪ್ರವಾಸೋದ್ಯಮ ಮತ್ತು ಕೈಕಸಬುದಾರಿಕೆ ಮುಂದುವರೆಯುತ್ತಿರುವ ಹಿಂಸಾಚಾರದಿಂದಾಗಿ ಚೇತರಿಸಿಕೊಳ್ಳಲಾರದಾಗಿದೆ. ಜತೆಗೆ ಮೂಲರಚನೆಗಳಿಗೆ ಸಾರ್ವಜನಿಕ ಹೂಡಿಕೆಯ ಆಶ್ವಾಸನೆ ಜಾರಿಗೆ ಬಂದಿಲ್ಲ. ಎರಡು ವಿದ್ಯುತ್ ಯೋಜನೆಗಳ ಶಿಫಾರಸನ್ನು ಜಾರಿಗೆ ತಂದಿಲ್ಲ.

ವಿದ್ಯಾರ್ಥಿಗಳ ಕೈಗಳಲ್ಲಿ ಕಲ್ಲುಗಳ ಬದಲು ಲ್ಯಾಪ್‌ಟಾಪ್, ಯುವಜನರ ಕೈಗಳಲ್ಲಿ ಗನ್ನುಗಳ ಬದಲು ಪೆನ್ ಬರಲಿ ಎಂಬ ಪ್ರಧಾನಿಗಳ ಪ್ರಾಸಬದ್ಧ ಮಾತುಗಳು ಪ್ರಾಸಗಳಲ್ಲೇ ಪರ್ಯವಸಾನ ಗೊಂಡಿವೆ. ಮತ್ತೆ-ಮತ್ತೆ ತರಗತಿಗಳು ನಡೆಯದಂತಾಗಿರುವುದು ಇಡೀ ಶಿಕ್ಷಣ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದೆ. 80 ಲಕ್ಷ ವಿದ್ಯಾವಂತರು ಉದ್ಯೋಗಗಳಿಗಾಗಿ ಪರದಾಡುವಂತಾಗಿದೆ.

ರಾಜ್ಯದ ಜನಗಳ ಬೆನ್ನೆಲುಬಾದ ಕೃಷಿ ಮತ್ತು ತೋಟಗಾರಿಕೆ ತೀವ್ರ ಬಿಕ್ಕಟ್ಟಿನಲ್ಲಿದೆ.

ಕ್ಯೂಬಾಕ್ಕೆ ಹೋಗಿ ಬಂದ ಕಾಫಿ ಬೆಳೆಗಾರ

ನಿರೂಪಣೆ : ಆರ್.ಪಿ.ಎ. ಮೂರ್ತಿ

ನೈಸರ್ಗಿಕ ಬೇಸಾಯದ ಕುರಿತು ಅನುಭವದ ಮಾತು

ಅರೇಹಳ್ಳಿ ರಾಜೇಗೌಡ ಅವರು ಬೇಲೂರು ತಾಲೂಕು ರೈತ ಸಂಘದ ಕಾರ್ಯದರ್ಶಿಯಾಗಿ, ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ದುಡಿದವರು. ಅರೇಹಳ್ಳಿ ಕಾಫಿ ಬೆಳೆಗಾರರ ಸಂಘದ ಸ್ಥಾಪಕ ಅಧ್ಯಕ್ಷರಾಗಿ, ಕಾಫಿ ಮಾರುಕಟ್ಟೆ ವ್ಯವಸ್ಥೆಗಾಗಿಯೂ ಕೆಲಸ ಮಾಡಿದವರು. ಅವರು, ಈ ವರ್ಷ ಮೇ 20 ರಿಂದ 31 ರ ತನಕ ಕ್ಯೂಬಾ ದೇಶದಲ್ಲಿ ಪರಿಸರಕ್ಕೆ ಪೂರಕವಾದ ಕೃಷಿ ಕುರಿತು ನಡೆದ ಕ್ಷೇತ್ರ ಸಮೀಕ್ಷೆ ಹಾಗೂ ಸಂವಾದದಲ್ಲಿ ಪಾಲ್ಗೊಂಡು ವಾಪಸ್ಸಾಗಿದ್ದಾರೆ.

ಫಿಡೆಲ್ ಕ್ಯಾಸ್ಟ್ರೋ ನೇತೃತ್ವದಲ್ಲಿ ಸಮಾಜವಾದಿ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತಂದ ಕ್ಯೂಬಾ ಇಂದು ರಾಸಾಯನಿಕ ರಹಿತ ಕೃಷಿ ಪದ್ಧತಿ ಪ್ರಯೋಗದಲ್ಲಿ ವಿಶ್ವದಲ್ಲೇ ಮುಂಚೂಣಿಯಲ್ಲಿದೆ. ಕ್ಯೂಬಾ ಕುರಿತು ಅರೇಹಳ್ಳಿ ರಾಜೇಗೌಡರ ಮಾತುಗಳನ್ನು ಕೇಳಿ.

"ಈ ಸಮಾವೇಶದಲ್ಲಿ ಒಟ್ಟು 40 ದೇಶಗಳ ರೈತರ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಈ ಸಮಾವೇಶದ ಮುಖ್ಯ ಉದೇಶವೇ ಪರಿಸರಕ್ಕೆ ಪೂರಕವಾದ ಕೃಷಿ ಪದ್ಧತಿಯ ಕುರಿತು ಅಧ್ಯಯನ ಮತ್ತು ವಿಚಾರ ವಿನಿಮಯ.. ಮೊದಲ ಮೂರು ದಿನ ಕ್ಷೇತ್ರ ಅಧ್ಯಯನಕ್ಕೆ ಮೀಸಲಾಗಿತ್ತು. ಮೊದಲ ದಿನ ಸಣ್ಣ ಬೆಳೆಗಾರರ ಭೇಟಿ, ಎರಡನೆಯ ದಿನ ರೈತರ ಸಹಕಾರಿ ಸಂಸ್ಥೆಗಳಿಗೆ ಹಾಗೂ ಮೂರನೆಯ ದಿನ ಸರ್ಕಾರಿ ತರಬೇತಿ ಸಂಸ್ಥೆಗಳಿಗೆ ಭೇಟಿ ನಿಗದಿ ಆಗಿತ್ತು.

ಅಲ್ಲಿ ಅನಾವ್ (ಎಂಎಂಕ) ಎಂಬ ಸಂಸ್ಥೆ ಇದೆ. ಅದು ಸಣ್ಣ ರೈತರ ಒಕ್ಕೂಟ ಅದು 3 ಲಕ್ಷ ರೈತರ ಸದಸ್ಯತ್ವ ಹೊಂದಿದೆ.

ಅಲ್ಲಿನ ಜಮೀನಿನ ಮೇಲೆ ಸರ್ಕಾರ ಸಂಪೂರ್ಣ ಒಡೆತನ ಹೊಂದಿದೆ. ಒಬ್ಬ ರೈತನಿಗೆ ಸರ್ಕಾರ ಐದು ಹೆಕ್ಟೇರ್ ಅಂದರೆ ಹನ್ನೆರಡೂವರೆ ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡುತ್ತದೆ. ಜಮೀನಿನಲ್ಲಿ ಬೆಳೆದ ಫಸಲಿನ ಒಡೆತನ ರೈತನದ್ದು. 2 ವರ್ಷಗಳ ಕಾಲ ಜಮೀನಿನಲ್ಲಿ ಬೆಳೆ ಬೆಳೆಯದೆ ಪಾಳು ಬಿಟ್ಟರೆ ಸರ್ಕಾರ, ಜಮೀನನ್ನು ತನ್ನ ವಶಕ್ಕೆ ಪಡೆದು ಬೇರೆ ರೈತನಿಗೆ ನೀಡುತ್ತದೆ.

ಮೂವತ್ತು ವರ್ಷಗಳ ನಂತರ ಹೆಚ್ಚುವರಿಯಾಗಿ 5 ಎಕರೆಯನ್ನು ಗುತ್ತಿಗೆಗೆ ಪಡೆಯಬಹುದು. ಒಂದು ಕುಟುಂಬಕ್ಕೆ ಐವತ್ತು ಹೆಕ್ಟೇರ್ ಮಿತಿ ಇದೆ. ರೈತರು ತಮಗೆ ನೀಡಿದ ಜಮೀನನ್ನು ಇತರರಿಗೆ ಮಾರಾಟ ಮಾಡುವ ಹಕ್ಕು ಹೊಂದಿರುವುದಿಲ್ಲ.

ಪ್ರತಿಯೊಬ್ಬ ರೈತನೂ ಸಹಕಾರಿ ಸಂಘದ ಸದಸ್ಯನಾಗಿರುತ್ತಾನೆ. ಈ ರೀತಿ ರೈತರ 50 ಸಾವಿರ ಸಹಕಾರಿ ಸಂಘಗಳಿವೆ. ಈ ಸಂಘಗಳು ಸೇರಿ ನಮ್ಮ ರಾಜ್ಯದ ಕೆಎಂಎಫ್ ಮಾದರಿಯಲ್ಲಿ ಮಹಾ ಮಂಡಲ ಆಗಿರುತ್ತದೆ. ಧಾನ್ಯಗಳ ಹಾಗು ಹಣ್ಣು ತರಕಾರಿಗಳ ದಾಸ್ತಾನಿಗೆ ಮಹಾ ಮಂಡಲವು ಉಗ್ರಾಣಗಳು ಹಾಗು ಶೀತಲ ಗೃಹಗಳನ್ನು ನಿರ್ಮಿಸಿದೆ. ಆಯಾ ಪ್ರದೇಶದ ಹವಾಮಾನ, ನೀರಾವರಿ ಸೌಲಭ್ಯ, ಮತ್ತಿತರ ಅಂಶಗಳನ್ನು ನೋಡಿ, ರೈತರು ಯಾವ ಯಾವ ಬೆಳೆಗಳನ್ನು ಬೆಳೆಯಬೇಕೆಂದು ಸರ್ಕಾರ ನಿರ್ಧಾರ ಮಾಡುತ್ತದೆ. ಪ್ರತಿ 300 ಸಹಕಾರ ಸಂಘಗಳ ವ್ಯಾಪ್ತಿಗೆ ಒಂದು ಬೆಳೆ ನೀತಿ ಇರುತ್ತದೆ. ಬೆಳೆ ಆರಂಭಕ್ಕೆ ಮೊದಲು ಬೆಲೆ ನಿಗದಿ ಆಗಿರುತ್ತದೆ. ರೈತರು ಬೆಳೆದ ಬೆಳೆಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ ಸರ್ಕಾರ, ನಿಗದಿತ ಬೆಲೆಗೆ ಖರೀದಿ ಮಾಡುತ್ತದೆ. ಹವಮಾನ ವೈಪರೀತ್ಯದಿಂದ ನಷ್ಟ ಆದರೆ ಈ ಬೆಳೆ ಹಾನಿಯ ಬಗ್ಗೆ ಸ್ಥಳೀಯ ಸಹಕಾರಿ ಸಂಸ್ಥೆಯಿಂದ ವರದಿ ಪಡೆದು ನಷ್ಟವನ್ನು ಸರ್ಕಾರ ಭರಿಸುತ್ತದೆ. ಬೆಳೆ ಬೆಳೆಯಲು ಸಾಲ ಅಗತ್ಯವಿದ್ದರೆ ಸರ್ಕಾರ ಬಡ್ಡಿ ರಹಿತ ಸಾಲವನ್ನು ತಪ್ಪದೇ ಮರುಪಾವತಿ ಮಾಡಬೇಕು.

ಬೇಸಾಯಕ್ಕೆ ಅಗತ್ಯವಾದ ಟ್ರ್ಯಾಕ್ಟರ್, ಟಿಲ್ಲರ್ ಮತ್ತಿತರ ಸಾಧನಗಳನ್ನು ರೈತರು ಸಹಕಾರಿ ಸಂಸ್ಥೆಗಳಿಂದ ಬಾಡಿಗೆಗೆ ಪಡೆಯಬಹುದು. ಕೆಲವು ರೈತರು ಸ್ವಂತ ಟ್ರ್ಯಾಕ್ಟರ್‌ಗಳನ್ನು ಕೂಡ ಹೊಂದಿದ್ದಾರೆ. ಉಳುಮೆಗೆ ಕಬ್ಬಿಣದ ನೇಗಿಲು ಹಾಗು ಎತ್ತುಗಳನ್ನು ಬಳಸುತ್ತಾರೆ. ಸಾಗಾಣಿಕೆಗೆ ಕುದುರೆಗಾಡಿಗಳ ಬಳಕೆ ಹೆಚ್ಚಾಗಿದೆ. ಪ್ರತಿ ರೂತರು ದನಕರುಗಳ ಜೊತೆಗೆ ಕುದುರೆಗಳನ್ನು ಸಾಕುತ್ತಾರೆ.

ಕ್ಯೂಬಾದ ವಿಶೇಷವೆಂದರೆ ಅಲ್ಲಿನ ಶೇಕಡಾ 90 ಕ್ಕಿಂತ ಹೆಚ್ಚು ಸಣ್ಣ ರೈತರು ರಾಸಾಯನಿಕ ಗೊಬ್ಬರಗಳು ಹಾಗು ಔಷಧಗಳನ್ನು ಬಳಸುವುದಿಲ್ಲ. ಒಟ್ಟಾರೆ ಶೇಕಡಾ 50 ಕ್ಕಿಂ ಹೆಚ್ಚು ಪ್ರದೇಶದಲ್ಲಿ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಲಾಗಿದೆ. ಹಂತ ಹಂತವಾಗಿ ಇಡೀ ದೇಶ ಸಾವಯವ ಪದ್ಧತಿ ಅಳವಡಿಸಿಕೊಳ್ಳಬೇಕೆಂಬ ಗುರಿಹೊಂದಲಾಗಿದೆ. ರಾಸಾಯನಿಕಗಳನ್ನು ಬಳಸಿ ಬೆಳೆದ ಬೆಳೆಗಳಿಗೆ ಕಡಿಮೆ ಬೆಲೆ ಹಾಗು ನೈಸರ್ಗಿಕ ಪದ್ಧತಿಯ ಬೆಳೆಗಳಿಗೆ ಹೆಚ್ಚು ಬೆಲೆ ನಿಗದಿ ಆಗಿರುತ್ತದೆ. ಹಿಂದೆ ಕ್ಯೂಬಾ ಸಕ್ಕರೆಯ ಕಣಜ ಎಂದೇ ಪ್ರಸಿದ್ಧಿ ಪಡೆದಿತ್ತು. ಆ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯುತ್ತಿದ್ದರು. ಸಕ್ಕರೆಯನ್ನು ಮಾರಾಟ ಮಾಡಲು ಅಂತರಾಷ್ಟ್ರೀಯ ಮಾರುಕಟ್ಟೆಗಳನ್ನು ಅವಲಂಬಿಸಿಕೊಳ್ಳಬೇಕಾಗಿರುವುದರಿಂದ ಕೆಲ ವರ್ಷಗಳಿಂದ ಈಚೆಗೆ ಕಬ್ಬಿನ ಬೆಳೆ ಪ್ರಮಾಣವನ್ನು ಬಹಳ ಕಡಿಮೆ ಮಾಡಲಾಗಿದೆ. ಹಾಗಾಗಿ ಅನೇಕ ಸಕ್ಕರೆ ಕಾರ್ಖಾನೆಗಳನ್ನು ಮುಚ್ಚಲಾಗಿದೆ. ಆಹಾರ ಬೆಳೆಗಳಿಗೆ ರೈತರು ಹೆಚ್ಚು ಒತ್ತು ನೀಡುತ್ತಾರೆ. ಬತ್ತ, ಗೋಧಿ ಹಾಗು ಜೋಳ ಅಲ್ಲಿನ ಮುಖ್ಯ ಬೆಳೆ. ಕ್ಯೂಬಾ ದೇಶವು ಅಮೇರಿಕಾದ ಫ್ಲೋರಿಡಾ ರಾಜ್ಯಕ್ಕೆ ಹತ್ತಿರದಲ್ಲಿದೆ. ಹವಮಾನ ನಮ್ಮ ಕರಾವಳಿ ಪ್ರದೇಶದಂತಿದೆ. ಮಾವು, ಬಟರ್‌ಫ್ರೂಟ್ ಅವಕಾಡ್), ಅನಾನಸ್, ಸಪೋಟ, ಕಲ್ಲಂಗಡಿ, ಪಪ್ಪಾಯವನ್ನು ಹೆಚ್ಚು ಬೆಳೆಯುತ್ತಾರೆ. ಹಲಸು ಕೂಡ ಇದೆ. ಆದರೆ ಪ್ರಮಾಣ ಕಡಿಮೆ ಎನ್ನಬಹುದು. ಬೆಳಗಿನ ಉಪಾಹಾರ ವೇಳೆ ಪಪ್ಪಾಯವನ್ನು ಹೆಚ್ಚಾಗಿ ಬಳಸುತ್ತಾರೆ.

ಮಹಿಳೆಯರು ಪ್ರತ್ಯೇಕವಾಗಿ ಸಹಕಾರಿ ಸಂಸ್ಥೆಗಳನ್ನು ಹೊಂದಿದ್ದಾರೆ; ಉಳುಮೆಯಿಂದ ಹಿಡಿದು ಟ್ರಾಕ್ಟರ್ ಲಾರಿ ಚಾಲನೆ ತನಕ ಮಹಿಳೆಯರೇ ಮಾಡುತ್ತಾರೆ".

ಕ್ಯೂಬಾ ಕೇರಳಗಳಂತೆ ರೈತ-ಸ್ನೇಹಿ ಪರಿಸರ-ಸ್ನೇಹಿ ಸಮಗ್ರ ಕೃಷಿನೀತಿ ಬೇಕು

ಎಚ್.ಆರ್.ನವೀನ್‌ಕುಮಾರ್

(ಹಾಸನದ ಜನತಾಮಾಧ್ಯಮ ಪತ್ರಿಕೆಯಲ್ಲಿ ರೈತಸಂಘದ ನಾಯಕ ಅರೇಹಳ್ಳಿ ರಾಜೇಗೌಡರ ಕ್ಯೂಬಾ ಪ್ರವಾಸದ ಅನುಭವಗಳ ಕುರಿತು ನಿರೂಪಣೆಗೆ ಬರೆದ ಪ್ರತಿಕ್ರಿಯೆ)

ಜನತಾಮಾಧ್ಯಮ ಪತ್ರಿಕೆಯಲ್ಲಿ ಅರೇಹಳ್ಳಿ ರಾಜೇಗೌಡರ ಕ್ಯೂಬಾ ಪ್ರವಾಸದ ಅನುಭವಗಳ ಕುರಿತು ಆರ್.ಪಿ.ವೆಂಕಟೇಶ್‌ಮೂರ್ತಿಯವರ ನಿರೂಪಣೆ ಉತ್ತಮವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಭಾರತದ ಕೃಷಿ ಕ್ಷೇತ್ರ ಮತ್ತು ಪ್ರತ್ಯೇಕವಾಗಿ ರಾಜ್ಯದಲ್ಲಿನ ರೈತ ಸಮುದಾಯ ಎದುರಿಸುತ್ತಿರುವ ಸವಾಲುಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ರೈತಪರವಾದ ಮತ್ತು ಪರಿಸರಪ್ರಿಯವಾದ ಪರ್ಯಾಯ ಕೃಷಿ ನೀತಿಗಳನ್ನು ನಾವು ಅಳವಡಿಸಿಕೊಳ್ಳಬೇಕಾದ ತುರ್ತು ಅನಿವಾರ್ಯತೆಯಿದೆ. ಈ ನಿಟ್ಟಿನಲ್ಲಿ ನಿರಂತರವಾಗಿ ಒಂದು ವ್ಯಾಪಕ ಚರ್ಚೆಯಿಂದ ಮಾತ್ರ ಸ್ಪಷ್ಟ ಕಣ್ಣೋಟವನ್ನು ರೂಪಿಸಿಕೊಳ್ಳಲು ಸಾಧ್ಯ.

ಭೌಗೋಳಿಕವಾಗಿ ಕರ್ನಾಟಕಕ್ಕಿಂತ ಚಿಕ್ಕದಾಗಿರುವ ಪುಟ್ಟ ರಾಷ್ಟ್ರ ಕ್ಯೂಬಾ. ಅಮೇರಿಕಾದ ನಿರಂತರ ಆರ್ಥಿಕ ದಿಗ್ಬಂಧನಗಳ ನಡುವೆಯೂ ತನ್ನ ದೇಶದಲ್ಲಿ ಕೃಷಿ ಕ್ಷೇತ್ರದಲ್ಲಿ ನಡೆಸಿರುವ ಅದ್ಭುತ ಸಾಧನೆಗಳನ್ನು ಅರ್ಥ ಮಾಡಿಕೊಂಡು ಅವನ್ನು ನಮ್ಮ ಪರಿಸರಕ್ಕೆ ತಕ್ಕಂತೆ ಅಳವಡಿಸಿಕೊಳ್ಳುವ ಕೃಷಿ ನೀತಿಯನ್ನು ರೂಪಿಸಿದರೆ ಹೊಸ ಪ್ರಯೋಗಗಳಿಗೆ ಮುನ್ನುಡಿ ಬರೆಯಬಹುದು.

ಇತ್ತೀಚೆಗೆ ಅಧಿಕಾರಕ್ಕೆ ಬಂದ ಎಲ್ಲಾ ಸರ್ಕಾರಗಳು ರೈತರ ಬಗ್ಗೆ ಮಾತನಾಡುವುದೆಂದರೆ ಅದು ಚುನಾವಣಾ ದೃಷ್ಟಿಕೋನ ಮಾತ್ರ. ಅದು ಸಾಲ ಮನ್ನಾ ವಿಚಾರ ಇರಬಹುದು ಅಥವಾ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನೀಡುವುದು ಇರಬಹುದು.

ಹೌದು, ನಿಜ. ಪರಿಸ್ಥಿತಿ ಅದೇ ರೀತಿಯಲ್ಲಿದೆ. ರೈತರು ಕೃಷಿ ಮೇಲೆ ಹೂಡುವ ಬಂಡವಾಳ 'ಸಹ ವಾಪಸ್ ಬರದಿರುವುದರಿಂದ ಮಾಡಿದ ಸಾಲ ವರ್ಷದಿಂದ ವರ್ಷಕ್ಕೆ ಹೆಚ್ಚಾಗಿ ರೈತರು ಆತ್ಮಹತ್ಯೆಯ ದಾರಿಯನ್ನು ಹಿಡಿಯುತ್ತಿದ್ದಾರೆ. ಇವರನ್ನು ಈ ಸಂಕಷ್ಟದಿಂದ ಹೊರತಂದು ಕೃಷಿ ಕ್ಷೇತ್ರವನ್ನು ಉಳಿಸಬೇಕಾದ ಹೊಣೆಗಾರಿಕೆ ಆಳುವ ಸರ್ಕಾರಗಳ ಮೇಲಿದೆ. ಅದಕ್ಕಾಗಿ ಒಂದು ಬಾರಿ ರೈತರನ್ನು ಎಲ್ಲಾ ರೀತಿಯ ಕೃಷಿ ಸಾಲಗಳಿಂದಲೂ ಋಣಮುಕ್ತನನ್ನಾಗಿಸುವ ಅಗತ್ಯತೆಯಿದೆ.

ಆದರೆ ಕೃಷಿ ಕ್ಷೇತ್ರದ ಇಂದಿನ ಬಿಕ್ಕಟ್ಟನ್ನು ಬಗೆಹರಿಸಲು ಸಾಲಮನ್ನಾ ಒಂದೇ ಶಾಶ್ವತ ಪರಿಹಾರವಂತೂ ಖಂಡಿತಾ ಅಲ್ಲ. ಅದಕ್ಕಾಗಿ ರೈತರು ಸಾಲವನ್ನೇ ಮಾಡದಂತಹ ಒಂದು ವಾತಾವರಣವನ್ನು ನಿರ್ಮಿಸಿದರೆ ಮಾತ್ರ ಅದು ಸಾಧ್ಯ. ಅದಕ್ಕಾಗಿ ಇಂದಿನ ಸಾಂಪ್ರದಾಯಕ ರೀತಿಯ ಕೃಷಿ ಪದ್ಧತಿಗಳಲ್ಲಿನ ಬದಲಾವಣೆ ಅಗತ್ಯವಿದೆ. ಆದರೆ ಅದು ಪರಿಸರ ಪ್ರಿಯ ಮತ್ತು ರೈತಸ್ನೇಹಿಯಾಗಿರಬ 'ೕಕಾಗುತ್ತದೆ.

ಜಾಗತೀಕರಣದ ಪ್ರಭಾವ ಎಲ್ಲಾ ಹಂತಗಳಲ್ಲೂ ಬೇರುಬಿಟ್ಟಿರುವ ಈ ಸಂದರ್ಭದಲ್ಲಿ ಕೃಷಿ ಕ್ಷೇತ್ರದಲ್ಲಿನ ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳು ಮತ್ತು ಮಾರುಕಟ್ಟೆಯನ್ನು ಜಾಗತೀಕರಣ ತನ್ನ ಕಬಂಧಬಾಹುಗಳಲ್ಲಿ ಬಂಧಿಸಿರುವಾಗ ರೈತ ಒಬ್ಬಂಟಿಯಾಗಿ ಹೊಸ ಪ್ರಯೋಗಗಳನ್ನು ನಡೆಸುವ ಮತ್ತು ಅದನ್ನು ಮುಂದುವರಿಸಿಕೊಂಡು ಹೋಗುವ ಸ್ಥಿತಿ ಇಲ್ಲದ್ದರಿಂದ ಪ್ರತಿಯೊಬ್ಬ ರೈತರೂ ಇಂತಹ ಹೊಸ ಪ್ರಯೋಗಗಳಿಗೆ ಮನಸು ಮಾಡುತ್ತಿಲ್ಲ. ಆದ್ದರಿಂದ ಇದು ಒಂದು ಸಾಮೂಹಿಕ ಪ್ರಯತ್ನದ ಭಾಗವಾಗಿ ನಡೆಯಬೇಕಾಗಿದೆ. ಅದಕ್ಕಾಗಿ ಕೃಷಿ ಕ್ಷೇತ್ರದ ಸುಧಾರಣೆಗಳ ಬಗ್ಗೆ ಮಾತನಾಡುವವರೆಲ್ಲ ಒಂದೆಡೆ ಸೇರಿ ಸಾಮೂಹಿಕ ಪ್ರಯತ್ನಗಳನ್ನು ನಡೆಸಬೇಕು. ಇದಕ್ಕೆ ಆಳುವ ಸರ್ಕಾರಗಳು ಪೂರಕವಾಗಿ ರೈತ ಪರವಾದ ಕೃಷಿ ನೀತಿಗಳನ್ನು ಅಧ್ಯಯನ ಮಾಡಿ ಹಲವು ದೇಶಗಳ ಅನುಭವದ ಮೇಲೆ ರಾಜ್ಯವ್ಯಾಪಿಯಾಗಿ ತನ್ನ ನೀತಿಗಳ ರೂಪಿಸಿಬೇಕು. ಆಗ ಮಾತ್ರ ಖಂಡಿತವಾಗಿಯೂ ಕೃಷಿ ಕ್ಷೇತ್ರದಲ್ಲಿ ಗಮನಾರ್ಹವಾದ ಬದಲಾವಣೆಯನ್ನು ತಂದು ಕೃಷಿಯನ್ನು ಲಾಭದಾಯಕ ಕ್ಷೇತ್ರವನ್ನಾಗಿ ಮಾತ್ರವಲ್ಲದೆ ರಾಸಾಯನಿಕ ಮುಕ್ತ ಸಾವಯವ, ಸಹಕಾರಿ ಪದ್ಧತಿಯಲ್ಲಿ ಯಶಸ್ವಿಯಾಗಿ ನಡೆಸಲು ಸಾಧ್ಯವಾಗುತ್ತದೆ.

ಇಂತಹ ಪ್ರಯೋಗಗಳನ್ನು ಸರ್ಕಾರದ ಕಾರ್ಯಕ್ರಮಗಳಾಗಿ ತೆಗೆದುಕೊಂಡಿದ್ದರಿಂದಲೇ ಕ್ಯೂಬಾ ಮತ್ತು ಭೂತಾನ್‌ನಂತಹ ರಾಷ್ಟ್ರಗಳು ಯಶಸ್ಸನ್ನು ಕಾಣಲು ಸಾಧ್ಯವಾಗಿದೆ ಎಂಬುದನ್ನ ನಾವುಗಳು ಎಂದಿಗೂ ಮರೆಯಬಾರದು. ರಾಜ್ಯದ ನೂತನ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ಜಾರಿಗೆ ತರುವ ಮಾತುಗಳನ್ನು ಹಲವು ಬಾರಿ ಉಚ್ಚರಿಸಿದ್ದಾರೆ. ಇಂತಹ ಆಲೋಚನೆಗಳು ಸ್ವಾಗತಾರ್ಹ. ಆದರೆ ಇದು ಕೇವಲ ಮಾತಿನಲ್ಲೇ ಉಳಿಯುತ್ತದೆಯೋ ಅಥವಾ ನೀತಿಯಾಗಿ ಜಾರಿಗೊಳ್ಳುತ್ತದೆಯೋ ಎನ್ನುವುದು ಬಹಳ ಮುಖ್ಯ ಇದಕ್ಕಾಗಿ ಬದ್ಧತೆಯ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ.

ಪರ್ಯಾಯ ಕೃಷಿ ನೀತಿ ಎಂದರೆ ಅದು ಕೇವಲ ಬೆಳೆ ಪದ್ಧತಿಗೋ ಅಥವಾ ಎಂತಹ ಬೆಳೆಯನ್ನು ಯಾವ ರೀತಿ ಬೆಳೆಯಬೇಕು ಎನ್ನುವ ಅಂಶಗಳಿಂದ ಮಾತ್ರ ಕೂಡಿರುವುದಿಲ್ಲ. ಕ್ಯೂಬಾದ ಅನುಭವವೇ ಹೇಳುವಂತೆ ಅಲ್ಲಿ ಕೃಷಿ ಭೂಮಿ ಎನ್ನುವುದು ಯಾರೊಬ್ಬರ ಖಾಸಗಿ ಸೊತ್ತಲ್ಲ. ಎಲ್ಲ ಭೂಮಿಯೂ ಸರ್ಕಾರಕ್ಕೆ ಸೇರಿದ್ದು ಅದನ್ನ ರೈತರಿಗೆ ಗುತ್ತಿಗೆ ಆಧಾರದಲ್ಲಿ ನೀಡಲಾಗುತ್ತದೆ. ಕನಿಷ್ಟ 5 ಎಕರೆಯಿಂದ ಗರಿಷ್ಟ 50 ಎಕ್ಕರೆಯವರೆಗೆ ಗರಿಷ್ಟ ಕಾಲಾವಧಿ 30 ವರ್ಷಗಳು. ಹೀಗೆ ಭೂಮಿಯನ್ನು ನೀಡಿದ ಸರ್ಕಾರವು ರೈತರು ಮನಸೋಯಿಚ್ಛೆ ಬೆಳೆಗಳನ್ನು ಬೆಳೆಯಲು ಬಿಡುವುದಿಲ್ಲ. ಬದಲಾಗಿ ಅಲ್ಲಿಯ ಪರಿಸರಕ್ಕೆ ತಕ್ಕಂತೆ ಮತ್ತು ದೇಶದ ಅಗತ್ಯಗಳಿಗೆ ತಕ್ಕಂತೆ ಯಾವ ಬೆಳೆಗಳನ್ನು ಎಷ್ಟು ಬೆಳೆಯಬೇಕು ಮತ್ತು ಯಾವ ಭಾಗಗಳಲ್ಲಿ ಬೆಳೆಯಬೇಕು ಎನ್ನುವ ವಾರ್ಷಿಕ ಯೋಜನೆಯೊಂದನ್ನು ಸರ್ಕಾರವೇ ರೂಪಿಸಿ ಅದಕ್ಕೆ ಬೇಕಾದ ವ್ಯವಸ್ಥೆ ಮತ್ತು ತಾಂತ್ರಿಕ ತಿಳುವಳಿಗೆ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತದೆ.

ಇಷ್ಟೆಲ್ಲದರ ಜೊತೆಗೆ ಅಂತಿಮವಾಗಿ ಪ್ರತಿ ರೈತರಿಗೂ ಎದುರಾಗುವ ಸಂಕಷ್ಟ ಮಾರುಕಟ್ಟೆ. ಭಾರತದಲ್ಲಿ ರೈತರ ಪರವಾದ ಮಾರುಕಟ್ಟೆಗಳಿಲ್ಲದಿರುವುದರಿಂದ ರೈತರು ಬೆಳೆದ ಬೆಳೆಗಳಿಗೆ ನ್ಯಾಯಯುತವಾದ ಬೆಲೆಗಳು ಸಿಗುತ್ತಿಲ್ಲ, ಇದರಿಂದ ಕೃಷಿ ಮೇಲೆ ಹೂಡಿದ ಬಂಡವಾಳ ವಾಪಸ್ ಬಾರದೆ ನಷ್ಟವನ್ನು ಅನುಭವಿಸಿದ ರೈತ ಈ ವರ್ಷ ಬೆಳೆದ ಬೆಳೆಯನ್ನು ಮುಂದಿನ ವರ್ಷ ಬೆಳೆಯುವುದಿಲ್ಲ. ಮಾತ್ರವಲ್ಲ, ಯಾವ ಬೆಳೆಗೆ ಎಷ್ಟು ಬೇಡಿಕೆಯಿದೆ ಎನ್ನುವ ಯಾವ ಜ್ಞಾನವೂ ಸಾಮಾನ್ಯ ರೈತನಿಗಿರುವುದಿಲ್ಲ. ಆದರೆ ಕ್ಯೂಬಾದಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಬೆಳೆ ಬೆಳೆಯುವಾಗಲೇ ಸರ್ಕಾರ ಅದರ ಉತ್ಪಾದನಾ ವೆಚ್ಚವನ್ನು ಅಂದಾಜು ಮಾಡಿ ಅದರ ಮೇಲೆ ಲಾಭಾಂಶವನ್ನು ಇಟ್ಟು ಬೆಲೆಯನ್ನು ನಿಗದಿಪಡಿಸುತ್ತದೆ. ಇದನ್ನೇ ಭಾರತದಲ್ಲಿ ಕೃಷಿ ತಜ್ಞ ಡಾ.ಎಂ.ಎಸ್.ಸ್ವಾಮಿನಾಥನ್‌ರವರ ಆಯೋಗದ ಶಿಫಾರಸ್ಸಿನಲ್ಲಿ ಹೇಳಿರುವುದು. ಉತ್ಪಾದನಾ ವೆಚ್ಚಕ್ಕೆ ಶೇ. 50 ರಷ್ಟು ಲಾಭಾಂಶವನ್ನು ಸೇರಿಸಿ ಬೆಂಬಲ ಬೆಲೆ ನಿಗದಿ ಮಾಡಬೇಕು ಎಂದು.

ಹಾಗಾಗಿ ಪರ್ಯಾಯ ಕೃಷಿ ನೀತಿ ಎಂದರೆ ಅದು ಭೂಮಿಯ ಒಡೆತನ, ಉತ್ಪಾದನಾ ವೆಚ್ಚ, ಉತ್ಪಾದನಾ ವಿಧಾನ ಮತ್ತು ಮಾರುಕಟ್ಟೆಯನ್ನು ಅವಲಂಬಿಸಿರುತ್ತದೆ. ಇವು ಸರಪಳಿಯಿದ್ದಂತೆ ಒಂದಕ್ಕೆ ಇನ್ನೊಂದು ಪೂರಕವಾಗಿ ಕೆಲಸ ನಿರ್ವಹಿಸುತ್ತವೆ. ಇವೆಲ್ಲವೂ ಯೋಜನಾಬದ್ಧವಾಗಿ ನಡೆದರೆ ಕೃಷಿ ಖಂಡಿತವಾಗಿಯೂ ಲಾಭದಾಯಕವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ನಮ್ಮ ಪಕ್ಕದಲ್ಲೇ ಇರುವ ಕೇರಳದಲ್ಲಿ ಇಂತಹ ಹಲವು ಪ್ರಯೋಗಗಳನ್ನು ರೈತರು ಒಂದು ಆಂದೋಲನವಾಗಿ ಮಾಡಿದ್ದಾರೆ. ಅದಕ್ಕೆ ಸ್ಪಂದನೆಯಾಗಿ ಅಲ್ಲಿಯ ಎಡರಂಗ ಸರ್ಕಾರ ಸಹಕಾರಿ ಕೃಷಿ ಪದ್ಧತಿ ಮತ್ತು ರಾಸಾಯನಿಕ ರಹಿತ ಸಾವಯವ ಕೃಷಿ ಪದ್ಧತಿಯನ್ನು ಹಂತಹಂತವಾಗಿ ಅಳವಡಿಸಿಕೊಂಡು ಒಂದು ಹೊಸ ಮಾದರಿಯನ್ನು ಹುಟ್ಟುಹಾಕುವ ಪ್ರಯತ್ನವನ್ನು ನಡೆಸುತ್ತಿದೆ.

ಅದು ಕ್ಯೂಬಾ ಮಾದರಿಯಿರಲಿ, ಭೂತಾನ್, ಇಸ್ರೇಲ್ ಅಥವಾ ಕೇರಳ ಮಾದರಿ ಇರಲಿ ಪ್ರಶ್ನೆಯಿರುವುದು ಇದನ್ನು ಜಾರಿಗೊಳಿಸುವ ರಾಜಕೀಯ ಇಚ್ಛಾಶಕ್ತಿ ಮತ್ತು ಒಂದು ಹೊಸ ವಿಧಾನಕ್ಕೆ ರೈತ ಸಮುದಾಯವನ್ನು ಒಳಗೊಳ್ಳುವ ಜಾಗೃತಿ, ತಿಳುವಳಿಕೆ ಮತ್ತು ಈ ಹೊಸ ಮಾದರಿಗಳಿಂದ ರೈತ ಸಮುದಾಯ ಉಳಿಯುವ ಜೊತೆಗೆ ಕೃಷಿಯನ್ನು ಉಳಿಸಬಹುದೆಂಬ ಭರವಸೆ ಸಿಕ್ಕಾಗ ಮಾತ್ರ ಹೊಸ ಮಾದರಿಯ ಪ್ರಯತ್ನಗಳು ಯಶಸ್ಸಿನ ದಡ ಮುಟ್ಟಲು ಸಾಧ್ಯ. ಇದಕ್ಕಾಗಿ ಜಿಲ್ಲೆಯ ಸಾಕ್ಷಿ ಪ್ರಜ್ಞೆಯಾಗಿರುವ ಜನತಾಮಾಧ್ಯಮ ನಡೆಸುತ್ತಿರುವ ಈ ಚರ್ಚೆ ಅತ್ಯಂತ ಸ್ವಾಗತಾರ್ಹವಾದದ್ದು ಇದನ್ನು ಎಲ್ಲೂ ಸೇರಿ ಪ್ರಾಯೋಗಿಕವಾಗಿ ಮುಂದುವರಿಸುವ ಪ್ರಯತ್ನಕ್ಕೆ ಕೈಯೋಡಿಸೋಣ.

'ಪಾರ್ಶ್ವ ಪ್ರವೇಶ', ಅರ್ಥಾತ್ ಉನ್ನತ ಸರಕಾರೀ ಹುದ್ದೆಗಳಿಗೆ ನೇರ ನೇಮಕ

ದೇಶದ ಭವಿಷ್ಯವನ್ನು ಕದಡುವ ಮತ್ತೊಂದು ನೋಟುರದ್ಧತಿ ಕಾರ್ಯಾಚರಣೆ?



ಜೂನ್ 10 ರಂದು ಕೇಂದ್ರ ಸರಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ 10 ಇಲಾಖೆಗಳಲ್ಲಿ ಜಂಟಿ ಕಾರ್ಯದರ್ಶಿ ಹುದ್ದೆಗಳಿಗೆ ನೇರ ಅರ್ಜಿಯನ್ನು ಆಹ್ವಾನಿಸುವ ಜಾಹೀರಾತುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದೆ. ರೆವಿನ್ಯೂ, ಹಣಕಾಸು ಸೇವೆಗಳು, ಆರ್ಥಿಕ ವ್ಯವಹಾರಗಳು, ವಾಣಿಜ್ಯ, ನಾಗರಿಕ ವಿಮಾನಯಾನ, ಕೃಷಿ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು, ಹಡಗು ಸಾರಿಗೆ, ಪರಿಸರ ಮತ್ತು ಅರಣ್ಯ, ಹೊಸ ಮತ್ತು ನವೀಕರಿಸಬಲ್ಲ ಇಂಧನ ಈ ಇಲಾಖೆಗಳಲ್ಲಿ ಎರಡನೇ ಅತ್ಯುನ್ನತ ಹುದ್ದೆಯಾದ ಜಂಟಿ ಕಾರ್ಯದರ್ಶಿ ಹುದ್ದೆಗಳಿಗೆ 40 ವರ್ಷ ದಾಟಿದ, ಸಂಬಂಧಿತ ಕ್ಷೇತ್ರಗಳಲ್ಲಿ ಕನಿಷ್ಟ 15 ವರ್ಷ ಅನುಭವ ಇರುವ ಖಾಸಗಿ ಕಂಪನಿಗಳಲ್ಲಿ, ಸಲಹಾ ಸಂಘಟನೆಗಳಲ್ಲಿ, ಅಂತರ್ರಾಷ್ಟ್ರೀಯ / ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಇದನ್ನು 'ಲೇಟರಲ್ ಎಂಟ್ರಿ' ಅಂದರೆ 'ಪಾರ್ಶ್ವ ಪ್ರವೇಶ' ಎನ್ನುತ್ತಿದ್ದಾರೆ. ಈ ಜಾಹೀರಾತನ್ನು ಕಾರ್ಪೊರೇಟ್ ವಲಯ ಸ್ವಾಗತಿಸಿದೆ. ಅಧಿಕಾರಶಾಹಿಯ ಬಿಗಿಮುಷ್ಟಿಯನ್ನು ಸಡಿಲಿಸುವ ಒಳ್ಳೆಯ ಕ್ರಮ ಎಂದು ಇನ್ನು ಕೆಲವರು ಪರಿಣಿತರೂ ಸ್ವಾಗತಿಸಿದ್ದಾರೆ. ಇದರಿಂದ ಸಹಜವಾಗಿ ಐಎಎಸ್ ಅಧಿಕಾರಿಗಳಿಗೆ ಬೇಸರವಾಗುತ್ತದೆ, ಆದರೆ ಇದು ಅಸೂಯೆಯ, ತಮ್ಮ ಅಧಿಕಾರ ಬಲ ಕಡಿಮೆಯಾಗುವ ಭಯದ ನೋವು ಎಂದು ಕೆಲವರು ವರ್ಣಿಸಿದ್ದಾರೆ.

ಅಚ್ಛೇದಿನ್ ಸರಕಾರ, ಇದು ಆಳ್ವಿಕೆಯಲ್ಲಿ ಹೊಸ ವಿಚಾರಗಳನ್ನು, ಹೊಸ ನಿಲುವುಗಳನ್ನು ತರುವ ಉದ್ದೇಶದಿಂದ ಕೈಗೊಂಡಿರುವ ಕ್ರಮ ಎಂದು ಸಮರ್ಥಿಸಿಕೊಂಡಿದೆ. ಆದರೆ ಅಚ್ಛೇದಿನ್ ನಿಂದ ಹಿಡಿದು ಕಪ್ಪುಹಣ/ಭ್ರಷ್ಟಾಚಾರ ನಿರ್ಮೂಲನೆ ವರೆಗೆ'ಎಲ್ಲವೂ 'ಜುಮ್ಲಾ'ಗಳಾಗುತ್ತಿರುವ, ಅಂದರೆ ಪ್ರಚಾರ ಗಿಟ್ಟಿಸುವ ಬೊಗಳೆಗಳಷ್ಟೇ ಆಗುತ್ತಿರುವಾಗ, 'ಸ್ವಚ್ಛ ನಿಯತ್ತು' ಎಂಬುದು ಕೂಡ ತೆರಿಗೆದಾರರ ಖರ್ಚಿನಲ್ಲಿ ಹೊರಡಿಸುವ ಜಾಹೀರಾತುಗಳ ಅಕ್ಷರಗಳಷ್ಟೇ ಆಗುತ್ತಿರುವ ಒಂದು ಆಳ್ವಿಕೆಯಲ್ಲಿ ಹೊಸ ವಿಚಾರಗಳಿಗೆ, ಹೊಸ ನಿಲುವುಗಳಿಗೆ ನಿಜವಾಗಿಯೂ ಅವಕಾಶವಿದೆಯೇ? ಅಥವ ಇದು ಬೇರಾವುದೋ ಹುನ್ನಾರಕ್ಕೆ ಮುಖವಾಡವೊ ಎಂಬ ಸಂದೇಹವನ್ನು ಹಲವರು ವ್ಯಕ್ತಪಡಿಸುತ್ತಿದ್ದಾರೆ. ಈ ನಾಲ್ಕು ವರ್ಷಗಳ ಅನುಭವಗಳ, ಬೆಳವಣಿಗೆಗಳ ಬೆಳಕಲ್ಲಿ ನೋಡಿದರೆ ಈ ಎರಡನೇ ಸಾಧ್ಯತೆಯೇ ಹೆಚ್ಚು ಎಂದು ಅನಿಸಿದರೆ ತಪ್ಪೇನಿಲ್ಲ.

ಆದರೂ **ಸರಕಾರೀ ಹುದ್ದೆಗಳ ನೇಮಕದ ಪ್ರಶ್ನೆ ಇಷ್ಟೊಂದು ಪ್ರಶ್ನೆಗಳನ್ನೇಕೆ ಎತ್ತಬೇಕು**? ಏಕೆಂದರೆ ಇವು ಯಾವುದೋ ಒಂದು ಸಂಸ್ಥೆ, ಕಂಪನಿಯನ್ನು ನಡೆಸುವುದಕ್ಕಾಗಿ ಅಲ್ಲ, 130 ಕೋಟಿ ಜನಸಂಖ್ಯೆಯುಳ್ಳ ಒಂದು ದೇಶದ ವ್ಯವಹಾರಗಳನ್ನು ನಡೆಸುವ ಪ್ರಶ್ನೆ, ಕೋಟ್ಯಂತರ ಜನಗಳ ಬದುಕುಗಳನ್ನು ತಟ್ಟುವ ಪ್ರಶ್ನೆ. ಐಎಎಸ್ ಅಧಿಕಾರಿಗಳು ಇದನ್ನು ಚೆನ್ನಾಗಿ ನಿಭಾಯಿಸಿದ್ದಾರೆ ಎಂದೇನೂ ಅಲ್ಲ. ಆದರೆ ಈ ಹೊಸ ವ್ಯವಸ್ಥೆ ಅದರ ಕುಂದು-ಕೊರತೆಗಳಿಂದ ಮುಕ್ತವಾಗಿದೆ ಎಂಬ ಭರವಸೆ, ನಿರೀಕ್ಷೆ ಇದೆಯೇ ಎಂಬುದೇ ಪ್ರಶ್ನೆ.

ಇದುವರೆಗೆ ಈ ಉನ್ನತ ಹುದ್ದೆಗಳಿಗೆ, ಕೆಲವು ವೈಜ್ಞಾನಿಕ/ತಾಂತ್ರಿಕ ಇಲಾಖೆಗಳನ್ನು ಬಿಟ್ಟರೆ, ಐಎಎಸ್ ಅಥವ ತತ್ಸಮಾನ ಕೇಂದ್ರ /ರಾಜ್ಯ ಸೇವೆಗಳಿಂದ ಬಂದವರು ನೇಮಕಗೊಳ್ಳುತ್ತಿದ್ದಾರೆ. ಇವರೆಲ್ಲ ಒಂದೆಡೆಯಲ್ಲಿ ಅಧಿಕಾರ ಮದ ತುಂಬಿಕೊಂಡವರು ಎಂಬ ಟೀಕೆಯಿದ್ದರೂ, ಇನ್ನೊಂದೆಡೆಯಲ್ಲಿ ತಮ್ಮ ಕೆಲಸ/ ಅನುಭವಗಳ ಆಧಾರದಲ್ಲಿ ಬಡ್ತಿ ಗಳನ್ನು ಪಡೆದುಕೊಂಡು ಬರುತ್ತಿರುವವರು, ಮೂಲತಃ ರಾಷ್ಟ್ರಮಟ್ಟದ ಸ್ಪರ್ಧಾ ಪರೀಕ್ಷೆಗಳಲ್ಲಿ ಉನ್ನತ ಸ್ಥಾನ ಪಡೆದು ಯುವ ಅಧಿಕಾರಿಗಳಾಗಿ ನೇಮಕರಾಗಿರುವ ಮತ್ತು ಬುಡಮಟ್ಟದಿಂದ ಕೆಲಸ ಮಾಡಿಕೊಂಡು ಅನುಭವ ಪಡೆದು ಬಂದಿರುವವರು ಕೂಡ.

ನಿಜ, ಹೊಸ ವಿಚಾರಗಳು, ಹೊಸ ನಿಲುವುಗಳು, ಹೊಸ ಪರಿಣತಿಗಳು ಆಳ್ವಿಕೆಯಲ್ಲಿ ಆಸ್ತಿಯಾಗಬಲ್ಲವು. ಆದರೆ **ಮೂರು ವರ್ಷಗಳ ಕಾಂಟ್ರಾಕ್ಟ್ ಮೇಲೆ ನೇಮಕಗೊಳ್ಳುವ ಈ 'ಪ್ರತಿಭಾವಂತ'ರು ಯಾರಿಗೆ ವಿಧೇಯರಾಗುರುತ್ತಾರೆ, ದೇಶದ ಜನತೆಗೋ, ತಮ್ಮನ್ನು ನೇಮಿಸಿದ ಆಳುವ ಪಕ್ಷಕ್ಕೋ ಅಥವ ತಾವು ಯಾವ ಕಂಪನಿಯಿಂದ ಬಂದರೋ, ಅಥವ ಮರಳಬೇಕೋ ಆ ಕಂಪನಿಗೋ/ಮಾಲಿಕರಿಗೋ**? ಇದು ಒಬ್ಬ ಹಿರಿಯ ನಿವೃತ್ತ ಉನ್ನತ ಅಧಿಕಾರಿ ಕೇಳುವ ಪ್ರಶ್ನೆ-ಅಸೂಯೆಯಿಂದಲ್ಲ, ಕಳಕಳಿಯಿಂದ.

ಅಲ್ಲದೆ, ಈ ಅಚ್ಚೇ ದಿನ್ ಸರಕಾರ ರಾಜ್ಯಪಾಲರ ಹುದ್ದೆಗಳಿಗೆ ಮಾತ್ರವಲ್ಲ ವಿವಿಧ ಉನ್ನತ ಶಿಕ್ಷಣ, ಸಂಶೋಧನಾ ಸಂಸ್ಥೆಗಳಿಗೆ, ವಿಶ್ವವಿದ್ಯಾಲಯಗಳ ಉನ್ನತ ಹುದ್ದೆಗಳಿಗೆ ಮಾಡಿರುವ ನೇಮಕಗಳಲ್ಲಿ ಕಂಡು ಬಂದಿರುವ ಏಕೈಕ ಮಾನದಂಡವೆಂದರೆ ಆರೆಸ್ಸೆಸ್‌ಗೆ ಹೊಂದಿಕೊಳ್ಳುವ 'ವಿಚಾರಗಳು' ಮಾತ್ರ, ಸಂಬಂಧಪಟ್ಟ ಹುದ್ದೆಗಳಿಗೆ ಅಗತ್ಯವಾದ ಅರ್ಹತೆ, ಅನುಭವಗಳಲ್ಲ ಎಂಬುದು ಜಗಜ್ಜಾಹೀರಾಗಿರುವ ಸಂಗತಿ.

ಇನ್ನು 'ಚಮಚಾ ಬಂಡವಾಳಶಾಹಿ'ಯ ಈ ದಿನಗಳಲ್ಲಿ ಕಾರ್ಪೊರೇಟ್ ವಲಯದಿಂದ ನೇಮಕಗೊಳ್ಳುವ 'ಪರಿಣಿತರು' ಆಳುವವರ ಉದ್ಯಮಿ 'ಮಿತ್ರರು'ಗಳಿಂದ ಬರುವ 'ಚಮಚಾ' ನೇಮಕಗಳಾಗಿರುವುದಿಲ್ಲ ಎಂಬ ಗ್ಯಾರಂಟಿ ಏನಾದರೂ ಇದೆಯೇ? ಪರಿಸರ ಇಲಾಖೆಯಲ್ಲಿ ಅದಾನಿ ಕಂಪನಿಯಿಂದ ಬರುವ/ಮರಳುವ ಒಬ್ಬ 'ಪರಿಣತ', ಹಣಕಾಸು ಸೇವೆಗಳಲ್ಲಿ ಅಂಬಾನಿಯ ಕಂಪನಿಯಿಂದ ಬರುವ 'ಎಕ್ಸ್‌ಪರ್ಟ್' ನಿಜವಾಗಿಯೂ ಜನಪರ ಧೋರಣೆಗಳನ್ನು ರೂಪಿಸಬಹುದೇ?

ಒಬ್ಬ ವಿಶ್ಲೇಷಕರಂತೂ, ಇದು ಖಾಸಗೀಕರಣ, ಕೇಸರೀಕರಣದ ಗೀಳು ಹಚ್ಚಿಕೊಂಡಿರುವ ಸರಕಾರ ಮಾಡುತ್ತಿರುವ ಐಎಎಸ್‌ನ ಖಾಸಗೀಕರಣ ಮತ್ತು ಕೇಸರೀಕರಣ ಎಂಬ ಸಂದೆಹವನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಖಂಡಿತಾ ತಳ್ಳಿಹಾಕಲು ಸಾಧ್ಯವಿಲ್ಲ. ಅಥವ ಕೋಟ್ಯಂತರ ಜನಗಳ ಬದುಕನ್ನು ಕದಡಿದ ನೋಟುರದ್ಧತಿಯಂತಹ ಕಾರ್ಯಾಚರಣೆಯಾಗಬಹುದೇ ಎಂಬ ಭಯವನ್ನೂ ನಿರಾಕರಿಸಲು ಸಾಧ್ಯವಿಲ್ಲ.

ಭೀಮಾ-ಕೋರೆಗಾಂವ್ ವಿಜಯೋತ್ಸವ ಸಂದರ್ಭದಲ್ಲಿ ಹಲ್ಲೆಗೊಳಗಾದ, ಗಾಯಗೊಂಡ ಹಾಗೂ ಹತರಾದ ಜನರ ಪರವಾಗಿ ನ್ಯಾಯಕ್ಕಾಗಿ ಹೋರಾಡುತ್ತಿರುವ ಐವರು ಕಾರ್ಯಕರ್ತರನ್ನು ಮಹಾರಾಷ್ಟ್ರದ ಬಿಜೆಪಿ ಸರಕಾರ ಇತ್ತೀಚೆಗೆ ಬಂಧಿಸಿದೆ. ಆರಂಭದಲ್ಲಿ ಅವರನ್ನು ದೇಶದ್ರೋಹಿ ಹಾಗೂ ರಾಷ್ಟ್ರವಿರೋಧಿ ಚಟುವಟಿಕೆಗಳಿಗೆ ಯೋಜನೆ ರೂಪಿಸುತ್ತಿರುವ 'ನಗರ ಮಾವೋವಾದಿಗಳು' ಎಂದು ಆರೋಪಿಸಲಾಯಿತು. ಇದೀಗ, ಪ್ರಧಾನಿಯನ್ನು ಕೊಲ್ಲಲು ಸಂಚು ರೂಪಿಸಿದ್ದರು ಎಂಬ ಆರೋಪ ಹೊರಿಸಲಾಗಿದೆ. ಹೀಗಾಗಿ ಅವರ ವಿರುದ್ಧ ಕರಾಳ ಕಾನೂನುಬಾಹಿರ ಚಟುವಟಿಕೆಗಳು (ತಡೆ) ಕಾನೂನನ್ನು(ಯುಎಪಿಎ) ಅನ್ವಯಿಸಲಾಗಿದೆ, ಆದರೆ ಈ ಆರೋಪದ ಬಗ್ಗೆ ಬಹಳಷ್ಟ ಸಂದೇಹಗಳು ವ್ಯಕ್ತವಾಗುತ್ತಿವೆ -ಸುದ್ದಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

ಮಾನವ ಹಕ್ಕು ಆಯುಕ್ತರಾಗಿ ಬೇಡವಾಗಿದ್ದ ಮಾಜಿ ಎನ್‌ಐಎ ಮುಖ್ಯಸ್ಥ ಈಗ ವಿಚಕ್ಷಣಾ ಆಯುಕ್ತ

ಎನ್‌ಐಎ, ಅಂದರೆ ರಾಷ್ಟ್ರೀಯ ತನಿಖಾ ಸಂಸ್ಥೆಯ ಮಹಾನಿರ್ದೇಶಕರಾಗಿ ನಿವೃತ್ತರಾಗಿರುವ ಶರದ್ ಕುಮಾರ್ ಅವರನ್ನು ಈಗ ಕೇಂದ್ರೀಯ ವಿಚಕ್ಷಣಾ ಆಯೋಗ(ವಿಜಿಲೆನ್ಸ್ ಕಮಿಶನ್)ದಲ್ಲಿ ಆಯುಕ್ತರನ್ನಾಗಿ ನೇಮಿಸಲಾಗಿದೆ.

ಪ್ರಧಾನಿಗಳ ಪ್ರೀತಿಪಾತ್ರರು ಎಂದು ಹೇಳಲಾದ ಈ ಐಪಿಎಸ್ ಅಧಿಕಾರಿ ಜುಲೈ 2013ರಲ್ಲಿ ಎನ್‌ಐಎ ಮಹಾನಿರ್ದೇಶಕರಾಗಿ ನೇಮಕಗೊಂಡಿದ್ದರು. ಅಕ್ಟೋಬರ್ 2015ರಲ್ಲಿ ಅವರು ನಿವೃತ್ತರಾಗಬೇಕಿತ್ತು. ಆದರೆ ನಿವೃತ್ತಿಯ ಹಿಂದಿನ ದಿನ ಅವರ ಅಧಿಕಾರಾವಧಿಯನ್ನು ಒಂದು ವರ್ಷ ವಿಸ್ತರಿಸಲಾಯಿತು. ನಂತರ ಮತ್ತೆ ಒಂದು ವರ್ಷ ವಿಸ್ತರಿಸಲಾಯಿತು.

ಎನ್‌ಐಎ ಮುಖ್ಯಸ್ಥರಾಗಿ ಅವರ ಅಧಿಕಾರಾವಧಿ ಬಹಳ ಪ್ರಶ್ನಾರ್ಹವಾಗಿದೆ ಎನ್ನಲಾಗಿದೆ. ಏಕೆಂದರ ಈ ಅವಧಿಯಲ್ಲೇ ಆರೆಸ್ಸೆಸ್‌ನೊಂದಿಗೆ ಸಂಬಂಧವಿರುವ ಹಿಂದುತ್ವ ಸಂಘಟನೆಗಳ ಸದಸ್ಯರ ಮೇಲಿದ್ದ ಭಯೋತ್ಪಾದನೆ ಕೇಸುಗಳೆಲ್ಲ ಮುಚ್ಚಿ ಹೋಗಿ ಸುಮಾರಾಗಿ ಎಲ್ಲ ಆಪಾದಿತರ ಖುಲಾಸೆಯಾಯಿತು. ಕೊನೆಗೂ ಅವರ ಸೇವಾವಧಿ ಮುಗಿದ ನಂತರ ಅವರನ್ನು ಮಾನವ ಹಕ್ಕು ಆಯೋಗಕ್ಕೆ ಒಬ್ಬ ಆಯುಕ್ತರಾಗಿ ನೇಮಿಸುವ ಯೋಚನೆ ಸರಕಾರಕ್ಕೆ ಇತ್ತಂತೆ.

ಆದರೆ ರಾಷ್ಟ್ರೀಯ ಮತ್ತು ರಾಜ್ಯ ಮಾನವ ಹಕ್ಕುಗಳ ಸ್ಲಂಸ್ಥೆಗಳಲ್ಲಿ ಕೆಲಸ ಮಾಡುವ ಸರ್ಕಾರೇತರ ಸಂಸ್ಥೆಗಳು ಮತ್ತು ವ್ಯಕ್ತಿಗಳ ಅಖಿಲ ಭಾರತ ನೆಟ್‌ವರ್ಕ್ ಅವರು ಈ ಸ್ಥಾನಕ್ಕೆ ಸೂಕ್ತರಲ್ಲ ಎಂದು ಒಂದು ಮನವಿ ಸಲ್ಲಿಸಿತು. ಅದಕ್ಕೆ ಸಮರ್ಥನೆಯಾಗಿ ಮೇಲಿನ ಎಲ್ಲ ಅಂಶಗಳನ್ನು ಮಂಡಿಸಲಾಗಿತ್ತು. ಅವರನ್ನು ಕೊನೆಗೂ ಈ ಸ್ಥಾನಕ್ಕೆ ನೇಮಿಸಲಿಲ್ಲ. ಆದರೆ ಅದಕ್ಕಿಂತಲೂ ಮಹತ್ವದ ಸ್ಥಾನಕ್ಕೆ ಈಗ ನೇಮಿಸಲಾಗಿದೆ. ವಾಸ್ತವವಾಗಿ ಇದು ಆಳರಸರ ನಡೆಗಳನ್ನು ವೀಕ್ಷಿಸುವ ಕಾವಲು ಆಯೋಗ. ಮಾನವ ಹಕ್ಕುಗಳ ಆಯೋಗಕ್ಕೆ ಸೂಕ್ತವಲ್ಲ ಎನಿಸಿದವರು ಈಗ ಮೇಲೆ ಹೇಳಿದ ಸಂದೇಹಾಸ್ಪದ ನಡೆಗಳ ಕಾವಲಿನ ಕರ್ತವ್ಯಕ್ಕೆ ನೇಮಕಗೊಂಡಿದ್ದಾರೆ. 'ಉತ್ತಮ ಆಳ್ವಿಕೆ'ಯ ಮತ್ತೊಂದು ಮಾದರಿ!

ಕೊನೆಯ ವರ್ಷದಲ್ಲೀಗ ಅಂಕಿ-ಅಂಶಗಳ ಕಸರತ್ತು ರೈತರ ಆತ್ಮಹತ್ಯೆಗಳದ್ದೂ ಇಲ್ಲ! -ಉದ್ಯೋಗ'ಗಳ ನಿರ್ಮಾಣದ್ದೂ ಇಲ್ಲ!

ಕಳೆದ ತಿಂಗಳು ಕನಿಷ್ಟ ಆರು ರೈತರ ಆತ್ಮಹತ್ಯೆಗಳ ಸುದ್ದಿಗಳು ರಾಜಸ್ತಾನ ಮತ್ತು ಮಧ್ಯಪ್ರದೇಶದಿಂದ (ಎರಡೂ ಅಚ್ಛೇದಿನ್ ಆಳ್ವಿಕೆಯ ರಾಜ್ಯಗಳಾಗಿರುವುದು ಆಕಸ್ಮಿಕ?)ಬಂದವು. ಇವು ಸಾಲಹೊರೆಯಿಂದ ಅಥವ ಬೆಲೆಗಳು ವಿಪರೀತವಾಗಿ ಕುಸಿದುದರಿಂದ ಆದ ಹತಾಶೆಯಿಂದ ಸಂಭವಿಸಿದ ಸಾವುಗಳು. ಈ ಸುದ್ದಿಗಳು ಇನ್ನೊಂದು ಸಂಗತಿಯತ್ತ ವೀಕ್ಷಕರ ಗಮನ ಸೆಳೆದವು. ಅದೆಂದರೆ ದೇಶದಲ್ಲಿ ರೈತರ ಆತ್ಮಹತ್ಯೆಗಳ ಇತ್ತೀಚಿನ ಅಂಕಿ-ಅಂಶಗಳು. ಆದರೆ ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ (ಎನ್‌ಸಿಆರ್‌ಬಿ)ಯಲ್ಲಿ ಲಭ್ಯವಾಗಿರುವ ತೀರಾ ಇತ್ತೀಚಿನ ಅಂಕಿ-ಅಂಶಗಳೆಂದರೆ 2015ರದ್ದು.2016 ಮತ್ತು 2017ರ ಅಂಕಿ-ಅಂಶಗಳನ್ನು ಅದು ಇನ್ನೂ ಬಿಡುಗಡೆ ಮಾಡಿಲ್ಲ ಎಂಬ ಸುದ್ದಿ ಜೂನ್ 8ರಂದು ಬಂದಿದೆ. ಇದಕ್ಕೆ ಎನ್‌ಸಿಆರ್‌ಬಿ ನಿರ್ದೇಶಕರು ಕಾರಣವನ್ನೇನೂ ಕೊಟ್ಟಿಲ್ಲ, ಆದರೆ ಜೂನ್ ತಿಂಗಳ ಕೊನೆಯಲ್ಲಿ 2016ರ ಅಂಕಿ-ಅಂಶಗಳು ಸಿಗುತ್ತವೆ ಎಂದಿದ್ದಾರೆ. ಅಂದರೆ 2017 ಮತ್ತು 2018ರ ಅಧಿಕೃತ ಅಂಕಿ-ಅಂಶಗಳಿಗೆ ಬಹಳಷ್ಟು ಸಮಯ ಕಾಯಬೇಕಾಗಿದೆ.

ಅದೇ ದಿನ ಇನ್ನೊಂದು ಸುದ್ದಿ ಬಂದಿದೆ. ಕಾರ್ಮಿಕ ಮಂತ್ರಾಲಯ ಮೂರು ತಿಂಗಳಿಗೊಮ್ಮೆ ದೇಶದಲ್ಲಿ ಉದ್ಯೋಗಾವಕಾಶ ನಿರ್ಮಾಣಗಳ ಕುರಿತ ಸರ್ವೆಯ ಫಲಿತಾಂಶಗಳನ್ನು ಪ್ರಕಟಿಸುತ್ತಿದ್ದು, ಈ ಬಾರಿ ಅದನ್ನು ಪ್ರಕಟಿಸದೆ ತಡೆ ಹಿಡಿದಿದೆ ಎಂಬ ಸುದ್ದಿ . ಕಾರಣ ಅದು ಉದ್ಯೋಗ ನಿರ್ಮಾಣದ ಕುರಿತ ಸರಿಯಾದ ಮಾಹಿತಿಯನ್ನು ಕೊಡುತ್ತಿಲ್ಲವಂತೆ. ಈ ಸರ್ವೆಯನ್ನು ಕೈಬಿಟ್ಟು ಭವಿಷ್ಯನಿಧಿ ಕಚೇರಿಯಲ್ಲಿನ ನೊಂದಾವಣೆಗಳ ಆಧಾರದಲ್ಲಿ ಅಂಕಿ-ಅಂಶಗಳನ್ನು ಪ್ರಕಟಿಸುವ ಬಗ್ಗೆ ಯೋಚಿಸುತ್ತಿದೆ ಎಂಬ ಸುದ್ದಿ ಈ ಹಿಂದೆ ಬಂದಿತ್ತು. ಆದರೆ ಇದು ಹೊಸ ಉದ್ಯೋಗ ನಿರ್ಮಾಣದ ಸರಿಯಾದ ಮಾಹಿತಿ ಅಲ್ಲ ಎಂದು ಪರಿಣಿತರು ಹೇಳುತ್ತಿದ್ದಾರೆ, ಏಕೆಂದರೆ ಇದರಲ್ಲಿ ಈ ಹಿಂದೆಯೇ ನಿರ್ಮಾಣವಾದ, ಅದರೆ ಈಗಷ್ಟೇ ಭವಿಷ್ಯನಿಧಿಯ ಸದಸ್ಯರಾಗುವವರ ಸಂಖ್ಯೆಯೂ ಸೇರುತ್ತದೆ. ಅಂದರೆ ನಿಜವಾದ ಉದ್ಯೋಗಾವಕಾಶ ನಿರ್ಮಾಣಕ್ಕಿಂತ ಹೆಚ್ಚಿನ ಸಂಖ್ಯೆಯನ್ನು ತೋರಿಸುತ್ತದೆ. ಬಹುಶಃ ಅಚ್ಚೇ ದಿನ್ ಸರಕಾರಕ್ಕೆ ಇದೇ ಬೇಕಾಗಿರುವುದು.

ಆದರೆ ಅಂಕಿ-ಅಂಶಗಳನ್ನು ಪ್ರಕಟಿಸದೆ ವಾಸ್ತವಗಳನ್ನು ಮರೆಮಾಚುವುದು ಎಂತಹ ಸಾಫ್ ನಿಯತ್!

ಪಂಜಾಬ್ ನ್ಯಾಶನಲ್ ಬ್ಯಾಂಕಿಗೆ 13,000 ಕೋಟಿರೂ. ಪಂಗನಾಮ ಹಾಕಿ ಜನವರಿ ಆರಂಭದಲ್ಲಿ ದೇಶ ಬಿಟ್ಟೋಡಿದ ವಜ್ರವ್ಯಾಪಾರಿ ನೀರವ್ ಮೋದಿ ಪಾಸ್‌ಪೋರ್ಟನ್ನು ಫೆಬ್ರುವರಿಯಲ್ಲಿ ರದ್ದು ಮಾಡಲಾಯಿತು. ಆದರೆ ಈ ರದ್ದು ಮಾಡಿದ ಪಾಸ್‌ಪೋರ್ಟ್ ಹಿಡಿದುಕೊಂಡೇ ಆತ ಮಾರ್ಚ್ 15, 28, 30 ಮತ್ತು 31ರಂದು ಅಮೆರಿಕ, ಇಂಗ್ಲೆಂಡ್ ಮತ್ತು ಹಾಂಕಾಂಗ್ ನಡುವೆ ಓಡಾಡಿದ್ದಾನೆ ಎಂದು ಇಂಟರ್‌ಪೋಲ್ ಭಾರತ ಸರಕಾರಕ್ಕೆ ತಿಳಿಸಿದೆ.

ಪಾಸ್‌ಪೋರ್ಟುಗಳ ವ್ಯವಹಾರಗಳನ್ನು ನಿರ್ವಹಿಸುವ ಕೇಂದ್ರ ಗೃಹಮಂತ್ರಾಲಯ ಮತ್ತು ವಿದೇಶ ವ್ಯವಹಾರಗಳ ಮಂತ್ರಾಲಯ ಇದು ಹೇಗೆ ಸಾಧ್ಯವಾಯಿತು ಎಂಬ ಬಗ್ಗೆ ಅಧಿಕೃತ ವಿವರಣೆ ಕೊಡಲು ನಿರಾಕರಿಸುತ್ತಿವೆ. ಆದರೆ ಇದಕ್ಕೆ ಪರಸ್ಪರರನ್ನು ಹೊಣೆ ಮಾಡುತ್ತಿವೆ. ಪಾಸ್‌ಪೋರ್ಟನ್ನು ರದ್ದು ಮಾಡಿದ ಮೇಲೆ ಅದನ್ನು ಎಲ್ಲ ವಿಮಾನ ನಿಲ್ದಾಣಗಳಿಗೆ, ಹೈಕಮಿಶನ್‌ಗಳಿಗೆ ವಿದೇಶಾಂಗ ಇಲಾಖೆ ತಿಳಿಸಬೇಕಾಗಿತ್ತು ಎಂದು ಗೃಹ ಇಲಾಖೆಯ ಕೆಲವು ಆದಿಕಾರಿಗಳು ಹೇಳಿದರೆ, ಹೀಗೆ ತಿಳಿಸುವ ಕ್ರಿಯೆ ಗೃಹಮಂತ್ರಾಲಯದ ವ್ಯಾಪ್ತಿಗೆ ಬರುತ್ತದೆ ಎಂದು ವಿದೇಶಾಂಗ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ -ಸುದ್ದಿ



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಬ್ಯಾಂಕುಗಳ ಖಾಸಗೀಕರಣಕ್ಕಾಗಿ ಶತ ಪ್ರಯತ್ನಗಳು



ಬ್ಯಾಂಕ್ ಖಾಸಗೀಕರಣದ ಸಮರ್ಥಕರು ಸಾರ್ವಜನಿಕ ಬ್ಯಾಂಕುಗಳ ಒಡೆತನವನ್ನು ವರ್ಗಾಯಿಸಬೇಕೆನ್ನುತ್ತಿದ್ದಾರೆ. ಯಾರಿಗೆ? 'ಮೂಲರಚನೆ' ಸಾಲಗಳ ಹೆಸರಲ್ಲಿ ಲಪಟಾಯಿಸಿಅವನ್ನು ಎನ್‌ಪಿಎ ಗಳಾಗಿ ಮಾಡಿದ ಲೂಟಿಕೋರರಿಗೇ! ಬ್ಯಾಂಕ್‌ಗಳು ಸರಕಾರದ ಒಡೆತನದಲ್ಲೇ ಮುಂದುವರಿಯಬೇಕು ಎನ್ನುವ ಅಂಶದ ಸಮಂಜಸತೆ, 1969ರಲ್ಲಿ ರಾಷ್ಟ್ರೀಕರಣ ಮಾಡಿದಾಗ ಇದ್ದಷ್ಟು ಈಗಲೂ ಇದೆ. ಎನ್‌ಪಿವ ಕಾರಣದಿಂದಾಗಿ, ಅನ್ಯ ಮಾರ್ಗವೇ ಇಲ್ಲದೆ, ಸಾರ್ವಜನಿಕ ಬ್ಯಾಂಕ್‌ಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ ಎಂದು ನಂಬುವಂತೆ ಮಾಡಿ ಜನರಿಗೆ ಟೋಪಿಹಾಕಲಾಗುತ್ತಿದೆ. ಈ ಪೊಳ್ಳುತನವನ್ನು ಬಯಲುಮಾಡಬೇಕಿದೆ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್. ಅವರ The Push for Privatising the Banks ಲೇಖನದ ಭಾವಾನುವಾದ: **ಕೆ.ಎಂ.ನಾಗರಾಜ್**

1969ರಲ್ಲಿ ದೊಡ್ಡ ದೊಡ್ಡ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲಾಗಿತ್ತು. ಅದನ್ನು ರದ್ದು ಮಾಡಬೇಕೆಂಬ ಒತ್ತಾಯ ಆವತ್ತಿನಿಂದ ಆರಂಭವಾಗಿ ಇನ್ನೂ ಮುಂದುವರಿಯುತ್ತಿದೆ. ನವ-ಉದಾರವಾದಿ ನೀತಿಗಳ ಅಳವಡಿಕೆಯು ಆ ಒತ್ತಾಯಕ್ಕೆ ಬಲ ತುಂಬಿದೆ. ಭಾರತದಂತಹ ದೊಡ್ಡ ದೇಶದಲ್ಲಿ ಸುಮಾರಾಗಿ ಎಲ್ಲಾ ದೊಡ್ಡ ಬ್ಯಾಂಕುಗಳು ಸಾರ್ವಜನಿಕ ಒಡೆತನಕ್ಕೆ ಒಳಪಟ್ಟಿರುವ ಸಂಗತಿಯು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ನುಂಗಲಾರದ ತುತ್ತಾಗಿದೆ. ಹಾಗಾಗಿ, ಅಮೇರಿಕಾದ ಆಡಳಿತದ ಉನ್ನತ ಹುದ್ದೆಗಳಲ್ಲಿರುತ ಚಿಟಜಿಟುಟಿ ಷೇರು ಮಾರುಕಟ್ಟೆಯ "ಆಪ್ತರು"ಗಳಾದ ತಿಮೊತಿ ಗೀತ್ನರ್ ಮತ್ತು ಲ್ಯಾರಿ ಸಮರ್ಸ್ ಮುಂತಾದವರು ಅಗಾಗ್ಗೆ, ಭಾರತಕ್ಕೆ ಆಗಮಿಸಿ ನಮ್ಮ ಸರ್ಕಾರದೊಂದಿಗೆ, ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳನ್ನು ಅಲ್ಲದಿದ್ದರೂ, ಕೊನೆಯ ಪಕ್ಷ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ದಂತಹ ಒಂದೆರಡನ್ನಾದರೂ ಖಾಸಗೀಕರಣಗೊಳಿಸಿದರೆ ಅದು ಒಂದು ಒಳ್ಳೆಯ ಸಂಕೇತ ನೀಡುತ್ತದೆ ಎಂದು ಗೋಗರೆಯುತ್ತಾರೆ.

ಜನತೆ ತಿರುಗಿ ಬೀಳುತ್ತಾರೆ ಎಂಬ ಭಯದಿಂದ ಭಾರತ ಸರ್ಕಾರವು ಖಾಸಗೀಕರಣದ ಒತ್ತಾಯಗಳಿಗೆ ಹಿಂದೇಟು ಹಾಕಿಕೊಂಡಯು ಬಂದಿದೆ. ಆದರೆ, ಇತ್ತೀಚೆಗೆ, ಸಾರ್ವಜನಿಕ ವಲಯದ ಬ್ಯಾಂಕುಗಳ ವಸೂಲಾಗದ ಸಾಲಗಳು ಏರುತ್ತಿರುವ ಹಿನ್ನೆಲೆಯಲ್ಲಿ ಈ ಒತ್ತಾಯ ಅದೆಷ್ಟು ತೀವ್ರಗೊಂಡಿದೆ ಎಂದರೆ, 2019ರ ಚುನಾವಣೆಗಳಲ್ಲಿ, ಎಲ್ಲಾ ರಾಜಕೀಯ ಪಕ್ಷಗಳೂ ಬ್ಯಾಂಕ್‌ಗಳ ಖಾಸಗೀಕರಣವನ್ನು ತಮ್ಮ ಅಜೆಂಡಾದಲ್ಲಿ ಸೇರಿಸಿಕೊಳ್ಳುವಂತೆ ನೀತಿ ಆಯೋಗದ ಮಾಜಿ ಉಪಾಧ್ಯಕ್ಷರೊಬ್ಬರು ಕರೆ ಕೊಡುವವರೆಗೂ ಹೋಗಿದೆ.

ಈ ಖಾಸಗೀಕರಣದ ಸಮರ್ಥಕರ ದುರದೃಷ್ಟವೋ ಏನೋ, ಅವರು ಖಾಸಗೀಕರಣದ ಪರವಾಗಿ ಯಾವ ನೆಲೆಯಲ್ಲಿ ತಮ್ಮ ವಾದ ಮಂಡಿಸಿದ್ದರೋ, ಅದೇ ನೆಲೆಯಲ್ಲಿಯೇ, ಅವರ ವಾದಗಳು ವಿಚಾರಹೀನವಾಗಿವೆ ಎಂಬ ಅಂಶವನ್ನು ವಾಸ್ತವಿಕ ಜೀವನದ ಅನುಭವಗಳು ತೋರಿಸುತ್ತವೆ. ಸಮರ್ಸ್-ಗೀತ್ನರ್ ಮತ್ತಿತರರು ಒತ್ತಾಯಿಸುವ ಖಾಸಗೀಕರಣ ಅದೆಷ್ಟು ಅರ್ಥವಿಲ್ಲದ್ದು ಎಂಬುದನ್ನು ಅಮೇರಿಕಾದಲ್ಲಿ ಉಂಟಾಗಿದ್ದ 2008ರ ಆರ್ಥಿಕ ಬಿಕ್ಕಟ್ಟು ಸಾಬೀತುಮಾಡಿದೆ. ಈ ಬಿಕ್ಕಟ್ಟಿಗೆ ಸರಿಸುಮಾರು ಎಲ್ಲಾ ಬಂಡವಾಳಶಾಹಿ ದೇಶಗಳೂ ಬಲಿಯಾದವು. ಆದರೆ, ಭಾರತದಲ್ಲಿ, ಖಾಸಗಿ ವಲಯದ ಐಸಿಐಸಿಐ ಬ್ಯಾಂಕ್ ಹೊರತುಪಡಿಸಿದರೆ, ಇಡೀ ಬ್ಯಾಂಕಿಂಗ್ ವಲಯ ಬಿಕ್ಕಟ್ಟಿನಿಂದ ತಪ್ಪಿಸಿಕೊಂಡಿತು. ಏಕೆಂದರೆ, ಈ ಬ್ಯಾಂಕ್‌ಗಳು ಪಾರಂಪರಿಕ ವ್ಯವಹಾರಗಳಿಗೆ ಮಾತ್ರ ಸೀಮಿತವಾಗಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ, ಭಾರತೀಯ ಬ್ಯಾಂಕುಗಳು, ಅತೀ ಲಾಭದ ಜೂಜುಕೋರ ಉತ್ಪನ್ನಗಳು (ಇವುಗಳನ್ನು ನಂಜಿನ ಆಸ್ತಿಗಳೆಂದು ಕರೆಯುತ್ತಾರೆ) ಮತ್ತು ವಿದೇಶೀ ಡೆರಿವೇಟಿವ್‌ಗಳ ಮೇಲೆ ಹೂಡಿಕೆ ಮಾಡಿರಲಿಲ್ಲ. ಹಾಗಾಗಿ, ಅವು ಬಚಾವಾದವು.

ಖಾಸಗಿ ಬ್ಯಾಂಕ್‌ಗಳ ಷೇರುದಾರರು ಜಾಗೃತರು. ಬ್ಯಾಂಕ್ ಆಡಳಿತವು ಅವರಿಗೆ ಉತ್ತರದಾಯೀ. ಹಾಗಾಗಿ, ಖಾಸಗಿ ಬ್ಯಾಂಕ್‌ಗಳು, ವಸೂಲಾಗದ ಸಾಲಗಳು (ಎನ್‌ಪಿಎ) ಏರಿಕೆಯಾಗದಂತೆ ನೋಡಿಕೊಳ್ಳುತ್ತವೆ ಎಂಬ ಅಭಿಪ್ರಾಯ ಪ್ರಚಲಿತವಿದೆ. ಆದರೆ, ಐಸಿಐಸಿಐ ಬ್ಯಾಂಕ್‌ನಲ್ಲಿ ಇತ್ತೀಚೆಗೆ ನಡೆದ ಒಂದು ಪ್ರಕರಣವು ಈ ಅಭಿಪ್ರಾಯವೂ ಪೊಳ್ಳು ಎಂಬುದನ್ನು ತೋರಿಸುತ್ತದೆ. ಈ ಬ್ಯಾಂಕಿನ ಪ್ರಧಾನ ಅಧಿಕಾರಿ (ಚಂದಾ ಕೊಚ್ಚರ್), ತನ್ನ ಗಂಡನ ಉದ್ದಿಮೆಯೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದ ವಿಡಿಯೊಕಾನ್ ಗುಂಪಿಗೆ ಭಾರಿ ಮೊತ್ತದ ಸಾಲ ಕೊಟ್ಟಿದ್ದರು. ಈಗ, ಇದೊಂದು ವಸೂಲಾಗದ ಸಾಲ. ಈ ಬಗ್ಗೆ ವಿಚಾರಣೆ ನಡೆಯುತ್ತಿರುವಾಗ, ಜಾಗೃತ ಷೇರುದಾರರಿಗೆ ಉತ್ತರದಾಯೀ ಎಂದು ಹೇಳಲಾದ ಈ ಬ್ಯಾಂಕ್ ತನ್ನ ಅಧಿಕಾರಿಗೆ ರಜೆ ಮೇಲಿರುವಂತೆಯೂ ಸೂಚಿಸದಿರುವುದು ಒಂದು ವಿಡಂಬನೆಯೇ ಸರಿ.

ರಾಷ್ಟ್ರೀಕರಣವನ್ನು ರದ್ದುಪಡಿಸಲು ಹಲವಾರು ವರ್ಷಗಳಿಂದಲೂ ನಡೆದ ಪ್ರಯತ್ನಗಳು ವಿಫಲವಾಗಿದ್ದರೂ, ಕೆಲವು ಕಲಬೆರಕೆ ಸಮರ್ಥನೆಗಳ ಮೂಲಕ, ತೆವಳುವ ಖಾಸಗೀಕರಣ (creeping privatisation) ಪ್ರಯತ್ನಗಳು ಫಲಕಾರಿಯಾಗಿವೆ.

ತೆವಳುವ ಖಾಸಗೀಕರಣ

ಬಾಸೆಲ್-3 ಶಿಫಾರಸುಗಳ ಪ್ರಕಾರ ಬ್ಯಾಂಕ್‌ಗಳ ಬಂಡವಾಳವನ್ನು ಅಗತ್ಯಾನುಸಾರ ಹೆಚ್ಚಿಸಬೇಕಾಗುತ್ತದೆ. ಅದಕ್ಕೆ ಬೇಕಾಗುಷ್ಟು ಹಣ ಸರ್ಕಾರದ ಬಳಿ ಇರುವುದಿಲ್ಲ. ಒಂದು ವೇಳೆ ಇದ್ದರೂ, ಅದನ್ನು ಇಂತಹ ಉದ್ದೇಶಗಳಿಗೆ ಬಳಸಬಾರದು ಎಂಬ ಕಾರಣದಿಂದ, ಖಾಸಗಿ ವಲಯದವರಿಗೆ ಷೇರು ನೀಡಿಕೆಯ ಮೂಲಕ ಬಂಡವಾಳದ ಹಣವನ್ನು ಹೊಂದಿಸಿಕೊಳ್ಳಲಾಗಿದೆ. ಹಾಗಾಗಿ, ಆರಂಭದಲ್ಲಿ ಸರ್ಕಾರ ಹೊಂದಿದ್ದ ಶೇ.100 ಷೇರುಗಳ ಒಡೆತನದ ಪ್ರಮಾಣ ಈಗ ತುಂಬಾ ಕೆಳಗಿದೆ.

ಈ ರೀತಿಯಾಗಿ ಬ್ಯಾಂಕ್‌ಗಳನ್ನು ಖಾಸಗಿ ಒಡೆತನಕ್ಕೆ ಒಳಪಡಿಸಿದ ಸಮರ್ಥನೆಗಳು, ಅನೇಕ ಕಾರಣಗಳಿಂದಾಗಿ, ಅಪ್ಪಟವಾಗಿಲ್ಲ. ಮೊದಲನೆಯದು, ಬ್ಯಾಂಕ್‌ಗಳ ಬಂಡವಾಳ ಹೆಚ್ಚಿಸುವ ಅಗತ್ಯ ಖಾಸಗಿ ವಲಯದ ಬ್ಯಾಂಕ್‌ಗಳಿಗೆ ಇದೆ. ಸಾರ್ವಜನಿಕ ಒಡೆತನದ ಬ್ಯಾಂಕ್‌ಗಳಿಗೆ ಅಂತಹ ಅಗತ್ಯವಿಲ್ಲ. ಏಕೆಂದರೆ, ಸಾರ್ವಜನಿಕ ಬ್ಯಾಂಕ್ ಮುಳುಗುವ ಪರಿಸ್ಥಿತಿಗೆ ತಲುಪಿದರೂ, ಸರ್ಕಾರ ಅದನ್ನು ನಿಭಾಯಿಸುತ್ತದೆ ಎಂಬ ಭರವಸೆ ಎಲ್ಲರಿಗೂ ಇದೆ. ಈ ಬಗ್ಗೆ ಒಂದು ಜೀವಂತ ಉದಾಹರಣೆ ನಮ್ಮ ಮುಂದಿದೆ. ಇತ್ತೀಚೆಗೆ, ನಿರವ್ ಮೋದಿ ಎಂಬ ವಜ್ರ ವ್ಯಾಪಾರಿಯು ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ 13,000 ಕೋಟಿ ರೂ ವಂಚಿಸಿ ದೇಶದಿಂದ ಪರಾರಿಯಾದಾಗ, ಆ ಬ್ಯಾಂಕಿನಲ್ಲಿ ಹಣ ಇಟ್ಟ ಠೇವಣಿದಾರರು, ಬ್ಯಾಂಕ್ ಮುಳುಗಬಹುದೆಂಬ ಗಾಬರಿಯಲ್ಲಿ ಠೇವಣಿ ಹಿಂತೆಗೆಯಲು ನಾ ಮುಂದು ತಾ ಮುಂದು ಎಂದು ಬ್ಯಾಂಕಿಗೆ ಓಡಲಿಲ್ಲ. ಏಕೆಂದರೆ, ಅವರಿಗೆ ಸರ್ಕಾರಿ ಒಡೆತನದ ಮೇಲೆ ನಂಬಿಕೆ ಇದೆ. ಹಾಗಾಗಿ, ಬಾಸೆಲ್ ಶಿಫಾರಸುಗಳು ಸಾರ್ವಜನಿಕ ಒಡೆತನದ ಬ್ಯಾಂಕ್‌ಗಳಿಗೆ ಪ್ರಸ್ತುತವಾಗುವುದಿಲ್ಲ.

ಎರಡನೆಯದು, ಸಾರ್ವಜನಿಕ ಬ್ಯಾಂಕ್‌ಗಳ ಬಂಡವಾಳ ಹೆಚ್ಚಿಸಲು ಬೇಕಾಗುವ ಹಣ ಸರ್ಕಾರದ ಬಜೆಟ್‌ನಿಂದಲೇ ಬರಬೇಕೆಂದಿಲ್ಲ. ಮೇಲಾಗಿ, ಬಂಡವಾಳದ ಹಣವನ್ನು ಆಪತ್ಕಾಲದಲ್ಲಿ ಬಳಸಬಹುದೇ ವಿನಹ ದೈನಂದಿನ ವ್ಯವಹಾರಗಳಿಗಲ್ಲ. ಆದ್ದರಿಂದ, ಅದನ್ನು ರಿಸರ್ವ್ ಬ್ಯಾಂಕಿನಿಂದ ಸಾಲ ಪಡೆದರೆ, ಅದು ಅಲ್ಲಿಯೇ ಇರುತ್ತದೆ. ಇದು ದಾಖಲೆ ಪುಸ್ತಕದ ಸಾಲ ಮಾತ್ರವೇ ಆಗಿರುತ್ತದೆ. ಬಜೆಟ್‌ನಲ್ಲಿ ಅದು ಕೊರತೆಯ ಅಂಶವಾಗಿ ಕಾಣಿಸಿಕೊಳ್ಳುತ್ತೆ, ಅಷ್ಟೇ. ಅದರಿಂದಾಗಿ, ಅರ್ಥವ್ಯವಸ್ಥೆಯ ಮೇಲೆ ಯಾವುದೇ ಅಡ್ಡ ಪರಿಣಾಮ ಉಂಟಾಗುವುದಿಲ್ಲ. ಹಾಗಾಗಿ, ಸಾರ್ವಜನಿಕ ಬ್ಯಾಂಕ್‌ಗಳ ಬಂಡವಾಳ ಹೆಚ್ಚಿಸುವ ಸಲುವಾಗಿ ಬಂಡವಾಳ ಮಾರುಕಟ್ಟೆಗೆ ಹೋಗುವ ಅವಶ್ಯಕತೆ ನಿಜವಾದದ್ದಲ್ಲ.

ಇಂತಹ ಕಲಬೆರಕೆ ಸಮರ್ಥನೆಗಳ ಮೂಲಕ ತೆವಳಿಕೊಂಡು ಬರುವ ಖಾಸಗೀಕರಣ ಪ್ರಕ್ರಿಯೆ ನಡೆದಿದೆ. ಅಂತಾರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಇಂತಹ ತೆವಳುವ ಖಾಸಗೀಕರಣ ಹಿಡಿಸುವುದಿಲ್ಲ. ಮುಚ್ಚುಮರೆಯಿಲ್ಲದ, ಬಹಿರಂಗ ಖಾಸಗೀಕರಣವನ್ನು ಅದು ಬಯಸುತ್ತದೆ. ಆ ಮೂಲಕ, ತನ್ನ ಕಾರ್ಯಾಚರಣೆಗೆ ನಿರ್ಣಾಯಕವಾಗುವ ಇಡೀ ಹಣಕಾಸು ಸಾಮ್ರಾಜ್ಯವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು, ಸಾಮಾಜಿಕ ಹಿತಾಸಕ್ತಿಗಳ ನಿರ್ವಹಣೆಯನ್ನು ತನ್ನಷ್ಟು ಸಮರ್ಥವಾಗಿ ಪ್ರಭುತ್ವ ಮಾಡಲಾರದು ಎಂಬ ಸೈದ್ಧಾಂತಿಕ ಅಂಶವನ್ನು ಸಾರಲು ಅದು ಬಯಸುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅದು ಪ್ರಭುತ್ವದ ಮೇಲೆ ಸವಾರಿ ಮಾಡಲು ಬಯಸುತ್ತದೆ. ಈ ಉದ್ದೇಶ ಸಾಧನೆಗಾಗಿ, ಅದು, ಸಾರ್ವಜನಿಕ ಬ್ಯಾಂಕ್‌ಗಳು ಎದುರಿಸುತ್ತಿರುವ ವಸೂಲಾಗದ ಸಾಲಗಳ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಬಳಸಿಕೊಳ್ಳುತ್ತಿದೆ.

ಈ ಬಗ್ಗೆ, ಎರಡು ಅಂಶಗಳನ್ನು ಗಮನಿಸಬಹುದು. ಮೊದಲನೆಯದು, "ಮೂಲ ಸೌಕರ್ಯ" ಅಭಿವೃದ್ಧಿಯ ಹೆಸರಿನಲ್ಲಿ ಖಾಸಗಿ ವಲಯದ ಕಂಪೆನಿಗಳಿಗೆ ಬೃಹತ್ ಪ್ರಮಾಣದ ಸಾಲ ಕೊಡುವಂತೆ ಸಾರ್ವಜನಿಕ ಬ್ಯಾಂಕ್‌ಗಳಿಗೆ ಸರ್ಕಾರ ಒತ್ತಡ ಹೇರಿದೆ. ಸಾಲದ ಹಣವನ್ನು ಈ ಕಂಪೆನಿಗಳು ಲೂಟಿ ಮಾಡಿವೆ. ವಸೂಲಾಗದ ಸಾಲ ಬಿಕ್ಕಟ್ಟಿಗೆ ಇದೇ ಮುಖ್ಯವಾದ ಕಾರಣ.

ಎನ್‌ಪಿಎ ಸಮಸ್ಯೆ ಸೃಷ್ಟಿಸಿದ ಅಸಂಬದ್ಧತೆ

ಖಾಸಗಿ ಕಂಪೆನಿಗಳಿಗೆ ಬೃಹತ್ ಪ್ರಮಾಣದ ಸಾಲ ಕೊಡುವಂತೆ ಬ್ಯಾಂಕ್‌ಗಳ ಮೇಲೆ ಸರ್ಕಾರ ಒತ್ತಡ ಹೇರಿದ್ದ ಕಾರಣವೂ ಅಸಂಬದ್ಧವಾಗಿದೆ. ಅದು ಹೀಗಿದೆ: ವಿತ್ತೀಯ ಕೊರತೆ ಮಿತಿ ಮೀರಿ ಏರುವ ಕಾರಣದಿಂದಾಗಿ ಸರ್ಕಾರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುತ್ತಿಲ್ಲ. ಖಾಸಗಿ ವಲಯ ಅದನ್ನು ಮಾಡುತ್ತದೆ. ಅವರಿಗೆ ಬ್ಯಾಂಕ್ ಸಾಲ ಕೊಡಲೇಬೇಕಾಗುತ್ತದೆ. ಇದು ಸರ್ಕಾರದ ವಾದ. ಆದರೆ, ಒಂದು ವೇಳೆ, ಈ ಕೆಲಸವನ್ನು ಸರ್ಕಾರವೇ ಮಾಡುವುದಾದರೆ, ಬ್ಯಾಂಕ್‌ಗಳಿಂದ ಸಾಲ ಪಡೆಯಲೇಬೇಕು. ವಿತ್ತೀಯ ಕೊರತೆಯನ್ನು ನೀಗಿಸಿಕೊಳ್ಳಲೂ ಸರ್ಕಾರ ಬ್ಯಾಂಕ್‌ಗಳಿಂದ ಸಾಲ ಪಡೆಯುತ್ತದೆ. ಇದು ವಸ್ತು ಸ್ಥಿತಿ. ಆದರೆ, ಖಾಸಗೀಕರಣದ ಸಮರ್ಥಕರ ವಾದದ ಪ್ರಕಾರ, ಮೂಲ ಸೌಕರ್ಯ ಅಭಿವೃದ್ಧಿಗಾಗಿ ಸರ್ಕಾರ ಸಾಲ ಮಾಡಿದರೆ ಅರ್ಥವ್ಯವಸ್ಥೆಗೆ ಕೇಡಾಗುತ್ತದೆ, ಅದೇ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಖಾಸಗಿ ಕಂಪೆನಿಗಳು ಸಾಲ ಮಾಡಿದರೆ ಅರ್ಥವ್ಯವಸ್ಥೆಗೆ ಒಳಿತಾಗುತ್ತದೆ. ಇಂತಹ ಪ್ರತಿಪಾದನೆಗಳು ಸಂಪೂರ್ಣವಾಗಿ ಅಸಂಬದ್ಧವಾಗಿವೆ.

ಒಟ್ಟಿನಲ್ಲಿ, ಸರ್ಕಾರ ಬ್ಯಾಂಕ್‌ಗಳ ಮೇಲೆ ಒತ್ತಡ ಹೇರಿ, ಖಾಸಗಿ ವಲಯದ ಕಂಪೆನಿಗಳಿಗೆ ಲಕ್ಷಾಂತರ ಕೋಟಿ ರೂ ಸಾಲ ಸಿಗುವಂತೆ ನೋಡಿಕೊಂಡಿದೆ. ಆ ಹಣದ ಬಹುಪಾಲನ್ನು ಸುಮಾರು ಎಲ್ಲಾ ಕಂಪೆನಿಗಳೂ ಲಪಟಾಯಿಸಿವೆ. ಬಂಡವಾಳದ ಶೇಖರಣೆಯಲ್ಲಿ ಇದೊಂದು ವಿನೂತನ ಕ್ರಮವೆಂದೇ ಹೇಳಬಹುದು. 8-9 ಲಕ್ಷ ಕೋಟಿ ರೂ ವಸೂಲಾಗದ ಸಾಲಗಳಲ್ಲಿ, ಬೆಳೆಣಿಕೆಯಷ್ಟು ಕಂಪೆನಿಗಳ ಬಾಕಿ ಶೇ. 75ರಷ್ಟಿದೆ. ಈ ಕಂಪೆನಿಗಳು ಪಡೆದ ಸಾಲದಲ್ಲಿ ಕಡಿಮೆ ಅಂದರೂ ಶೇ. 75ರಷ್ಟು ಹಣವನ್ನು ಸಲೀಸಾಗಿ ಲಪಟಾಯಿಸಿವೆ. ಅಂದರೆ, ಬೆರಳೆಣಿಕೆಯ ಈ ಕಂಪೆನಿಗಳು ನುಂಗಿ ನೀರು ಕುಡಿದ ಹಣದ ಮೊತ್ತವೇ ವಸೂಲಾಗದ ಒಟ್ಟು ಸಾಲಗಳ ಶೇ.56.25ರಷ್ಟಾಗುತ್ತದೆ.

ನಾಚಿಕೆ ಇಲ್ಲದ ಉದ್ಧಟರು

ಬ್ಯಾಂಕ್ ಖಾಸಗೀಕರಣದ ಸಮರ್ಥಕರು ನಾಚಿಕೆ ಇಲ್ಲದ ಉದ್ಧಟರೆಂದು ಹೇಳಬಹುದು. ಏಕೆಂದರೆ, (ಈ ಲೂಟಿಯಿಂದಾಗಿ) ಸಂಪೂರ್ಣವಾಗಿ ಹದಗೆಟ್ಟಿರುವ ಬ್ಯಾಂಕ್‌ಗಳನ್ನು, ಅವರ ಪ್ರಕಾರ, ಖಾಸಗೀಕರಣಗೊಳಿಸಬೇಕು. ಅಂದರೆ, ಒಡೆತನದ ವರ್ಗಾವಣೆ. ಯಾರಿಗೆ? ಮತ್ಯಾರಿಗೆ, ಇದೇ ಲೂಟಿಕೋರರಿಗೆ! ಇದಕ್ಕೆ ಪ್ರತಿಯಾಗಿ ಈಗ ಮಾಡಬೇಕಿರುವುದು ಏನೆಂದರೆ, ಖಾಸಗೀಕರಣವಲ್ಲ. ಬ್ಯಾಂಕ್‌ಗಳು ಸರಕಾರದ ಒಡೆತನದಲ್ಲೇ ಮುಂದುವರಿಯಬೇಕು ಎನ್ನುವ ಅಂಶದ ಸಮಂಜಸತೆ, 1969ರಲ್ಲಿ ರಾಷ್ಟ್ರೀಕರಣ ಮಾಡಿದಾಗ ಇದ್ದಷ್ಟು ಈಗಲೂ ಇದೆ. ಅದರ ಜೊತೆಯಲ್ಲಿ, ಈ ಲೂಟಿ ಹೊಡೆದವರಿಗೆ ತಪ್ಪಿಗೆ ತಕ್ಕ ಶಿಕ್ಷೆ ಕೊಡಬೇಕು.

ಈ ಲೂಟಿಕೋರರನ್ನು ಶಿಕ್ಷಿಸುವ ಮಾತು ಒತ್ತಟ್ಟಿಗಿರಲಿ, ಅವರಲ್ಲಿ ದೊಡ್ಡ ದೊಡ್ಡ ಬಾಕಿದಾರರ ಹೆಸರು ಬಹಿರಂಗಪಡಿಸಲೂ ಸರ್ಕಾರ ಹಿಂಜರಿಯುತ್ತಿರುವುದು ಆಶ್ಚರ್ಯಕರವಾಗಿದೆ. ಅಷ್ಟೇ ಅಲ್ಲ, ಕೆಲವು ಉದ್ದೇಶಪೂರ್ವಕ ಬಾಕಿದಾರರ ಸಾಲಗಳನ್ನು ಮನ್ನಾ ಮಾಡಲಾಗಿದೆ. ಅವರ ಹೆಸರುಗಳನ್ನೂ ಬಹಿರಂಗಪಡಿಸಿಲ್ಲ. ಹಾಗಾಗಿ, ಈ ಬಾಕಿದಾರರು, ಮತ್ತೊಂದು ಬ್ಯಾಂಕಿನಿಂದ ಮತ್ತೊಂದು ಸಾಲ ಪಡೆಯುತ್ತಾರೆ. ಅವರು ತಮ್ಮ ಅಸಹಾಯಕತೆಯನ್ನು ತೋಡಿಕೊಂಡಾಗ ಕೆಲವು ಬ್ಯಾಂಕ್‌ಗಳು ಸಾಲದ ಮರುಪಾವತಿಯನ್ನು ಮುಂದೂಡುತ್ತವೆ.

ಇಂತಹ ಪ್ರಕರಣಗಳಲ್ಲಿ ಕ್ರಮ ಜರುಗಿಸುವಾಗ, ಸಾಲ ಪಡೆದ ಸಂಸ್ಥೆಯನ್ನು ಮಾತ್ರ ಪರಿಗಣಿಸಲಾಗುತ್ತದೆ. ಆದರೆ, ಉದ್ದೇಶಪೂರ್ವಕವಾಗಿ ಬಾಕಿ ಉಳಿಸಿಕೊಂಡಿರುವ ಮತ್ತು ಲೂಟಿ ಹೊಡೆದಿರುವ ಆಂಶಗಳು ತನಿಖೆಯಲ್ಲಿ ಕಂಡುಬಂದಾಗ, ಅಂತಹ ಸಂಸ್ಥೆಯ ಸ್ಥಾಪಕರ ಆಸ್ತಿ-ಪಾಸ್ತಿಗಳನ್ನು ಜಪ್ತಿ ಮಾಡಬೇಕು ಮತ್ತು ಆ ಸ್ಥಾಪಕರು ತಮ್ಮ ಇತರೆ ವಹಿವಾಟಿನಿಂದ ಕಟ್ಟಿಕೊಂಡಿರುವ ಸಾಮ್ರಾಜ್ಯವನ್ನು ಇಡಿಯಾಗಿ ಮುಟ್ಟುಗೋಲು ಹಾಕಿಕೊಳ್ಳಬೇಕು. ಇಂತಹ ಒಂದು ಸರಳ ಮತ್ತು ಯಥೋಚಿತ ಕ್ರಮವು "ಕಾರ್ಪೊರೇಟ್ ಲೂಟಿ"ಯನ್ನು ತಡೆಯಬಲ್ಲದು ಮತ್ತು ಬಾಕಿ ಉಳಿದಿರುವ ಸಾಲಗಳಲ್ಲಿ ಸಾಕಷ್ಟು ವಸೂಲಿಯನ್ನೂ ಮಾಡಬಲ್ಲದು.

ಸಾರ್ವಜನಿಕ ಬ್ಯಾಂಕ್‌ಗಳನ್ನು ಉಳಿಸಲು ಕಾಲ ಈಗಾಗಲೇ ಮೀರಿಲ್ಲವೇ ಎಂದು ಕೇಳಬಹುದು. "ಇಲ್ಲ" ಎಂಬುದೇ ಸರಳ ಉತ್ತರ. ಏಕೆಂದರೆ, ಹೆಚ್ಚಿನಂಶ, ಕಾರ್ಪೊರೇಟ್ ಲೂಟಿಯಿಂದಾಗಿಯೇ ಎನ್‌ಪಿಎ ಬಿಕ್ಕಟ್ಟು ಉಂಟಾಗಿದೆ. ಆ ಬಿಕ್ಕಟ್ಟನ್ನೇ ದೊಡ್ಡದು ಮಾಡಿ ಬ್ಯಾಂಕ್‌ಗಳನ್ನು ಖಾಸಗಿ ಒಡೆತನಕ್ಕೆ ಒಪ್ಪಿಸುವ ಹುನ್ನಾರ ನಡೆದಿದೆ.

ಹೀಗೆ ಹೇಳಲು ಕಾರಣವಿದೆ. ನರೇಂದ್ರ ಮೋದಿಯವರು ನೋಟು ರದ್ದತಿಯಂತಹ ಒಂದು ಅಸಂಬದ್ಧ ಕ್ರಮ ಕೈಗೊಂಡಾಗ, ಜನ ತಮ್ಮಲ್ಲಿದ್ದ ನಗದು ಹಣವನ್ನು ಜಮೆ ಮಾಡಿದಾಗ, ಬ್ಯಾಂಕುಗಳಲ್ಲಿ ಹಣ ತುಂಬಿ ತುಳುಕುತ್ತಿತ್ತು. ಆ ಹಣ ಹೆಚ್ಚಿನ ಸಂಖ್ಯೆಯ ಸಾಲ ನೀಡಿಕೆಗೆ ಬಳಕೆಯಾಗದೆ ಸರಕಾರದ ಬಾಂಡುಗಳಲ್ಲಿ ಹೂಡಿಕೆಯಾಯ್ತು. ಸರಕಾರ ಆ ಹಣವನ್ನು ಖರ್ಚು ಮಾಡಲೇ ಇಲ್ಲ. ಏಕೆಂದರೆ, ಅದರಿಂದ ಉಂಟಾಗುವ ವಿತ್ತೀಯ ಕೊರತೆಯು ಹಣಕಾಸು ಬಂಡವಾಳವನ್ನು ಸಿಟ್ಟಿಗೇಳಿಸುತ್ತಿತ್ತು.

ಹಾಗಾಗಿ, ಸಾಲ ಸಿಗದಿರುವ ಪರಿಸ್ಥಿತಿಗೆ ಹಣದ ಕೊರತೆ ಕಾರಣವಲ್ಲ, ಬದಲಿಗೆ, ಹಣ ಲಭ್ಯವಿದ್ದರೂ ಸಾಲ ಪಡೆಯುವ ಅರ್ಹತೆಯುಳ್ಳವರ ಕೊರತೆ ಇದೆ ಎಂಬುದು ನೋಟು ರದ್ದತಿ ಪ್ರಯೋಗದ ಮೂಲಕ ಸಾಬೀತಾಗಿದೆ. ಆದ್ದರಿಂದ, ಸಾಲ ಲಭ್ಯತೆಗೂ ಮತ್ತು ಎನ್‌ಪಿಎ ಸಮಸ್ಯೆಗೂ ತಳುಕು ಹಾಕುವುದು ಸರಿಯಲ್ಲ. ಸಧ್ಯದ ಪರಿಸ್ಥಿತಿಯಲ್ಲಿ, ಸರ್ಕಾರವು ರಿಸರ್ವ್ ಬ್ಯಾಂಕಿನಿಂದ ಸಾಲ ಪಡೆದು, ಸಾರ್ವಜನಿಕ ಬ್ಯಾಂಕ್‌ಗಳ ಬಂಡವಾಳ ಹೆಚ್ಚಿಸಬಹುದು. ಇದು ದಾಖಲೆ ಪುಸ್ತಕದಲ್ಲಿ ಮಾತ್ರ ನಮೂದಾಗುವ ಸಾಲ. ಈ ಸಾಲದಿಂದ ಅರ್ಥವ್ಯವಸ್ಥೆಯ ಮೇಲೆ ಯಾವುದೇ ಅಡ್ಡ ಪರಿಣಾಮ ಆಗುವುದಿಲ್ಲ.

ಈ ಎಲ್ಲ ವಿವರಗಳಿಂದ ಸ್ಪಷ್ಟವಾಗುವ ಅಂಶವೆಂದರೆ, ಎನ್‌ಪಿಎ ಕಾರಣದಿಂದ, ಸಾರ್ವಜನಿಕ ಬ್ಯಾಂಕ್‌ಗಳ ಬಂಡವಾಳ ಹೆಚ್ಚಿಸುವ ಸಲುವಾಗಿ ಖಾಸಗಿ ವಲಯಕ್ಕೆ ಷೇರುಗಳನ್ನು ಮಾರುವ ಅವಶ್ಯಕತೆ ಇಲ್ಲ. ಎನ್‌ಪಿಎ ಕಾರಣದಿಂದಾಗಿ, ಅನ್ಯ ಮಾರ್ಗವೇ ಇಲ್ಲದೆ, ಸಾರ್ವಜನಿಕ ಬ್ಯಾಂಕ್‌ಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ ಎಂದು ನಂಬುವಂತೆ ಮಾಡಿ ಜನರಿಗೆ ಟೋಪಿ ಹಾಕಲಾಗುತ್ತಿದೆ. ಈ ಪೊಳ್ಳುತನವನ್ನು ಬಯಲು ಮಾಡಬೇಕಿದೆ. ●

ರಾಜ್ಯಗಳ ಸುತ್ತ

ತ್ರಿಪುರಾ ಗುಡ್ಡಗಾಡು ಪ್ರದೇಶಗಳಲ್ಲಿ ಉದ್ಯೋಗ, ಆಹಾರವಿಲ್ಲದ ಹತಾಶ ಪರಿಸ್ಥಿತಿ

ಎಡರಂಗ ಶಾಸಕರ ಭೇಟಿಗೆ ಬಿಜೆಪಿ-ಐಪಿಎಫ್‌ಟಿ ಅಡ್ಡಿ-ಸಿಪಿಐ(ಎಂ) ಖಂಡನೆ

ತ್ರಿಪುರಾದಲ್ಲಿ ಬಿಜೆಪಿ-ಐಪಿಎಫ್‌ಟಿ ಸರಕಾರ ಬಂದ ಮೂರು ತಿಂಗಳಲ್ಲೇ ಆ ರಾಜ್ಯದ ಧಲಾಯ್ ಜಿಲ್ಲೆಯ ಗುಡ್ಡಗಾಡು ಪ್ರದೇಶದಲ್ಲಿ ಹತಾಶ ಪರಿಸ್ಥಿತಿ ಉಂಟಾಗಿದೆ. ಉದ್ಯೋಗ ನಿರ್ಮಿಸುವ ಕಾಮಗಾರಿಗಳು ಸುಮಾರಾಗಿ ನಿಂತೇ ಹೋಗಿರುವುದರಿಂದಾಗಿ ಅಲ್ಲಿ ಬರ ಪರಿಸ್ಥಿತಿಯನ್ನು ಹೋಲುವ ಸನ್ನಿವೇಶ ಉಂಟಾಗಿದೆ. ಜನಗಳು ಬದುಕುಳಿಯಲು ಏನಾದರೂ ಸಿಗಬಹುದು ಎಂದು ನಿರ್ವಾಹವಿಲ್ಲದೆ ಗಡಿ ದಾಟಿ ಹೋಗಿ ಬಾಂಗ್ಲಾದೇಶ್‌ನ ಚಿತ್ತಗಾಂಗ್ ಪರ್ವತ ಪ್ರದೇಶದಲ್ಲಿ 20-30 ಕಿ.ಮೀ. ಅಲೆದಾಡಬೇಕಾದ ಪರಿಸ್ಥಿತಿ ಉಂಟಾಗಿದೆ. ಕೆಲವರು ಗಂಧಕಿ ಎಂಬ ಔಷಧಿ ಸಸ್ಯವನ್ನು ಸಂಗ್ರಹಿಸಿಕೊಂಡು ಬರಲು ಪ್ರಯತ್ನಿಸುತ್ತಿದ್ದಾರೆ. ಬಿಎಸ್‌ಎಫ್‌ನವರಿಂದ ತಪ್ಪಿಸಿಕೊಳ್ಳಲು ಇವನ್ನೆಲ್ಲ ರಾತ್ರಿ ವೇಳೆಯಲ್ಲೇ ಅವರು ಮಾಡಬೇಕಾಗಿದೆ. ಬಿಎಸ್‌ಎಫ್‌ನವರು ಕೂಡ ಈಗಿರುವ ಸ್ಥಿತಿಯಲ್ಲಿ ತಮ್ಮ ಅಸಹಾಯಕತೆಯನ್ನು ತೋರಿಸುತ್ತಿದ್ದಾರೆ.

ಈ ಔಷಧಿ ಸಸ್ಯ ಬಹಳ ಬೆಲೆಬಾಳುವಂತದ್ದು. ಕೆ.ಜಿ.ಗೆ 1200 ರೂ.ನಷ್ಟು. ಆದಸ್ಸಿದನ್ನು ಬಹಳ ಕಷ್ಟಪಟ್ಟು ಸಂಗ್ರಹಿಸುವ ಈ ಜನ ಹೊಟ್ಟೆಪಾಡಿಗಾಗಿ 17ರಿಂದ 20 ರೂ.ಗೆ ಮಾರಿ ಜೀವನ ನಡೆಸಬೇಕಾಗಿದೆ ಎಂದು ವರದಿಯಾಗಿದೆ. ಏಕೆಂದರೆ ಮನರೇಗದ ಅಡಿಯಲ್ಲಿ ಅವರಿಗೆ 5ರಿಂದ 7 ದಿನಗಳು ಕೆಲಸ ಮಾತ್ರ ದೊರೆಯುತ್ತಿದೆ.

ಆದರೆ ಸರಕಾರ ಇಂತಹ ಪರಿಸ್ಥಿತಿಯೇನೂ ಇಲ್ಲ ಎಂದು ಹೇಳುತ್ತಿದೆ. ಅಲ್ಲಿನ ಚುನಾಯಿತ ಪಂಚಾಯತುಗಳ ಮತ್ತು ಸ್ವಾಯತ್ತ ಜಿಲ್ಲಾ ಮಂಡಳಿ ಸದಸ್ಯರುಗಳು ತಮ್ಮ ಪ್ರಜಾಪ್ರಭುತ್ವ ಹಕ್ಕನ್ನು ಚಲಾಯಿಸದಂತೆ ಮಾಡುತ್ತಿದೆ.

ಇದನ್ನು ತಿಳಿದ ಕಿಸಾನ್ ಸಭಾ ಮತ್ತು ಗಣಮುಕ್ತಿ



ಪರಿಷದ್‌ನ ಮುಖಂಡರು ಈ ಪ್ರದೇಶಕ್ಕೆ ಭೇಟಿ ನೀಡಿ ಜನಗಳ ಅಸಹಾಯಕ ಪರಿಸ್ಥಿತಿಯನ್ನು ಕಂಡು ಬಂದ ಮೇಲೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಅಲ್ಲಿನ ಹತಾಶ ಪರಿಸ್ಥಿತಿಗಳ ಸಾಕ್ಷ್ಯಾಧಾರಗಳೊಂದಿಗೆ ಮನವಿಯೊಂದನ್ನು ಸಲ್ಲಿಸಿದ್ದಾರೆ. ಬಿಎಸ್‌ಎಫ್‌ನ ಹೇಳಿಕೆಯನ್ನೂ ಮುಖ್ಯಮಂತ್ರಿಗಳ ಮುಂದಿಟ್ಟಿದ್ದಾರೆ. ಗಣಮುಕ್ತಿ ಪರಿಷದ್ ಅಧ್ಯಕ್ಷರೂ ಮತ್ತು ಆದಿವಾಸಿ ಅಧಿಕಾರ್ ಮಂಚ್‌ನ ರಾಷ್ಟ್ರೀಯ ಸಂಯೋಜಕರೂ ಆಗಿರುವ ಜಿತೇಂದ್ರ ಚೌಧುರಿ ನೇತೃತ್ವದ ನಿಯೋಗ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ 13 ಅಂಶಗಳ ಮನವಿಯಲ್ಲಿ ರಾಜ್ಯದಲ್ಲಿ ಕಾನೂನಿನ ಪರಿಸ್ಥಿತಿ ನೆಲೆಗೊಳಿಸಬೇಕು, ಗುಡ್ಡಗಾಡು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬರದಂತಹ ಪರಿಸ್ತಿತಿಗಳನ್ನು ನಿಭಾಯಿಸಲು ವ್ಯಾಪಕವಾಗಿ ಕೂಲಿ ಉದ್ಯೋಗಗಳನ್ನು ಉಂಟುಮಾಡಲು ಮುತುವರ್ಜಿ ವಹಿಸಬೇಕು, ಎಲ್ಲ ಕಲ್ಯಾಣ ಕ್ರಮಗಳನ್ನು ಮತ್ತೆ ನೆಲೆಗೊಳಿಸಬೇಕು ಎಂದು ಆಗ್ರಹಿಸಲಾಗಿದೆ.

ಮರುದಿನ ಕಿಸಾನ್‌ಸಭಾ ಮತ್ತು ಗಣಮುಕ್ತಿ ಪರಿಷದ್ ಜತೆಗೂಡಿ ಈ ಬೇಡಿಕೆಗಳ ಮೇಲೆ ಒಂದು ಬೃಹತ್ ರ‍್ಯಾಲಿ ಸಂಘಟಿಸ್ದವು.

ಜೂನ್ 11ರಂದು ಎಡರಂಗದ ಮಾಜಿ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ನೇತೃತ್ವದ ಶಾಸಕರ ಒಂದು ತಂಡ ಈ ಪ್ರದೇಶದ ಗಂಧಚ್ಚರ್ರಾ ಎಂಬಲ್ಲಿಗೆ ಭೇಟಿ ನೀಡಲು ಹೋದಾಗ ಪೋಲೀಸ್ ಅಧಿಕಾರಿಗಳ ಎದುರೇ ಬಿಜೆಪಿ-ಐಪಿಎಫ್‌ಟಿ ಗೂಂಡಾಗಳು ತಡೆದು ನಿಲ್ಲಿಸಿದರು. ಜಿತೇಂದ್ರ ಚೌಧುರಿಯವರು ಮುಖ್ಯಮಂತ್ರಿಗಳಿಗೆ ಕರೆ ಮಾಡಿದ ಮೇಲಷ್ಟೇ ಪೋಲೀಸರು ಗೂಂಡಾಗಳನ್ನು ಚದುರಿಸಿದರು.

ಈ ಇಡೀ ಪ್ರಕರಣ ಬುಡಕಟ್ಟು ಪ್ರದೇಶದಲ್ಲಿ ಜನಗಳು ಆಹಾರವಿಲ್ಲದೆ ಹಸಿವಿನಿಂದ ನರಳುತ್ತಿದ್ದಾರೆ ಎಂಬ ಸಂಗತಿಯನ್ನು ಮರೆಮಾಚಲಿಕ್ಕಾಗಿಯೇ ಬಿಜೆಪಿಯ ಪೂರ್ವಯೋಜಿತ ಕ್ರಮದಂತಿತ್ತು.

ಇದು ಬಿಜೆಪಿ-ಐಪಿಎಫ್‌ಟಿಯ ಪ್ರಜಾಪ್ರಭುತ್ವ-ವಿರೋಧಿ ಕ್ರಮ ಎಂದು ತ್ರಿಪುರಾದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿಕೆಯನ್ನು ನೀಡಿ ಖಂಡಿಸಿದೆ ಹಾಗೂ ರಾಜ್ಯದಲ್ಲಿ ಕಾನೂನಿನ ಮತ್ತು ಸಂವಿಧಾನದ ಆಳ್ವಿಕೆಯನ್ನು ಮತ್ತೆ ನೆಲೆಗೊಳಿಸಲು ಮುಂದೆ ಬರಬೇಕೆಂದು ಎಲ್ಲ ಪ್ರಜಾಪ್ರಭುತ್ವವಾದಿಗಳಿಗೆ ಕರೆ ನೀಡಿದೆ.

ಮಹಾರಾಷ್ಟ್ರ: ಸುರ್ಗಾಣಾದಲ್ಲಿ ತಹಸೀಲ್ ಕಚೇರಿ ಮುತ್ತಿಗೆ -ಅರಣ್ಯ ಹಕ್ಕುಗಳ ಜಾರಿಗೆ ಆಗ್ರಹ

ಮಾರ್ಚ್ 12 ರ 'ಲಾಂಗ್ ಮಾರ್ಚ್' ನಂತರ ಮಹಾರಾಷ್ಟ್ರದ ಬಿಜೆಪಿ ಸರಕಾರ ನೀಡಿದ್ದ ವಚನಗಳ ಈಡೇರಿಕೆಯಲ್ಲಿ ಮತ್ತೆ ಮೀನಮೇಷ ಎಣಿಸುತ್ತಿದೆ. ಇದನ್ನು ಪ್ರತಿಭಟಿಸಿ ಜೂನ್ 12ರಂದು ನಾಶಿಕ್ ಜಿಲ್ಲೆಯ ಸುರ್ಗಾಣಾದಲ್ಲಿ ಕಿಸಾನ್ ಸಭಾ ರೈತರು ತಹಸೀಲ್ ಕಚೇರಿ ಘೇರಾವ್ ನಡೆಸಿದರು. 31 ವರ್ಷಗಳ ಹಿಂದೆ, 1987ರಲ್ಲಿ ಇದೇ ದಿನದಂದು ಅರಣ್ಯ ಹಕ್ಕುಗಳ ಕಾಯ್ದೆ ತರಲು ನಡೆದ ಹೋರಾಟದಲ್ಲಿ ಲಕ್ಷ್ಮಣ್ ಬಗುಲ್ ಎಂಬ ರೈತನ ಸಾವು ಸಂಭವಿಸಿತ್ತು. ಈ ವರ್ಷ ಈ ಹುತಾತ್ಮ ದಿನದಂದು ಸಾವಿರಾರು ರೈತರು ಮತ್ತೆ ಬೀದಿಗಿಳಿದು ಅರಣ್ಯ ಹಕ್ಕುಗಳನ್ನು ಕುರಿತಂತೆ ನೀಡಿರುವ ಆಶ್ವಾಸನೆಗಳನ್ನು ಇನ್ನಷ್ಟು ವಿಳಂಬ ಮಾಡದೆ ಜಾರಿಗೆ ತರಬೇಕು ಎಂದು ಆಗ್ರಹಿಸಿ ತಹಸೀಲ್ ಕಚೇರಿಗೆ ಮುತ್ತಿಗೆ ಹಾಕಿದರು.

ಈ ಹೋರಾಟದಲ್ಲಿ ಬಿಜೆಪಿ ಮತ್ತು ಶಿವಸೇನೆಗೆ ಸೇರಿದ ಸುಮಾರು 200 ರೈತರು ತಮ್ಮ ಪಕ್ಷಗಳ ರೈತ-ವಿರೋಧಿ ನಿಲುವುಗಳನ್ನು ಖಂಡಿಸುತ್ತ ಅಖಿಲ ಭಾರತ ಕಿಸಾನ್ ಸಭಾ ಸೇರುತ್ತಿರುವುದಾಗಿ ಘೋಷಿಸಿದರು. ಅವರನ್ನು 'ಲಾಲ್ ಸಲಾಮ್' ಘೋಷಣೆಗಳೊಂದಿಗೆ ನೆರದಿದ್ದ ರೈತರು ಸ್ವಾಗತಿಸಿದರು.

ರೈತರು ತಮ್ಮ ಬೇಡಿಕೆ ಈಡೇರುವವ ವರೆಗೆ ಮುತ್ತಿಗೆ ಮುಂದುವರೆಸಲು ನಿರ್ಧರಿಸಿದ್ದಾರೆ.

ಕಳೆದ ವಾರವಷ್ಟೇ ಸುರ್ಗಾಣಾ ನಗರ ಮಂಡಳಿಯ ಅಧ್ಯಕ್ಷೆಯಾಗಿ ಚುನಾಯಿತರಾಗಿರುವ ಸಿಪಿಐ(ಎಂ)ನ ಸೋನಾಲಿ ಬಗುಲ್ ಭಾಗವಹಿಸಿದ್ದು ವಿಶೇಷವಾಗಿತ್ತು. ಈ ನಗರಸಭೆಯಲ್ಲಿ ಮೊದಲ ಬಾರಿಗೆ ಎಡಪಂಥೀಯರೊಬ್ಬರು ಈ ಸ್ಥಾನವನ್ನು ಪಡೆದಿದ್ದಾರೆ.





ಝಾರ್ಖಂಡ್‌ನಲ್ಲಿ ಹಸಿವಿನಿಂದ ಸಾವುಗಳು- ಎಡಪಕ್ಷಗಳ ಖಂಡನೆ: ಕ್ರಮಕ್ಕೆ ರಾಜ್ಯಪಾಲರಿಗೆ ಮನವಿ

ಝಾರ್ಖಂಡ್‌ನಲ್ಲಿ ಕಳೆದ ವಾರ ಗಿರಿಧ್ ಜಿಲ್ಲೆಯ ಸಾವಿತ್ರಿ ದೇವಿ ಮತ್ತು ಛತ್ರ ಜಿಲ್ಲೆಯ ಮೀನಾ ಮುಶಹರ್ ಎಂಬಿಬ್ಬರು ಮಹಿಳೆಯರು ಹಸಿವಿನ ಬಾಧೆಯಿಂದ ಸತ್ತ ಸುದ್ದಿ ಮತ್ತೊಮ್ಮೆ ದೇಶವನ್ನು ತಲ್ಲಣಗೊಳಿಸಿದೆ. ಕಳೆದ ಕೆಲವು ತಿಂಗಳಲ್ಲಿ ಈ ರಾಜ್ಯದಿಂದ ಇಂತಹ ಕನಿಷ್ಟ 12 ಪ್ರಕರಣಗಳು ವರದಿಯಾಗಿವೆ. ಆದರೆ ಇಲ್ಲಿಯ ಬಿಜೆಪಿ ಸರಕಾರವನ್ನು ಇದಿನ್ನೂ ತಟ್ಟಿದಂತಿಲ್ಲ, ಮುಖ್ಯಮಂತ್ರಿಗಳು ಮತ್ತು ಅಧಿಕಾರಿಗಳು ಇದನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ರಾಜ್ಯದ ನಾಲ್ಕು ಎಡಪಕ್ಷಗಳು, ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್) ಮತ್ತು ಎಂಸಿಸಿ ಖಂಡಿಸಿವೆ. ಪಡಿತರ ವ್ಯವಸ್ಥೆಯ ಫಲಾನುಭವಿಗಳು ಆಧಾರ್‌ನೊಂದಿಗೆ ಜೋಡಿಸುವ ಒತ್ತಾಯ ಇಂತಹ ಸಾವುಗಳಿಗೆ ಒಂದು ಪ್ರಮುಖ ಕಾರಣ ಎನ್ನಲಾಗಿದೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಸಂಜಯ್ ಪಾಸ್ವಾನ್ ಮತ್ತು ಸಿಪಿಐ(ಎಂಎಲ್)ನ ಮಾಜಿ ಶಾಸಕ ಬಿನೋದ್ ಸಿಂಗ್ ನೇತೃತ್ವದ ಎಡಪಕ್ಷಗಳ ಎರಡು ನಿಯೋಗಗಳು ಈ ಎರಡು ಸ್ಥಳಗಳಿಗೆ ಭೇಟಿ ನೀಡಿವೆ. ಈ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಒದಗಿಸಬೇಕು ಮತ್ತು ಇಂತಹ ಪ್ರಕರಣಗಳು ಇನ್ನು ನಡೆಯದಂತೆ ಕ್ರಮ ವಹಿಸಬೇಕು ಎಂದು ಎಡಪಕ್ಷಗಳ ರಾಜ್ಯ ಮುಖಂಡರು ಆಗ್ರಹಿಸಿದ್ದಾರೆ.

ಜೂನ್ 11 ರಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ನೇತೃತ್ವದಲ್ಲಿ, ರಾಜ್ಯ ಕಾರ್ಯದರ್ಶಿ ಜಿ.ಕೆ.ಬಕ್ಷಿ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪ್ರಕಾಶ್ ಬಿಪ್ಲವಿ ಮತ್ತು ಪ್ರಫುಲ್ ಲಿಂಡಾ ಅವರಿದ್ದ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಹೆಚ್ಚುತ್ತಿರುವ ಹಸಿವು ಮತ್ತು ಅದರಿಂದ ಆಗುತ್ತಿರುವ ಸಾವುಗಳ ಬಗ್ಗೆ ಆತಂಕ ವ್ಯಕ್ತಪಡಿಸುವ ಮತ್ತು ಇದು ಮರುಕಳಿಸದಂತೆ ಸೂಕ್ತ ಕ್ರಮಗಳಿಗೆ ಆಗ್ರಹಿಸುವ ಮನವಿಯೊಂದನ್ನು ಸಲ್ಲಿಸಿದರು.

ಪಡಿತರ ಕಾರ್ಡುಗಳನ್ನು ಆಧಾರ್‌ನೊಂದಿಗೆ ಜೋಡಿಸುವುದನ್ನು ಕಡ್ಡಾಯ ಮಾಡಿರುವುದರಿಂದ 11 ಲಕ್ಷ ಕಾರ್ಡುಗಳು ರದ್ದಾಗಿವೆ ಎಂಬ ಸಂಗತಿಯತ್ತ ಸಿಪಿಐ(ಎಂ) ನಿಯೋಗ ಗಮನ ಸೆಳೆಯಿತು. ರಾಜ್ಯಪಾಲರೂ ಈಬಗ್ಗೆ ಆತಂಕ ವ್ಯಕ್ತಪಡಿಸುತ್ತ ಇದನ್ನು ಮುಖ್ಯಮಂತ್ರಿಗಳ ಬಳಿ ಎತ್ತುವುದಾಗಿ ಆಶ್ವಾಸನೆಯಿತ್ತರು.

ಮನವಿ ಪತ್ರದಲ್ಲಿ ಯುವಜನರಿಗೆ ಉದ್ಯೋಗ ಕೊಡಿಸುತ್ತೇವೆನ್ನುವ ಏಜೆಂಸಿಗಳು ಅವರನ್ನು, ಮುಖ್ಯವಾಗಿ ಆದಿವಾಸಿ ಮಹಿಳೆಯರನ್ನು ನಗರಕ್ಕೆ ಸಾಗಿಸುವ ಪ್ರಶ್ನೆಯತ್ತ ಮತ್ತು ಕಾಡುಪ್ರಾಣಿಗಳ ಅಭಯಾರಣ್ಯಗಳ ಹೆಸರಲ್ಲಿ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುತ್ತಿರುವ ಪ್ರಶ್ನೆಯತ್ತವೂ ರಾಜ್ಯಪಾಲರ ಗಮನ ಸೆಳೆಯಲಾಗಿದೆ.

ಚೀನಾ ಕಮ್ಯೂನಿಸ್ಟ್ ಪಕ್ಷ (ಸಿಪಿಸಿ)ದ ಕೇಂದ್ರ ಸಮಿತಿಯು ಕಳೆದ ವರ್ಷ ನವೆಂಬರ್ 30 ಮತ್ತು ಡಿಸೆಂಬರ್ 3, 2017 ರ ನಡುವೆ ವಿಶ್ವದಾದ್ಯಂತ ಎಲ್ಲಾ ರಾಜಕೀಯ ಪಕ್ಷಗಳನ್ನು "ವಿಶ್ವದ ರಾಜಕೀಯ ಪಕ್ಷಗಳ ಜತೆ ಸಿಪಿಸಿಯ ಸಂವಾದ – ಉನ್ನತ ಮಟ್ಟದ ಸಭೆಗಳು" ಕಾರ್ಯಕ್ರಮದ ಭಾಗವಾಗಿ ಆಹ್ವಾನಿಸಿ, ಮುಂದಿನ ಹೆಜ್ಜೆಯಾಗಿ ವಿವಿಧ ವಿಷಯಾಧಾರಿತ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಿತ್ತು.

ಇದರ ಭಾಗವಾಗಿ, ಸಿಪಿಸಿ ಯು ಚೀನಾದ ಗುವಾಂಗ್ ಡಾಂಗ್ ಪ್ರಾಂತ್ಯದ ಷೆಂಗೆನ್ ನಲ್ಲಿ ಮೇ 28, 2018 ರಂದು, ಕಾರ್ಲ್ ಮಾರ್ಕ್ಸ್ ಅವರ 200ನೇ ಜನ್ಮ ವಾರ್ಷಿಕೋತ್ಸವದ ಸ್ಮರಣೆಯಲ್ಲಿ ಉನ್ನತ ಮಟ್ಟದ ವಿಷಯಾಧಾರಿತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ವಿಷಯಾಧಾರಿತ ಅಧಿವೇಶನದಲ್ಲಿ ಜಗತ್ತಿನಾದ್ಯಂತ 70 ರಾಷ್ಟ್ರಗಳ 75 ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ನಾಯಕರು ಪಾಲ್ಗೊಂಡಿದ್ದರು. ಇವರೊಂದಿಗೆ ಚೀನಾ ದೇಶದ 14 ನಾಯಕರು ಈ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಈ ಚರ್ಚೆಗಳನ್ನು ಮೂರು ತಜ್ಞರ ತಂಡಗಳು ಒಳಗೊಂಡಿದ್ದ ಅಧಿವೇಶನಗಳನ್ನಾಗಿ ವಿಂಗಡಿಸಲಾಗಿತ್ತು, ಇವುಗಳಲ್ಲಿ ಆರಂಭದ ಉದ್ಘಾಟನಾ ಅಧಿವೇಶನ ಮತ್ತು ಮುಕ್ತಾಯದ ಸಮಾರೋಪ ಅಧಿವೇಶನವನ್ನು ಹೊರತುಪಡಿಸಿ, ಈ ಮುಂದೆ ಕೊಟ್ಟಿರುವ ಮೂರು ವಿಷಯಾಧಾರಿತ ಗೋಷ್ಟಿಗಳಲ್ಲಿ ಚರ್ಚೆಗಳನ್ನು ಏರ್ಪಡಿಸಲಾಗಿತ್ತು. 1) ಕಾರ್ಲ್ ಮಾರ್ಕ್ಸ್ ನ ಐತಿಹಾಸಿಕ ಕೊಡುಗೆ ಮತ್ತು ಮಾರ್ಕ್ಸ್ ವಾದದ ಸಮಕಾಲೀನ ಪ್ರಾಮುಖ್ಯತೆ; 2) 21ನೇ ಶತಮಾನದ ಮಾರ್ಕ್ಸ್‌ವಾದ ಮತ್ತು, ಹೊಸ ಯುಗಕ್ಕೆ ಚೀನಿ ಗುಣಲಕ್ಷಣಗಳೊಂದಿಗೆ ಸಮಾಜವಾದದ ಕುರಿತಂತೆ ಕ್ಸಿ ಜಿಂಪಿಂಗ್ ರ ಚಿಂತನೆ; 3) ಚೀನೀಯರ ಗುಣ ಲಕ್ಷಣಗಳೊಂದಿಗೆ ಸಮಾಜವಾದದ ಸಿದ್ಧಾಂತ ಮತ್ತು ಪ್ರಯೋಗ, ಮತ್ತು ವಿಶ್ವ ಸಮಾಜವಾದದ ಭವಿಷ್ಯ. ಸಿಪಿಐ(ಎಂ) ನ ಪ್ರಧಾನ ಕಾರ್ಯದರ್ಶಿ, ಕಾ. ಸೀತಾರಾಂ ಯೆಚುರಿ ಯವರು ಸಮಾರೋಪ ಅಧಿವೇಶನದಲ್ಲಿ ಮಾಡಿದ ಭಾಷಣ ಇಲ್ಲಿದೆ:

ಸಿಪಿಸಿ ಸಂವಾದದಲ್ಲಿ ಯೆಚುರಿ

"21ನೇ ಶತಮಾನದ ಮಾರ್ಕ್ಸ್‌ವಾದ ಮತ್ತು ವಿಶ್ವ ಸಮಾಜವಾದದ ಭವಿಷ್ಯ"



ಜಗದ ಸುತ್ತ

ಅನುವಾದ: ನಾಗರಾಜ ನಂಜುಂಡಯ್ಯ

ಆತ್ಮೀಯ ಸಂಗಾತಿಗಳೆ ಮತ್ತು ಸ್ನೇಹಿತರೆ,

ಸಿಪಿಸಿ ಆಯೋಜಿಸಿರುವ ಈ ಪ್ರಮುಖ ಸಮ್ಮೇಳನದ ಸಮಾರೋಪ ಅಧಿವೇಶನದಲ್ಲಿ ನಾವೆಲ್ಲರೂ ಪಾಲ್ಗೊಳ್ಳುತ್ತಿದ್ದೇವೆ. ಇತರೆ ಸೋದರ ಪಕ್ಷಗಳೊಂದಿಗೆ ನಾನು ಈ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ವತಿಯಿಂದ ಸೌಹಾರ್ದ ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಇವತ್ತಿನ ಅಂತರರಾಷ್ಟ್ರೀಯ ಸನ್ನಿವೇಶದಲ್ಲಿ ಸಿಪಿಸಿ ಸಂಘಟಿಸಿರುವ ಈ ಸಮ್ಮೇಳನದ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳಲು ಬಯಸುತ್ತೇನೆ. ಸಮಯದ ನಿರ್ಬಂಧವಿರುವುದರಿಂದ ಇಲ್ಲಿ ಭಾಗವಹಿಸಿರುವ ಪ್ರತಿಯೊಂದು ಪಕ್ಷವು ತಮಗೆ ಸಿಕ್ಕಿರುವ ಈ ಅವಕಾಶವನ್ನು ಸೂಕ್ತವಾಗಿ ಸದುಪಯೋಗ ಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ, ನಾನು ಯಾವುದೇ ರೀತಿಯ ಲಿಖಿತ ಪಠ್ಯವನ್ನು ಓದಲು ಬಯಸುತ್ತಿಲ್ಲ, ಒಂದೇ ಒಂದು "ಪ್ರಮುಖ ಚಿಂತನೆ" ಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಐದು ಅಂಶಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

ಪ್ರಮುಖ ಚಿಂತನೆ: ಮಾರ್ಕ್ಸ್‌ವಾದವು ಮಾನವ ನಾಗರಿಕತೆಯ ಮುನ್ನಡೆಯ ರೂಪುರೇಷೆಗಳನ್ನು ರೂಪಿಸುತ್ತದೆ.

ಇದನ್ನು ನಾನು ಏಕೆ ದೃಢವಾಗಿ ಸಮರ್ಥಿಸುತ್ತೇನೆ?

ಐದು ಅಂಶಗಳು:

1. ಪ್ರಸಕ್ತ ಮುಂದುವರೆಯುತ್ತಿರುವ ಜಾಗತಿಕ ಬಂಡವಾಳಶಾಹಿಯ ಬಿಕ್ಕಟ್ಟು, ಮತ್ತೊಮ್ಮೆ ಮಾರ್ಕ್ಸ್‌ವಾದದ ಸಿಂಧುತ್ವವನ್ನು ಪ್ರಬಲವಾಗಿ ಎತ್ತಿಹಿಡಿದಿದೆ. ಬಂಡವಾಳಶಾಹಿ ವ್ಯವಸ್ಥೆಯಡಿಯಲ್ಲಿ ಮಾನವನ ಶೋಷಣೆಗೆ ಅಥವಾ ಬಿಕ್ಕಟ್ಟಿಗೆ ಎಂದೆಂದಿಗೂ ಅಂತ್ಯವೆಂಬುದಿಲ್ಲ, ಈ ಶೋಷಣಾ ವ್ಯವಸ್ಥೆ ಹೋಗಬೇಕು ಎಂದು ಹೆಚ್ಚೆಚ್ಚು ಜನರಿಗೆ ಹೆಚ್ಚೆಚ್ಚಾಗಿ ಮನದಟ್ಟಾಗುತ್ತಿದೆ. ಮಾರ್ಕ್ಸ್ ಅವರ ಪ್ರಸಿದ್ಧವಾದ ಹೇಳಿಕೆ ಈ ರೀತಿ ಇದೆ.: "ತತ್ವಶಾಸ್ತ್ರಜ್ಞರು ಜಗತ್ತನ್ನು ವಿವಿಧ ರೀತಿಗಳಲ್ಲಿ ಅರ್ಥೈಸಿದ್ದಾರೆ. ಆದರೆ ಪ್ರಶ್ನೆಯಿರುವುದು ಅದನ್ನು ಬದಲಾಯಿಸಬೇಕೆಂದು."
2. ಹಾಗಾದರೆ, ಯಾರಾದರೂ ಈ ಲೋಕವನ್ನು ಹೇಗೆ ಬದಲಾಯಿಸಲು ಸಾಧ್ಯ? ಖಂಡಿತ ಮಾರ್ಕ್ಸ್‌ವಾದ ಒಂದೇ ಶೋಷಣೆಯನ್ನು ಅಂತ್ಯಗೊಳಿಸಿ ಮಾನವ ವಿಮೋಚನೆ ಸಾಧಿಸುವ ಬದಲಾವಣೆಗಳಿಗೆ ಒಂದು ಉತ್ತಮ ಚೌಕಟ್ಟನ್ನು ಒದಗಿಸುತ್ತದೆ. ಶೋಷಿತ ಜನರನ್ನು ಆಕರ್ಷಿಸುವ ಏಕೈಕ ತತ್ವವಾಗಿ ಮಾರ್ಕ್ಸ್‌ವಾದವು ಉಳಿದಿದೆ ಏಕೆ, ಎಂದು ಲೆನಿನ್ ಹೀಗೆ ವಿವರಿಸಿದ್ದಾರೆ:

   "ಜಗತ್ತಿನ ಎಲ್ಲಾ ದೇಶಗಳ ಸಮಾಜವಾದಿಗಳನ್ನು ತನ್ನೆಡೆ ಸಹಜವಾಗಿಯೇ ಸೆಳೆಯುವ ಈ ಸಿದ್ಧಾಂತದ ಆಕರ್ಷಣೆಗೆ ಕಾರಣ, ಕಟ್ಟುನಿಟ್ಟಿನ ಹಾಗೂ ಅತ್ಯುತ್ಕೃಷ್ಟವಾದ ವೈಜ್ಞಾನಿಕವಾಗಿರುವ ಮತ್ತು ಕ್ರಾಂತಿಕಾರಿಯಾಗಿರುವ ಎರಡೂ ಗುಣಗಳನ್ನು ಅದು ಒಂದುಗೂಡಿಸಿರುವುದು. ಈ ಒಂದುಗೂಡುವಿಕೆ ಕೇವಲ ಆಕಸ್ಮಿಕವಲ್ಲ. ಇದು ವೈಜ್ಞಾನಿಕ ಮತ್ತು ಕ್ರಾಂತಿಕಾರಿ ಎರಡೂ ಆಗಿದ್ದ ಒಬ್ಬ ಸ್ಥಾಪಕ ವ್ಯಕ್ತಿಯ ಸಿದ್ಧಾಂತವಾಗಿರುವುದರಿಂದ ಮಾತ್ರ ಅಲ್ಲ. ಇವೆರಡೂ ಗುಣಲಕ್ಷಣಗಳನ್ನು ಆಂತರಿಕವಾಗಿ ಎಂದೂ ಬೇರ್ಪಡಿಸಲಾಗದ ರೀತಿಯಲ್ಲಿ ಹೊಂದಿರುವುದರಿಂದ ಇದು ಸಾಧ್ಯವಾಗಿದೆ."
3. ನಾವು ಪ್ರತಿಯೊಬ್ಬರೂ, ವೈಜ್ಞಾನಿಕ ಮತ್ತು ಕ್ರಾಂತಿಕಾರಿ ಅಂಶಗಳನ್ನು ನಮ್ಮ ದೇಶಗಳಲ್ಲಿನ ನಿರ್ದಿಷ್ಟ ಪರಿಸ್ಥಿತಿಗೆ ಅನುಗುಣವಾಗಿ ಜಾರಿಗೆ ತರುವಂತಾಗಬೇಕು. ಮಾರ್ಕ್ಸ್‌ವಾದ ಒಂದು ಅನನ್ಯವಾದ ಸಿದ್ಧಾಂತ ವಾಗಿದೆ. ಏಕೆಂದರೆ ವರ್ಗರಹಿತ ಕಮ್ಯುನಿಸ್ಟ್ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುವ ಅದರ ಅಜೆಂಡಾ ಜಾರಿಯಾದಾಗ ಮಾತ್ರ ಅದರ ಎಲ್ಲೆಮೀರಲು ಸಾಧ್ಯವೆಂದು ಸಿಪಿಐ(ಎಂ) ಪರಿಗಣಿಸುತ್ತದೆ. ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ, ಅದರ ಬಂಡವಾಳಶಾಹಿಯ ಅರ್ಥೈಸುವಿಕೆ ಸಮಗ್ರವಾಗಿದ್ದು ಮುಂಬರುವ ಐತಿಹಾಸಿಕ ಸಾಧ್ಯತೆಗಳನ್ನು ಗ್ರಹಿಸಲು ಅದಷ್ಟೇ ಸಾಕು.

   ಮಾರ್ಕ್ಸ್‌ವಾದವು ಒಂದು ಗೊಡ್ಡು ಸಿದ್ಧಾಂತವಲ್ಲ. ಅದೊಂದು 'ಸೃಜನಾತ್ಮಕ ವಿಜ್ಞಾನ'. "ನಿರ್ದಿಷ್ಟ ಪರಿಸ್ಥಿತಿ ಗಳಿಗೆ ಅನುಗುಣವಾಗಿ ನಿರ್ದಿಷ್ಟ ವಿಶ್ಲೇಷಣೆ"ಯ ಮೇಲೆ ಮುಖ್ಯವಾಗಿ ಆಧಾರಿತವಾದ್ದು. ಮಾರ್ಕ್ಸ್‌ವಾದವು ನಿರ್ದಿಷ್ಟವಾಗಿ ಬಂಡವಾಳಶಾಹಿಯನ್ನು ಮತ್ತು ಸಾಮಾನ್ಯವಾಗಿ ಇಡಿಯಾಗಿ ಇತಿಹಾಸದ ವಿಶ್ಲೇಷಣೆಯ ವಿಧಾನ. ಮಾರ್ಕ್ಸ್ ಒದಗಿಸಿದ ಪ್ರಬಲ ಅಡಿಪಾಯದ ಆಧಾರದ ಮೇಲೆ, ನಾವು ಪ್ರಸ್ತುತ ಸಂದರ್ಭವನ್ನು ಮತ್ತು ಅದರಲ್ಲಿ ಭವಿಷ್ಯ ರೂಪಿಸಲು ಇರುವ ಸಾಧ್ಯತೆಗಳನ್ನು ಅರ್ಥ ಮಾಡಿಕೊಳ್ಳುವ ಸಿದ್ಧಾಂತವನ್ನು ನಿರಂತರವಾಗಿ ಉತ್ಕೃಷ್ಟಗೊಳಿಸಬೇಕು. ಮಾರ್ಕ್ಸ್‌ವಾದ ಒಂದು ಮುಚ್ಚಿದ ತಾತ್ವಿಕ ಸಮುಚ್ಚಯವಲ್ಲ. ನಿರಂತರವಾಗಿ ತಾತ್ವಿಕ ಶ್ರೀಮಂತಿಕೆ ಬೆಳೆಸಿಕೊಳ್ಳುವ ಪ್ರಕ್ರಿಯೆಯನ್ನು ಮಾರ್ಕ್ಸ್‌ವಾದ ಪ್ರತಿನಿಧಿಸುತ್ತದೆ.

   ಮಾರ್ಕ್ಸ್‌ವಾದವು 'ಸೃಜನಶೀಲ ವಿಜ್ಞಾನ' ವಾಗಿರುವ ಕಾರಣದಿಂದಲೇ, ಮಾನವ ಚಟುವಟಿಕೆಗಳ ಎಲ್ಲಾ ಕ್ಷೇತ್ರಗಳನ್ನು ಒಳಗೊಳ್ಳುವ ನಿರಂತರ ಮಾನವ–ಪ್ರಾಕೃತಿಕ ಗತಿತಾರ್ಕಿಕತೆಗಳ ಪರಿಣಾಮಗಳ ಪ್ರವೃತ್ತಿಗಳು ಮತ್ತು ದಿಕ್ಕುದೆಸೆಗಳನ್ನು ಗುರುತಿಸುವ ಸಾಮರ್ಥ್ಯವನ್ನು ಹೊಂದಿದೆ. ಖಗೋಳ–ಭೌತಶಾಸ್ತ್ರ ದಿಂದ ನ್ಯಾನೋ–ತಂತ್ರಜ್ಞಾನವರೆಗಿನ ಪ್ರತಿ ವೈಜ್ಞಾನಿಕ ಸಂಶೋಧನೆ ಮತ್ತು ಬೆಳವಣಿಗೆಯೂ ದಂದ್ವಮಾನ ಭೌತವಾದವನ್ನು ಪ್ರಬಲವಾಗಿ ರುಜುವಾತುಗೊಳಿಸುತ್ತದೆ. ಕೃತಕ ಬುದ್ಧಿಮತ್ತೆ ನಮ್ಮ ಜೀವನವನ್ನು ಸ್ವಾಧಿನಕ್ಕೆ ತೆಗೆದುಕೊಂಡು ನಿಯಂತ್ರಣ ಮಾಡುವ ಸಂಭಾವ್ಯ ಅಪಾಯಗಳನ್ನು ಎದುರಿಸಿ ನಿಭಾಯಿಸಲು ಮಾರ್ಕ್ಸ್‌ವಾದದಿಂದ ಮಾತ್ರ ಸಾಧ್ಯ.
4. ಸಿಪಿಸಿ ಚೀನಾದ ನಿರ್ದಿಷ್ಟ ಪರಿಸ್ಥಿತಿಗಳಿಗೆ ಮಾರ್ಕ್ಸ್‌ವಾದದ ವಿಜ್ಞಾನ ವನ್ನು ಅಳವಡಿಸಿಕೊಂಡು, ಕ್ರಾಂತಿಯ ವಿಜಯ ಸಾಧಿಸಿ, ಆ ನಂತರ ಚೀನೀ ಗುಣಲಕ್ಷಣಗಳೊಂದಿಗೆ ಸಮಾಜವಾದ ನಿರ್ಮಿಸುತ್ತಿರುವ ಈ ನೆಲದಲ್ಲಿ ನಾವೆಲ್ಲಾ ಇಂದು ಚರ್ಚಿಸುತ್ತಿದ್ದೇವೆ. ಆಂಟೋನಿಯೋ ಗ್ರಾಮ್‌ಶಿ ಹೇಳಿದ ಸಿದ್ಧಾಂತ ಮತ್ತು ಪ್ರಯೋಗಗಳ ನಡುವಿನ ಸಮಗ್ರೀಕರಣ – 'ಪ್ರಾಕ್ಸಿಸ್'ನ್ನು, ಸಿಪಿಸಿ ಪ್ರಧಾನ ಕಾರ್ಯದರ್ಶಿ ಕ್ಸಿ ಜಿಂಪಿಂಗ್ ಅವರು "ಚೀನಾ ಮಾರ್ಕ್ಸ್‌ವಾದದ ಸಿದ್ಧಾಂತದ ಸಿಂಧುತ್ವಕ್ಕೆ ಗಟ್ಟಿಯಾದ ಪುರಾವೆ " ಎಂದು ಹೇಳುತ್ತಾ ಮುಂದುವರಿಸುತ್ತಿದ್ದಾರೆ. 20ನೇಯ ಶತಮಾನದ ಮಧ್ಯ ಭಾಗದ ರವರೆಗೂ, "ಪೂರ್ವದ ರೋಗಿ" ಎಂದು ಕರೆಯಲ್ಪಟ್ಟಿದ್ದ ದೇಶವು ಇಂದು ಎರಡನೇ ಅತ್ಯಂತ ಶಕ್ತಿ ಶಾಲಿ ರಾಷ್ಟ್ರ ಮತ್ತು ವಿಶ್ವದಲ್ಲಿ ಬೆಳೆಯುತ್ತಿರುವ ಆರ್ಥಿಕ ಶಕ್ತಿಯಾಗಿದೆ. ಚೀನಾದ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅನ್ವಯಿಸುವುದನ್ನು "ಹೊಸ ಯುಗಕ್ಕೆ ಚೀನೀ ಗುಣಲಕ್ಷಣಗಳ ಸಮಾಜವಾದ ದ ಕುರಿತು ಕ್ಸಿ ಜಿಂಪಿಂಗ್ ನ ಚಿಂತನೆಗಳ" ಮೂಲಕ ಚೀನಾ ಮುಂದೆ ಸಾಗುತ್ತಿದೆ.
5. ಹಾಗಾಗಿ, ನಿರ್ದಿಷ್ಟ ಪರಿಸ್ಥಿತಿಗಳ ನಿರ್ದಿಷ್ಟ ವಿಶ್ಲೇಷಣೆಯನ್ನು ನಮ್ಮ ದೇಶಗಳಲ್ಲಿ ನಾವೆಲ್ಲರೂ ಬಲವಾಗಿ ಅನುಷ್ಟಾನಗೊಳಿಸಬೇಕಾಗಿದೆ. ಬಂಡವಾಳಶಾಹಿಯ ಬಿಕ್ಕಟ್ಟು ಎಷ್ಟೇ ತೀವ್ರ ಸ್ವರೂಪದಲ್ಲಿ ಇರಲಿ, ಅದು ತನ್ನಷ್ಟಕ್ಕೆ ತಾನೇ ಅದು ಕುಸಿಯುವುದಿಲ್ಲ. ಈ ಬಂಡವಾಳಶಾಹಿಗೆ ಪ್ರತಿ ಸವಾಲು ಒಡ್ಡುವ ರಾಜಕೀಯ ಪರ್ಯಾಯವಿಲ್ಲದಿದ್ದರೆ, ಬಂಡವಾಳಶಾಹಿ ವ್ಯವಸ್ಥೆಯು ಮಾನವ ಶೋಷಣೆಯ ತೀವ್ರತೆಯನ್ನು ಹೆಚ್ಚಿಸುತ್ತಾ ಬದುಕಿಕೊಳ್ಳುತ್ತದೆ. ಆದ್ದರಿಂದ, ಸಮಾಜವಾದಿ ರಾಜಕೀಯ ಪರ್ಯಾಯ ಶಕ್ಕಿಯು ಹೆಚ್ಚು ಬಲಿಷ್ಟವಾಗಿ ಬೆಳೆಯಬೇಕಾಗಿದೆ.

   ಆದ್ದರಿಂದ, ಬಂಡವಾಳ ಶಾಹಿಯನ್ನು ಪದಚ್ಯುತ ಗೊಳಿಸಬೇಕಾದ ಅಗತ್ಯವಿದೆ. ಇದು ಕಾರ್ಮಿಕ ವರ್ಗದ ನೇತೃತ್ವದಲಿರುವ ಸಮಾಜದ ಭೌತಿಕ ಶಕ್ತಿಯನ್ನು ಬಲಪಡಿಸುವುದರ ಮೇಲೆ ಅವಲಂಬಿಸಿರುತ್ತದೆ. ಇದು ಜನಪ್ರಿಯ ಶಕ್ತಿಶಾಲಿ ಹೋರಾಟಗಳ ಮೂಲಕ ನಡೆಯುವ "ವರ್ಗ ಹೋರಾಟ"ವನ್ನು ತೀವ್ರಗೊಳಿಸಿ ಬಂಡವಾಳದ ಆಳ್ವಿಕೆಯ ವಿರುದ್ಧ ರಾಜಕೀಯ ಆಕ್ರಮಣದಿಂದ ಮಾತ್ರ ಸಾಧ್ಯ. ಇಂತಹ ಒಂದು ಭೌತಿಕ ಶಕ್ತಿ ಮತ್ತು ಅದರ ಬಲವನ್ನು ನಿರ್ಮಿಸುವುದು "ವ್ಯಕ್ತಿನಿಷ್ಟ ಅಂಶ". ಇದನ್ನು ಬಲಪಡಿಸಬೇಕಾದಾದ್ದು ಅತ್ಯಗತ್ಯವಾಗಿರುತ್ತದೆ. ಬಂಡವಾಳಶಾಹಿಯ ಆರ್ಥಿಕ ಬಿಕ್ಕಟ್ಟಿನ ವಾಸ್ತವಿಕ ಪರಿಸ್ಥಿತಿಯ "ವಸ್ತುನಿಷ್ಟ ಅಂಶ" ಕ್ರಾಂತಿಕಾರಿ ಮುನ್ನಡೆಗೆ ಎಷ್ಟೇ ಅನುಕೂಲಕರವಾಗಿದ್ದರೂ, "ವ್ಯಕ್ತಿನಿಷ್ಟ ಅಂಶ" ವನ್ನು ಬಲಪಡಿಸದೆ, ಬಂಡವಾಳದ ಆಳ್ವಿಕೆ ವಿರುದ್ಧ ಕ್ರಾಂತಿಕಾರಿ ಆಕ್ರಮಣವಾಗಿ ರೂಪಾಂತರಗೊಳ್ಳುವುದಿಲ್ಲ.

ಇದೇ ನಮ್ಮೆಲ್ಲರ ಮುಂದಿರುವ ಇಂದಿನ ಮೊದಲ ಕರ್ತವ್ಯವಾಗಿದೆ.

ಮಾರ್ಕ್ಸ್‌ವಾದ ಮಾತ್ರವೇ "ವ್ಯಕ್ತಿನಿಷ್ಟ ಅಂಶ"ವನ್ನು ಬಲಪಡಿಸಲು ಸೈದ್ಧಾಂತಿಕ ಆಧಾರವನ್ನು ಮತ್ತು ತಾತ್ವಿಕ ಅಡಿಪಾಯವನ್ನೂ ಒದಗಿಸುತ್ತದೆ. ಇದು ವರ್ಗ ಹೋರಾಟವನ್ನು ತೀಕ್ಷ್ಣಗೊಳಿಸುತ್ತದೆ. ಮನುಕುಲದ ಭವಿಷ್ಯ ಸಮಾಜವಾದವೇ ಎಂದು ಖಚಿತ ಪಡಿಸುವ 21ನೇ ಶತಮಾನದ ಮಾರ್ಕ್ಸ್‌ವಾದ ಇದೇ. ●

JANASHAKTHI KANNADA VARA PATRIKE JUNE 18-24, 2018 Price: Rs. 10/- Date of Publication: 15 JUNE 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಗಾಗಿ ಕೆ.ಎಸ್.ಆರ್.ಟಿ.ಸಿ. ಮುಖ್ಯ ಕಚೇರಿ ಮುಂದೆ ಪ್ರತಿಭಟನೆ



ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಗಾಗಿ ಆಗ್ರಹಿಸಿ ಎಸ್.ಎಫ್.ಐ. ನಿಂದ ಜೂನ್ 15ರಂದು ಕೆ.ಎಸ್.ಆರ್.ಟಿ.ಸಿ. ಮುಖ್ಯ ಕಚೇರಿಯ ಮುಂದೆ ಪ್ರತಿಭಟನೆ ನಡೆಸಲಾಯಿತು.

ಕೆ.ಎಸ್.ಆರ್.ಟಿ.ಸಿ. ನಿರ್ದೇಶಕರಾದ ಶ್ರೀನಿವಾಸರವರು ಮನವಿ ಪತ್ರ ಸ್ವಿಕರಿಸಿ ರಾಜ್ಯ ಸರಕಾರಕ್ಕೆ ರವಾನೆ ಮಾಡುವುದಾಗಿ ಭರವಸೆ ನೀಡಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವಂತೆ ಆಗ್ರಹಿಸಿ ಎಸ್.ಎಫ್.ಐ.ನಿಂದ ಕಳೆದ ಹತ್ತು ವರ್ಷಗಳಿಂದ ನಿರಂತರ ಹೋರಾಟ, ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಸರಕಾರ ಮತ್ತು ತಮ್ಮ ಇಲಾಖೆಯ ಗಮನಕ್ಕೆ ತರುತ್ತಲೇ ಇದ್ದೇವೆ. ಹಿಂದೆ ಇದ್ದ ಕಾಂಗ್ರೆಸ್ ಸರಕಾರ ಕಳೆದ ಬಾರಿ ಮಂಡಿಸಿದ ಬಜೆಟ್ ನಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದವರೆಗೆ ಉಚಿತ ಬಸ್ ನೀಡುವುದಾಗಿ ರಾಜ್ಯ ಸರಕಾರ ಘೋಷಿಸಿತ್ತು. ಆದರೆ ಹೊಸದಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ – ಜೆಡಿಸ್ ಸಮ್ಮಿಶ್ರ ಸರಕಾರ ಉಚಿತ ಬಸ್ ಪಾಸ್ ಯೋಜನೆಯನ್ನು ರದ್ದು ಪಡಿಸಿ ಪೂರ್ಣ ಪ್ರಮಾಣದ ಹಣ ನೀಡಿ ವಿದ್ಯಾರ್ಥಿಗಳು ಬಸ್ ಪಾಸ್ ಪಡೆಯುವಂತೆ ಆದೇಶ ಹೊರಡಿಸಿದ್ದು ವಿದ್ಯಾರ್ಥಿ ವಿರೋಧಿ ಕ್ರಮವಾಗಿದೆ. 17.04.2018 ರಂದು ಕೆ.ಎಸ್.ಆರ್.ಟಿ.ಸಿ. ಇಲಾಖೆಯು ಸಭೆಯನ್ನು ನಡೆಸಿ "ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವ" ಕುರಿತು ಆರ್ಥಿಕ ಇಲಾಖೆಗೆ ಪತ್ರವನ್ನು ಕೂಡಾ ಬರೆದಿದೆ. ಬೇರೆ ರಾಜ್ಯಗಳಲ್ಲಿ ವಿದ್ಯಾರ್ಥಿಗಳಿಗೆ ಸುಲಭ ದರದಲ್ಲಿ ಬಸ್ ಪಾಸ್ ನೀಡಲಾಗುತ್ತಿದೆ. ತಮಿಳುನಾಡಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಬಸ್ ಪಾಸ್ ನೀಡಲಾಗುತ್ತಿದೆ. ಕೇರಳದಲ್ಲಿ ನಾಲ್ಕು ರೂ ಬಸ್ ಚಾರ್ಜ ಇದ್ದರೆ 1 ರೂ ಮಾತ್ರ ವಿದ್ಯಾರ್ಥಿಗಳು ನೀಡಬೇಕು. ಹರ್ಯಾಣ ರಾಜ್ಯದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ನೀಡಲಾಗುತ್ತಿದೆ. ಹಾಗಾಗಿ ಬಜೆಟ್ ನಲ್ಲಿ ಘೋಷಿಸಿದಂತೆ ರಾಜ್ಯದಲ್ಲಿಯೂ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಯೋಜನೆಯನ್ನು ಕೂಡಲೇ ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಅಧ್ಯಕ್ಷ ವಿ.ಅಂಬರೀಶ್ ಮಾತನಾಡಿ ವಿದ್ಯಾರ್ಥಿಗಳು ಬಸ್ ಗಳಲ್ಲಿ ಓಡಾಡುವಾಗ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಅಂತರ್ ರಾಜ್ಯ ಬಸ್ ಎಂದು ವಿದ್ಯಾರ್ಥಿಗಳು ಬಸ್ ಪ್ರವೇಶಿಸುವುದನ್ನು ನಿಷೇದಿಸಲಾಗಿದೆ, ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ-ಕಾಲೇಜು ಸಮಯಕ್ಕನುಸಾರವಾಗಿ ಬಸ್‌ಗಳ ಕೊರತೆ ಇದೆ. ಹಾಗಾಗಿ ಉಚಿತ ಬಸ್ ಪಾಸ್ ಯೋಜನೆ ಸೇರಿದಂತೆ ಸಮಗ್ರ ಸಾರಿಗೆ ಸಂಪರ್ಕ ಅಭಿವೃದ್ಧಿಗಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದೇವೆ ಎಂದರು.

ಈ ಕೆಳಗಿನ ಬೇಡಿಕೆಗಳನ್ನು ಒತ್ತಾಯಿಸಿದರು

1) ಎಲ್.ಕೆ.ಜಿ. ಯಿಂದ ಉನ್ನತ ಶಿಕ್ಷಣದವರೆಗೆ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಬೇಕು. ಇದನ್ನು ಖಾಸಗಿ ವ್ಯಕ್ತಿಗಳಿಗೂ ವಿಸ್ತರಿಸಬೇಕು
2) ಅಗತ್ಯವಿರುವ ವಿದ್ಯಾರ್ಥಿಗಳಿಗೆ ಬಸ್ ಪಾಸ್ ದೂರದ ಮಿತಿಯನ್ನು 60 ಕಿ.ಮಿ ಬದಲಿಗೆ 100 ಕಿ.ಮಿ ಹೆಚ್ಚಿಸಬೇಕು.
3) ಗ್ರಾಮೀಣ ಪ್ರದೇಶದಲ್ಲಿ ಬಸ್ ಸಂಪರ್ಕ ಇಲ್ಲದೆ ಪರದಾಡುವಂತಾಗಿದೆ ಹಾಗಾಗಿ ವಿದ್ಯಾರ್ಥಿಗಳ ಅಗತ್ಯಕ್ಕನುಸಾರವಾಗಿ ಸಾರಿಗೆ ಸಂಪರ್ಕ ಕಲ್ಪಿಸಬೇಕು.
4) ಅಂತರ್ ರಾಜ್ಯ ಬಸ್ ಎಂಬ ಬೇಧ ಮಾಡದೆ ಎಲ್ಲಾ ಬಸ್ ಗಳಲ್ಲಿ ಪ್ರಯಾಣಿಸಲು ಅವಕಾಶ ನೀಡಬೇಕು.
5) ಬಸ್‌ಗಳಲ್ಲಿ ವಿನಾ ಕಾರಣ ವಿದ್ಯಾರ್ಥಿಗಳನ್ನು ಅವಮಾನಿಸುವ ನಿರ್ವಾಹಕ ಮತ್ತು ಚಾಲಕರ ಮೇಲೆ ಕ್ರಮ ಜರುಗಿಸಬೇಕು.
6) ಬಸ್ ನಿಲ್ದಾಣಕ್ಕಿಂತ ಮುಂಚೆ 2 –3 ಕಿ.ಮಿ ಕಾಲೇಜು ಇರುವಂತೆ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಬಸ್ ನಿಲ್ದಾಣದ ವರೆಗೆ ವಿಸ್ತರಿಸಬೇಕು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ವಾಸುದೇವರೆಡ್ಡಿ, ಗಾಯತ್ರಿ, ವೆಂಕಟೇಶ್, ಶಿವಪ್ಪ, ಬಸವರಾಜ್, ಶಿವಾನಂದ್ ರಮೇಶ್ ಕೇಂದ್ರ ಸಮಿತಿ ಸದಸ್ಯೆ ರೇಣುಕಾ ಕಹಾರ್, ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ್ ಸೇರಿದಂತೆ ವಿದ್ಯಾರ್ಥಿಗಳಿದ್ದರು.

ಕಳೆದ ಕೆಲವು ದಿನಗಳಿಂದ ರಾಜ್ಯಾದ್ಯಂತ ಎಸ್.ಎಫ್.ಐ. ಘಟಕಗಳು ಹಲವು ಕೇಂದ್ರಗಳಲ್ಲಿ ಇದೇ ವಿಷಯದ ಕುರಿತು ವ್ಯಾಪಕ ಪ್ರತಿಭಟನೆ ನಡೆಸಿದ ವರದಿಗಳು ಬಂದಿವೆ. ರಾಯಚೂರು, ಕೊಪ್ಪಳ, ಹಾಸನ, ಬಳ್ಳಾರಿ, ಹಾನಗಲ್, ಬೀದರ, ಶಹಪುರ, ಯಲಬುರ್ಗ, ಗಂಗಾವತಿ, ರಾಣೆಬೆನ್ನೂರು, ಕೋಲಾರ, ಮುಳಬಾಗಲು ಗಳಲ್ಲಿ ವ್ಯಾಪಕ ಪ್ರತಿಭಟನೆ ನಡೆಸಿದ ವರದಿಗಳು ಬಂದಿವೆ.
















ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed, Published by **G.V. SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V. SRIRAMA REDDY**